ಕುವೆಂಪು ನಾಟಕಗಳಲ್ಲಿ ವರ್ಗ ಸಂಘರ್ಷ

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಸಲ್ಲಿಸಿದ ನಿಬಂಧ

ನಿಬಂಧಕಾರರು

ಹೆಚ್.ಎಂ.ಪುಟ್ಟಸ್ವಾಮಿಗೌಡ

ಕನ್ನಡ ಎಂ.ಫಿಲ್.ಅಭ್ಯರ್ಥಿ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ(ರಿ), ಮಂಡ್ಯ

ಮಾರ್ಗದರ್ಶಕರು

ಡಾ.ಬೋರೇಗೌಡ ಚಿಕ್ಕಮರಳಿ

ಹಿರಿಯ ಶ್ರೇಣಿ ಕನ್ನಡ ಉಪನ್ಯಾಸಕರು

ವಿಜಯ ಪ್ರಥಮ ದರ್ಜೆ ಕಾಲೇಜು

ಪಾಂಡವಪುರ-೫೭೧೪೩೪

ಕರ್ನಾಟಕ ಸಂಘ (ರಿ), ಮಂಡ್ಯ

ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

೨೦೦೭-೨೦೦೮

ಕುವೆಂಪು ನಾಟಕಗಳಲ್ಲಿ ವರ್ಗ ಸಂಘರ್ಷ

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಸಲ್ಲಿಸಿದ ನಿಬಂಧ

ನಿಬಂಧಕಾರರು

ಹೆಚ್.ಎಂ.ಪುಟ್ಟಸ್ವಾಮಿಗೌಡ

ಕನ್ನಡ ಎಂ.ಫಿಲ್.ಅಭ್ಯರ್ಥಿ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ(ರಿ), ಮಂಡ್ಯ

ಮಾರ್ಗದರ್ಶಕರು

ಡಾ.ಬೋರೇಗೌಡ ಚಿಕ್ಕಮರಳಿ

ಹಿರಿಯ ಶ್ರೇಣಿ ಕನ್ನಡ ಉಪನ್ಯಾಸಕರು

ವಿಜಯ ಪ್ರಥಮ ದರ್ಜೆ ಕಾಲೇಜು

ಪಾಂಡವಪುರ-೫೭೧೪೩೪

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

೨೦೦೭-೨೦೦೮

ಮಾರ್ಗದರ್ಶಕರ ಘೋಷಣಾ ಪತ್ರ

ಶ್ರೀ ಹೆಚ್.ಎಂ.ಪುಟ್ಟಸ್ವಾಮಿಗೌಡ ಅವರು 'ಕುವೆಂಪು ನಾಟಕಗಳಲ್ಲಿ ವರ್ಗ ಸಂಘರ್ಷ' ಎಂಬ ವಿಷಯ ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್.ಪದವಿಗಾಗಿ ಸಿದ್ಧಪಡಿಸಿದ ಸ್ವತಂತ್ರ ನಿಬಂಧ ಇದಾಗಿದೆ. ಇದನ್ನು ಮೌಲ್ಯ ಮಾಪನಕ್ಕಾಗಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ನಾನು ಸಮ್ಮತಿಸಿದ್ದೇನೆಂದು ಈ ಮೂಲಕ ಪ್ರಮಾಣೀಕರಿಸುತ್ತಿದ್ದೇನೆ.

ಸೆಪ್ಟೆಂಬರ್ ೧೦, ೨೦೦೮

ಡಾ. ಬೋರೇಗೌಡ ಚಿಕ್ಕಮರಳಿ
ಹಿರಿಯ ಶ್ರೇಣಿ ಕನ್ನಡ ಉಪನ್ಯಾಸಕರು
ವಿಜಯ ಪ್ರಥಮ ದರ್ಜೆ ಕಾಲೇಜು
ಪಾಂಡವಪುರ-೫೭೧೪೩೪

ಡಾ|| ಬೋರೇಗೌಡ
ಹಿರಿಯ ಶ್ರೇಣಿ ಉಪನ್ಯಾಸಕರು
ಕನ್ನಡ ವಿಭಾಗ,
ವಿಜಯ ಪ್ರಥಮ ದರ್ಜೆ ಕಾಲೇಜು
ಪಾಂಡವಪುರ - ೫೭೧೪೩೪

ಅಭ್ಯರ್ಥಿಯ ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೭-೦೮ನೇ ಸಾಲಿಗೆ ಎಚ್.ಎಂ.ಪುಟ್ಟಸ್ವಾಮಿಗೌಡ ಆದ ನಾನು ಎಂ.ಫಿಲ್.ಅಭ್ಯರ್ಥಿಯಾಗಿ ಪ್ರವೇಶ ಪಡೆದಿರುತ್ತೇನೆ. ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **'ಕುವೆಂಪು ನಾಟಕಗಳಲ್ಲಿ ವರ್ಗ ಸಂಘರ್ಷ '** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ.ಬೋರೇಗೌಡ ಚಿಕ್ಕಮರಳಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತಿದ್ದೇನೆ.

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್.ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ದಿನಾಂಕ : ೧೦.೦೯.೦೮
ಸ್ಥಳ : ಮಂಡ್ಯ

(ಹೆಚ್.ಎಂ.ಪುಟ್ಟಸ್ವಾಮಿಗೌಡ)
ಕನ್ನಡ ಎಂ.ಫಿಲ್.ವಿದ್ಯಾರ್ಥಿ
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ, ಮಂಡ್ಯ

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಮಹತ್ವ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕುವೆಂಪು ೧೯೦೪ ಡಿಸೆಂಬರ್ ೨೯ ರಂದು ಜನಿಸಿದರು. ಇವರ ಪೂರ್ಣ ಹೆಸರು "ಕುಪ್ಪಳ್ಳಿ ವೆಂಕಟಪ್ಪಗೌಡ ಪುಟ್ಟಪ್ಪ". ಇವರ ಮೊದಲ ವಿದ್ಯಾಭ್ಯಾಸ ಅವರ ಕುಪ್ಪಳ್ಳಿಯ ಮನೆಯಲ್ಲೇ ಖಾಸಗಿ ಮೇಷ್ಟರ ಮೂಲಕ ಪ್ರಾರಂಭವಾಗಿ ಮಾಧ್ಯಮಿಕ ಮತ್ತು ಲೋಯರ್ ಸೆಕೆಂಡರಿಯನ್ನು ತೀರ್ಥಹಳ್ಳಿಯಲ್ಲಿ ಮುಗಿಸಿ, ನಂತರದ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಪಡೆದರು. ಕಾಲೇಜಿನಲ್ಲಿ ಓದುತ್ತಿರುವಾಗಲೇ ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷರಾಗಿದ್ದರು (೧೯೨೮). ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಅವರ ಪ್ರಪ್ರಥಮ ಕವನ ಸಂಕಲನ "ಕೊಳಲು".

ಕುವೆಂಪುರವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ (೧೯೫೬) ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ೧೯೫೮ರಲ್ಲಿ ರಾಷ್ಟ್ರಪತಿಗಳಿಂದ 'ಪದ್ಮಭೂಷಣ' ಪ್ರಶಸ್ತಿಯನ್ನು ಮತ್ತು ರಾಷ್ಟ್ರಕವಿ ಪ್ರಶಸ್ತಿಯನ್ನು ರಾಜ್ಯ ಸರ್ಕಾರದಿಂದ ಸ್ವೀಕರಿಸಿದರು.

ಇವರು 'ಶ್ರೀ ರಾಮಾಯಣ ದರ್ಶನಂ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ(೧೯೫೫) ಹಾಗೂ 'ಜ್ಞಾನಪೀಠ' ಪ್ರಶಸ್ತಿ(೧೯೬೮)ಯನ್ನು ಪಡೆದಿದ್ದಾರೆ. ಇದಲ್ಲದೆ ತಾವು ಕನ್ನಡ ಭಾಷೆ, ಸಾಹಿತ್ಯಗಳಿಗೆ ಸಲ್ಲಿಸಿದ ಸೇವೆಗಾಗಿ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ೧೯೮೮ರಲ್ಲಿ ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ (೧೯೯೨) ಮತ್ತು ನಾಡೋಜ ಪ್ರಶಸ್ತಿಯನ್ನು ಮರಣೋತ್ತರವಾಗಿ (೧೯೯೫) ಪಡೆದಿದ್ದಾರೆ. ರಾಷ್ಟ್ರಕವಿ, ಪದ್ಮಭೂಷಣ ಎಂದೆಲ್ಲಾ ಪ್ರಖ್ಯಾತಿ ಪಡೆದಿದ್ದ ಕುವೆಂಪುರವರು ೧೯೯೪ರಲ್ಲಿ ನಿಧನ ಹೊಂದಿದರು.

ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಬಂದ ನಂತರ ಅವರಿಗೆ ಇನ್ನೂ ಹೆಚ್ಚಿನ ಆಧ್ಯಾತ್ಮಿಕ, ತಾತ್ವಿಕ, ಸಾಮಾಜಿಕ ತಾರತಮ್ಯಗಳ ವಿರುದ್ಧ ಹೋರಾಡಲು ದೊರೆತ ಸ್ಫೂರ್ತಿಯ ಸೆಲೆಗಳೆಂದರೆ ರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರು ಎಂಬುದನ್ನು ಅವರ ಕೃತಿಗಳ ಮೂಲಕವೇ ತಿಳಿಯಬಹುದಾಗಿದೆ.

ನವೋದಯ ಕಾಲದ ಶ್ರೇಷ್ಠ ಕವಿಗಳಲ್ಲಿ ಕುವೆಂಪು ಒಬ್ಬರು. ವೈವಿಧ್ಯಮಯವಾದ, ಎತ್ತರದ ಅನೇಕ ಸೃಜನಶೀಲ ಪ್ರತಿಭೆಗಳನ್ನು ನಾವು ಕಾಣಬಹುದಾದರೂ ಕುವೆಂಪು ಅವರಿಗಿರುವ ಸಾಂಸ್ಕೃತಿಕ ಮಹತ್ವ ಅನನ್ಯವಾದುದು, ವಿಶಿಷ್ಟವಾದುದು. ಸಾಹಿತ್ಯ ಕೃತಿಗಳ ಮೂಲಕ ಕುವೆಂಪು ತಮ್ಮ ಉತ್ಸಾಹವನ್ನು ಕಿರಿಯರಲ್ಲಿ ತುಂಬುತ್ತಿದ್ದರು. ಮಹಾರಾಜರ ಜೂಬಲಿ ಮಹೋತ್ಸವದಲ್ಲಿ ತಮ್ಮ ರಾಜಭಕ್ತಿಯನ್ನೂ, ದೇಶಭಕ್ತಿಯನ್ನೂ 'ಬೆಳ್ಳಿಯ ಹಬ್ಬದ ಕಬ್ಬದ ಬಳ್ಳಿ' ಎಂಬ ಗೀತದಲ್ಲಿ ಪ್ರಕಟಿಸಿರುತ್ತಾರೆ. ಸಾಹಿತ್ಯ ಬದುಕಿನ ಆರಂಭದಲ್ಲಿ ಕುವೆಂಪು ತಮ್ಮ ಸೃಜನಶೀಲ ಪ್ರತಿಭೆಯನ್ನು ನಾಟಕ ಪ್ರಕಾರದಲ್ಲಿ ಗಂಭೀರವಾಗಿ ತೊಡಗಿಸಿಕೊಂಡಂತೆ ತೋರುತ್ತದೆ. ಕುವೆಂಪುರವರ ವೈಚಾರಿಕ ಆಕೃತಿ ಅವರ ನಾಟಕಗಳಲ್ಲಿ ಸ್ಪಷ್ಟರೂಪು ಪಡೆದಿದೆ. ಕುವೆಂಪುರವರ ಸಮಗ್ರ ಸಾಹಿತ್ಯವನ್ನು ಗಮನಿಸಿದಾಗ ಅವರ ನಾಟಕ ಸಾಹಿತ್ಯಕ್ಕೆ ಒಂದು ಮಹತ್ವದ ಸ್ಥಾನವಿರುವುದು ತಿಳಿಯುತ್ತದೆ. ಅವರ ನಾಟಕಗಳಿಗೆ ಕನ್ನಡ ನಾಟಕ ಸಾಹಿತ್ಯದ ಇತಿಹಾಸದಲ್ಲಿ ಒಂದು

ವಿಶಿಷ್ಟವಾದ ಸ್ಥಾನವಿದೆ. ಅವರ ನಾಟಕ ಸಾಹಿತ್ಯದಲ್ಲಿ ಪ್ರಗತಿಪರ ವೈಚಾರಿಕ ಪ್ರಜ್ಞೆ ದಟ್ಟವಾಗಿ ರೂಪುಗೊಂಡಿದೆ.

ಅಸಮಾನತೆಯ ಬಗೆಗೆ ನಿರಂತರವಾಗಿ, ಪ್ರಜ್ಞಾಪೂರ್ವಕವಾಗಿ ಪ್ರತಿಭಟನೆಯನ್ನು ತೋರಿದ ಕುವೆಂಪು ಅವರು ಸಾಂಸ್ಕೃತಿಕ ಚಿಂತಕರಾಗಿ, ಕವಿಯಾಗಿ, ಮನೋವಿಜ್ಞಾನಿಯಾಗಿ ಜನಮನವನ್ನು ಮುಟ್ಟಿದ್ದಾರೆ.

ಅಂದಿನ ಮಲೆನಾಡಿನ ಪರಿಸ್ಥಿತಿಗೆ ಕುವೆಂಪುರವರ ಕ್ರಾಂತಿಕಾರಿ ವೈಚಾರಿಕ ದೃಷ್ಟಿ ಅನಿವಾರ್ಯವಾಗಿತ್ತು. ಅಲ್ಲಿಯ ಒಕ್ಕಲಿಗರು ಇತರ ಶೂದ್ರ ವರ್ಗದವರಂತೆ ಬ್ರಾಹ್ಮಣರೊಡ್ಡಿದ ಮತಾಚಾರದ ಮೌಢ್ಯದ ಬೋನಿನೊಳಗೆ ಇಲಿಗಳಾಗಿದ್ದರು. ಇಲ್ಲಿಂದ ಬಿಡಿಸಲು ಕ್ರೈಸ್ತ ಪಾದ್ರಿಗಳು ಪ್ರಯತ್ನ ಪಡುತ್ತಿದ್ದರು. ಶೂದ್ರರು ಬ್ರಾಹ್ಮಣ ಮೌಢ್ಯಗಳಿಂದ ಹೊರಬಂದರೆ ಕ್ರೈಸ್ತರ ಮೌಢ್ಯಗಳಿಗೆ ಹೊಂದಿಕೊಳ್ಳಬೇಕಾಗಿತ್ತು. ಈ ಎರಡೂ ಪುರೋಹಿತಶಾಹಿಗಳೇ! ರೂಪದಲ್ಲಿ ಬೇರೆ ಬೇರೆಯಾಗಿದ್ದರೂ ಸ್ವರೂಪದಲ್ಲಿ ಒಂದೇ ತರಹದ್ದಾಗಿದ್ದವು: ದೇವರು, ಧರ್ಮ, ಪಾಪ, ಪುಣ್ಯ, ಸ್ವರ್ಗ, ನರಕ ಇತ್ಯಾದಿ ಆಧ್ಯಾತ್ಮಿಕ ವೇಷದ ಸರಕುಗಳಾಗಿದ್ದವು. ಈ ಪರಿಸ್ಥಿತಿಯಲ್ಲಿ ಕುವೆಂಪುರವರು ಇಡೀ ಶೂದ್ರ ಸಮುದಾಯವನ್ನು ಹಳೆಯ ಮತ ಮೌಢ್ಯ ಸಂಕುಲಗಳಿಂದ ಪಾರು ಮಾಡಿ, ಅವರಿಗೆ ವೈಚಾರಿಕತೆಯನ್ನೂ, ವೈಜ್ಞಾನಿಕತೆಯನ್ನೂ ನೀಡಿ ನಿಜವಾದ ಉಪನಿಷತ್ ಪ್ರಣೀತವಾದ ವೇದಾಂತದ ಆಧ್ಯಾತ್ಮಶ್ರೀಯೆಡೆಗೆ ಕರೆದೊಯ್ದರು.

ಇಂಗ್ಲಿಷ್‌ನ 'ರೊಮ್ಯಾಂಟಿಸಿಸಮ್' ಭಾರತೀಯ ವೇದಾಂತದೊಡನೆ ಸಮರಸವಾಗಿ ಸೇರಿಕೊಂಡ ಒಂದು ಅದ್ಭುತವನ್ನು ಕುವೆಂಪು ಕೃತಿಗಳಲ್ಲಿ ಕಾಣಬಹುದು. ಅನೇಕ ಭಾರತೀಯ ಸಂಸ್ಕೃತಿಗಳಲ್ಲಿದ್ದ ಶ್ರದ್ಧೆ, ಆಚಾರ, ವಿಚಾರಗಳ ಬಗ್ಗೆ ಆಂಗ್ಲ ಭಾಷೆಯ ಮುಖಾಂತರವೇ ಆಧ್ಯಾತ್ಮಿಕ, ವಿಚಾರಾತ್ಮಕ ಮತ್ತು ತಾತ್ವಿಕ ವಿಚಾರಗಳ ಬಗ್ಗೆ ಸ್ವಾಮಿ ವಿವೇಕಾನಂದರಂತಹ ಮಹಾನ್ ವ್ಯಕ್ತಿಗಳ ವಿಚಾರಗಳನ್ನು ಇಂಗ್ಲಿಷ್ ಭಾಷೆಯ ಮೂಲಕವೇ ತಿಳಿದುಕೊಂಡಿರುವುದನ್ನು ಕಾಣಬಹುದು. ಕುವೆಂಪುರವರು ತಾನು ಶಿವತತ್ತ್ವದಿಂದ ಅಭಿನ್ನ ಎಂಬುದನ್ನು ಸಾರಿ ಆತ್ಮದ ಔನ್ನತ್ಯ ನೈರ್ಮಲ್ಯ ಗೌರವಗಳನ್ನು ಮನ ಮುಟ್ಟುವಂತ ಹೇಳಿದರು. ಮಹರ್ಷಿಗಳ ವೇದಾಂತ ವಾಣಿ ಕುವೆಂಪುರವರ ಪ್ರಜ್ಞೆಗೆ ಪ್ರವೇಶಿಸಿ ಹಿಂದೂ ಧರ್ಮದಲ್ಲಿದ್ದ ಅನಿಷ್ಟಗಳನ್ನು ತೊಲಗಿಸಲು ಮುಂದಾದುದನ್ನು ಈ ನಿಬಂಧದಲ್ಲಿ ಗುರುತಿಸಲಾಗಿದೆ.

ಬಸವಣ್ಣನವರು ಹನ್ನೆರಡನೇ ಶತಮಾನದಲ್ಲಿಯೇ ಜಾತಿ ಪದ್ಧತಿ, ಪುರೋಹಿತಶಾಹಿಯ ವಿರುದ್ಧ 'ಅಗ್ನಿ ಖಡ್ಗವನಾಂತು ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ ಆಧ್ಯಾತ್ಮ ಕ್ರಾಂತಿ ವೀರ'ರಾಗಿ ಹೇಗೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಹೋರಾಡಿದರೋ ಹಾಗೆ, ಕುವೆಂಪು ಇಪ್ಪತ್ತನೆಯ ಶತಮಾನದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಕಾವ್ಯ ಕೋವಿಯನಾಂತು ಉಸಿರು ಇರುವವರೆಗೆ ಹೋರಾಡಿದರು.

ಮನುಧರ್ಮಶಾಸ್ತ್ರ ಹೇಳುತ್ತಿದ್ದ ಸಾಮಾಜಿಕ ತಾರತಮ್ಯವನ್ನು ಅಂದರೆ ಪುರೋಹಿತಶಾಹಿಯೇ ಶ್ರೇಷ್ಠ, ಪುರೋಹಿತರ ಮೂಲಕವೇ ದೇವರನ್ನು ಕಾಣಬೇಕು ಎಂಬುದನ್ನು ವಿರೋಧಿಸಿ ಕುವೆಂಪುರವರು

ತಮ್ಮ ನಾಟಕಗಳಲ್ಲಿ 'ಕಾಯಕ ತತ್ವ' ದ ಮೂಲಕವೇ ದೇವರನ್ನು ಕಾಣಬಹುದು ಎಂಬುದನ್ನು ತೋರಿಸಿಕೊಟ್ಟಿರುವುದನ್ನು ಕಾಣಬಹುದು. ಎಲ್ಲಾ ಮತ ಧರ್ಮಗಳೂ ಮುಖ್ಯ, ಎಲ್ಲರೂ ಅಧ್ಯಾತ್ಮ ಸಾಧನೆಗೆ, ಸಾಮಾಜಿಕ ಸಮಾನತೆಗೆ ಅರ್ಹರು ಎಂಬುದನ್ನು ಸಿದ್ಧಾಂತೀಕರಿಸಿರುವುದನ್ನು ಅವರ ನಾಟಕಗಳಲ್ಲಿ ಕಾಣಬಹುದಾಗಿದೆ.

ವರ್ಣಾಶ್ರಮವನ್ನು ತಿದ್ದುವುದಲ್ಲ, ಸಂಪೂರ್ಣವಾಗಿ ತೊಲಗಿಸಬೇಕು. ಮತ ತೊಲಗಿ ಅಧ್ಯಾತ್ಮ ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು. ಮತ ಮನುಜ ಮತವಾಗಬೇಕು, ಪಥ ವಿಶ್ವಪಥವಾಗಬೇಕು, ಮನುಷ್ಯ ವಿಶ್ವಮಾನವನಾಗಬೇಕು ಎಂದಿದ್ದಾರೆ.

ಪಂಪನ ಕಾಲದಲ್ಲಿಯೇ ಕಂಡು ಬಂದ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ಕುವೆಂಪುರವರು ತಮ್ಮ "ಆಗು ನೀ ಅನಿಕೇತನ.........." ಎಂಬ ವಿಶ್ವಮಾನವ ಸಂದೇಶದಲ್ಲಿ ಸಾರುತ್ತ 'ನೂರು ಮತದ ಹೊಟ್ಟ ತೂರಿ ಎಲ್ಲ ತತ್ವದೆಲ್ಲೆ ಮೀರಿ ನಿರ್ದಿಗಂತವಾಗಿ ಏರಿ' ಎಂಬುದನ್ನು ಹೇಳುತ್ತ ತಮ್ಮ ಕವಿತೆಯಲ್ಲಿ ಹೀಗೆ ಹೇಳುತ್ತಾರೆ.

ಯಾವ ಮತದವನಲ್ಲ
ಎಲ್ಲ ಮತದವನು
ಯಾವ ಪಂಥವು ಇಲ್ಲ
ಬಹು ಪಂಥದವನು
ನಾನು ಉಮ್ಮರನಲ್ಲ
ಚಾರ್ವಾಕನೂ ಅಲ್ಲ
ಎಲ್ಲ ಬಿಡಲೂ ಬಲ್ಲೆ
ಎಲ್ಲ ಹಿಡಿಯಲೂ ಬಲ್ಲೆ

ಎಂಬ ಕವಿತೆಯನ್ನು ಪ್ರಾರಂಭದಲ್ಲೇ ಬರೆದಿದ್ದರೂ ಅದೇ ಜೀವನ ದೃಷ್ಟಿ ವೃದ್ಧಿಯಾಗಿ ವಿಶ್ವಮಾನವ ಗೀತೆಯಲ್ಲಿ ಪೂರ್ಣತ್ವ ಪಡೆದುದನ್ನು ಕಾಣಬಹುದು.

ಅರಸೊತ್ತಿಗೆ, ಪುರೋಹಿತ ಶಾಹಿಯ ದುಷ್ಟ ಮೈತ್ರಿ ಕೊನೆಗಾಣಬೇಕು. ಅದನ್ನು ಕುವೆಂಪು ಈ ರೀತಿ ಹೇಳುತ್ತಾರೆ:

ಕಡೆಯ ಪುರೋಹಿತನ ಕರುಳು
ಕಡೆಯ ದೊರೆಯ ಕೊರಳಿಗುರುಳು
ಬಿಗಿದ ಹೊರತು ಬರಿಯ ನೆರಳು

ಸ್ವಾತಂತ್ರ್ಯದ ಸ್ವರ್ಗವೂ ಎಂಬುದನ್ನು ಕುವೆಂಪು ನಾಟಕ ಕೃತಿಗಳಲ್ಲಿ ಕಾಣಬಹುದು.

ಅವಿಚಾರ, ಮೂಢನಂಬಿಕೆ ಅವೈಜ್ಞಾನಿಕತೆಯ ತಾಯಿ ಬೇರು. ಕುವೆಂಪು ತಮ್ಮ ಇಡೀ ಜೀವಮಾನ ಈ ಮತಾಂಧತೆ, ಮತಭ್ರಾಂತಿ, ಮತ ಮೌಢ್ಯಗಳ ವಿರುದ್ಧ ಹೋರಾಡಿ ಮೇಲುಸ್ತರಕ್ಕೆ ಬಂದ ಸನ್ನಿವೇಶಗಳನ್ನು ತಿಳಿಯಬಹುದು.

ಭಾರತೀಯ ಸಮಾಜದಲ್ಲಿ ಚಾತುರ್ವರ್ಣ ಪದ್ಧತಿಯು ಮುಖ್ಯವಾಗಿ ಕಾಣಿಸಿಕೊಳ್ಳುತ್ತದೆ. ಜಾತಿ ಪದ್ಧತಿಯು ಹುಟ್ಟಿಕೊಂಡಿದ್ದು ಜನರು ಮಾಡುವ ಕಸುಬುಗಳ ಆಧಾರದ ಮೇಲೆ. ಆದರೆ ಆ ಜಾತಿ ಪದ್ಧತಿಯೇ ಒಟ್ಟು ಸಮಾಜವನ್ನು ನಿಯಂತ್ರಿಸುವ ಮಟ್ಟಕ್ಕೆ ಹೋಗುತ್ತದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ಜಾತಿಗಳು ಅವರವರ ಕುಲ ಕಸುಬನ್ನೇ ಆಧಾರವಾಗಿಟ್ಟುಕೊಂಡು ರೂಪುಗೊಂಡಂತಹವುಗಳು. ಸಮಾಜದ ಕೆಳಸ್ತರದ ಶೂದ್ರ ಜನಾಂಗದಲ್ಲಿ ಹುಟ್ಟಿ ಶೂದ್ರ ಜಾತಿಗಿಂತ ಮೇಲು ವರ್ಗದ ಜಾತಿಯವರಲ್ಲಿದ್ದ ರೀತಿಗಳನ್ನು ಅಂದರೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಇತ್ಯಾದಿ ರಂಗಗಳಲ್ಲಿ ಮೇಲು ವರ್ಗದವರೇ ಅಧಿಕಾರ ನಡೆಸುತ್ತಿದ್ದ ಅದರಲ್ಲೂ ಪುರೋಹಿತಶಾಹಿ ನಡೆಸಿಕೊಳ್ಳುತ್ತಿದ್ದ ರೀತಿಗಳನ್ನು ಕುವೆಂಪು ವಿರೋಧಿಸಿದರು. ತಮ್ಮ ನಾಟಕಗಳಲ್ಲಿ ತಂದಿರುವ ವರ್ಗವ್ಯವಸ್ಥೆಯಲ್ಲಿ ಮೇಲು ವರ್ಗದವರ ಮೇಲೆ ಸಿಡಿದೇಳುವ ಸನ್ನಿವೇಶಗಳನ್ನು ತಿಳಿಯಬಹುದಾಗಿದೆ. ಇಲ್ಲಿ ಕಂಡುಬರುವ ಮೇಲುಸ್ತರದ ಪಾತ್ರಗಳು ಮತ್ತು ಆ ಪಾತ್ರಗಳ ಜೊತೆ ಜೊತೆಯಲ್ಲೇ ಕೆಳವರ್ಗದವರ ಪಾತ್ರಗಳನ್ನು ತಂದು ಆ ಪಾತ್ರಗಳ ಬೌದ್ಧಿಕ ಸಂಘರ್ಷದ ಮೂಲಕವೇ ಕೆಳವರ್ಗದವರ ಸಾಮಾಜಿಕ ಅಂತಃಸತ್ವವನ್ನು ಹೆಚ್ಚಿಸಿರುವುದನ್ನು ತಿಳಿಯಬಹುದಾಗಿದೆ.

ಹೊಸ ಸಮಾಜದ ನಿರ್ಮಾಣ ಕಾರ್ಯದಲ್ಲಿ ಗಾಂಧಿ ಮೊದಲಾದವರ ತತ್ವ ಚಿಂತನೆಗಳಿಂದ ಪ್ರಭಾವಿತರಾದ ಕುವೆಂಪು ಶ್ರಮಿಕರ ಪರವಾದ ಸ್ವತಂತ್ರವಾದ ನಿಲುವುಗಳನ್ನು ಸಾಹಿತ್ಯದ ಮೂಲಕ ಎಲ್ಲರಿಗೂ ತಿಳಿಯುವ ಹಾಗೆ ಮಾಡಿದ್ದಾರೆ.

ಶೋಷಿತ ವರ್ಗದ ಶ್ರೀ ಸಾಮಾನ್ಯರ ಸಂಪ್ರದಾಯ ಬದ್ಧತೆಯ ವಿರುದ್ಧ ಸಿಡಿದೇಳುವ ಕನ್ನಡ ಆಧುನಿಕ ಸಾಹಿತ್ಯದ ಬಹುತೇಕ ಎಲ್ಲಾ ಚಳುವಳಿಗಳು (ನವೋದಯ, ಪ್ರಗತಿಶೀಲ, ನವ್ಯ, ದಲಿತ ಹಾಗೂ ಬಂಡಾಯ) ಕುವೆಂಪು ಅವರ ಸಾಹಿತ್ಯದಿಂದ ನೇರವಾದ ಇಲ್ಲವೇ ಪರೋಕ್ಷವಾದ ಪ್ರೇರಣೆ ಪಡೆದಿವೆ ಎಂದು ಹೇಳಬಹುದು.

ಅಸ್ಪೃಶ್ಯತೆಯ ಮಡಿವಂತಿಕೆಯ ಭಾವಗಳನ್ನು ಬೆಳೆಸಿದ ಪುರೋಹಿತಶಾಹಿಯ ವಿರುದ್ಧದ ನಿಲುವುಗಳನ್ನು ಕುವೆಂಪು ಅವರ ನಾಟಕಗಳಲ್ಲಿ ತಿಳಿಯಬಹುದಾಗಿದೆ. ಸಾಮಾಜಿಕ ಅನಿಷ್ಟಗಳ ಬಗ್ಗೆ ಕುವೆಂಪುರವರಿಗೆ ಇರುವ ಎಚ್ಚರದಲ್ಲಿ, ರೂಢಿಗತ ಸಂಪ್ರದಾಯ ಕಟ್ಟುಕಟ್ಟಳೆಯಿಂದ ಘಟಿಸಬಹುದಾದ ಅನಾಹುತಗಳ ವಿರುದ್ಧ ಬಂಡೇಳುವ ಅವರ ಪ್ರವೃತ್ತಿಯಲ್ಲಿ ನಿಜವಾದ ಅರ್ಥದ ಮಾನವನನ್ನು ಬದುಕಿನ ಪ್ರೇಮಿಯನ್ನು ನಾಟಕಗಳಲ್ಲಿ ನೋಡಬಹುದಾಗಿದೆ.

ಕುವೆಂಪುರವರ ನಾಟಕಗಳಲ್ಲಿ ಕಂಡುಬರುವ ನಿಲುವುಗಳು ಒಂದು ವರ್ಗಕ್ಕೆ, ಒಂದು ಧರ್ಮಕ್ಕೆ, ಒಂದು ಕಾಲಕ್ಕೆ, ಒಂದು ದೇಶಕ್ಕಷ್ಟೇ ಸೀಮಿತವಾಗಿರುವುದಿಲ್ಲವೆಂಬುದನ್ನು ಮತ್ತು ಭೂತ, ವರ್ತಮಾನ, ಭವಿಷ್ಯತ್ ಕಾಲಗಳಿಗೂ ಅನ್ವಯವಾಗುವಂತಹ ಸಾಮಾಜಿಕ ಕಾಳಜಿಯನ್ನು ಇಲ್ಲಿ ಗುರುತಿಸಬಹುದಾಗಿದೆ.

ಕುವೆಂಪು ಸಾಹಿತ್ಯ ರಚನೆಯಲ್ಲಿ ನಾಟಕ ಸಾಹಿತ್ಯವೂ ಪ್ರಮುಖ ಪ್ರಕಾರವಾಗಿ ಕಂಡುಬರುತ್ತದೆ. ಅವರು ರಚಿಸಿರುವ ಹದಿನಾಲ್ಕು ನಾಟಕಗಳನ್ನು ವಸ್ತು ರಚನೆಯ ಆಧಾರದ ಮೇಲೆ ಈ ರೀತಿ ವಿಭಾಗಿಸಬಹುದು.

೧. ಮಕ್ಕಳ ನಾಟಕಗಳು	-	ನನ್ನ ಗೋಪಾಲ (೧೯೩೦)
		ಮೋಡಣ್ಣನ ತಮ್ಮ (೧೯೨೬)
೨. ಸಾಮಾಜಿಕ ನಾಟಕಗಳು	-	ಜಲಗಾರ (೧೯೨೮)
		ಬಲಿದಾನ (೧೯೪೮)
೩. ಪೌರಾಣಿಕ ನಾಟಕಗಳು	-	ಬೆರಳ್‌ಗೆ ಕೊರಳ್ (೧೯೪೭)
		ಶ್ಮಶಾನ ಕುರುಕ್ಷೇತ್ರಂ (೧೯೩೧)
		ಶೂದ್ರ ತಪಸ್ವಿ (೧೯೪೪)
		ಚಂದ್ರಹಾಸ (೧೯೬೩)
		ಯಮನ ಸೋಲು(೧೯೨೮)
		ವಾಲ್ಮೀಕಿಯ ಭಾಗ್ಯ (೧೯೩೧)
೪. ಐತಿಹಾಸಿಕ ನಾಟಕಗಳು	-	ಮಹಾರಾತ್ರಿ (೧೯೩೧)
		ರಕ್ತಾಕ್ಷಿ (೧೯೩೨)
		ಬಿರುಗಾಳಿ (೧೯೩೦)
		ಕಾನೀನ (೧೯೭೪)

ಈ ಎಲ್ಲಾ ನಾಟಕಗಳ ಕಥಾವಸ್ತುಗಳು ಬೇರೆ ಬೇರೆಯಾಗಿವೆ. ಜಾತಿ, ಸಂಪ್ರದಾಯ, ಸಾಮಾಜಿಕ ಸಂಘರ್ಷದ ಎಳೆಗಳನ್ನು ಒಳಗೊಂಡ ವಸ್ತುವನ್ನು ಆಧರಿಸಿ ರಚಿಸಿದ ಜಲಗಾರ, ಬೆರಳ್‌ಗೆ ಕೊರಳ್, ಶೂದ್ರ ತಪಸ್ವಿ ನಾಟಕಗಳಲ್ಲಿ ವರ್ಗ ಸಂಘರ್ಷದ ಪ್ರಮುಖ ಆಯಾಮಗಳನ್ನು ಕಾಣಬಹುದು.

ವೈದಿಕ ಧರ್ಮದ ಕರ್ಮ ಸಿದ್ಧಾಂತ, ಭಾರತದ ಧಾರ್ಮಿಕ ನವೋದಯಕ್ಕೆ ಕಾರಣ ಪುರುಷರಾದ ರಾಮಕೃಷ್ಣ ಪರಮಹಂಸರು, ವಿವೇಕಾನಂದರ ವಿಚಾರಗಳು, ಗಾಂಧೀವಾದ ಇವೆಲ್ಲಾ ಕುವೆಂಪು ನಾಟಕಗಳ ತಾತ್ವಿಕತೆಯನ್ನು ಪ್ರಭಾವಿಸಿರುವುದನ್ನು ಇಲ್ಲಿ ಗಮನಿಸಬಹುದು.

ಶೋಷಿತರ, ಶ್ರಮಿಕರ ಬಗ್ಗೆ ಕಾಳಜಿ ಕುವೆಂಪುರವರು ಪ್ರಧಾನ ಆಶಯ. ಸ್ಮೃತಿ, ಶೃತಿಗಳ ಕಾಲದಿಂದಲೂ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅನಿಷ್ಟ ಪದ್ಧತಿಗಳನ್ನು ಕುವೆಂಪು ಸಾಹಿತ್ಯದಲ್ಲಿ ಗುರುತಿಸಲು ಸಾಧ್ಯವಾಗುತ್ತದೆ ಮತ್ತು ಆ ಅನಿಷ್ಟ ಪದ್ಧತಿಗಳ ನಿರ್ಮೂಲನೆಗೆ ಹೋರಾಡಿದ ರೀತಿ ನೀತಿಗಳನ್ನು ಇವರ ಸಾಹಿತ್ಯ ಕೃತಿಗಳಲ್ಲಿ ಗುರುತಿಸಬಹುದು.

ಮಲೆನಾಡಿನ ಪರಿಸರ, ಕೌಟುಂಬಿಕ ವಾತಾವರಣ, ಅಸ್ಪೃಶ್ಯತೆ ನಿವಾರಣಾ ಕ್ರಮ, ಹೊಸ ಸಮಾಜ ಕಟ್ಟುವ ಧೋರಣೆ, ಸಾಮಾಜಿಕ ವಿಚಾರಗಳ ಬಗ್ಗೆ ಇವರ ಸಾಹಿತ್ಯ ಕೃತಿಗಳಲ್ಲಿ ಗಾಢವಾದ ಆಲೋಚನೆಗಳಿವೆ. ಸಾಮಾಜಿಕವಾಗಿ ಅಸ್ಪೃಶ್ಯನೆಂದು ಪರಿಗಣಿತನಾಗಿರುವವನು ಇಲ್ಲಿ ಶಿವನಾಗಿರುವುದನ್ನು ಕಾಣಬಹುದು. ಇವರ ನಾಟಕಗಳಲ್ಲಿ ಜಾತಿ ಮತ್ತು ವೃತ್ತಿ ಆಧಾರಿತ ಶ್ರೇಣೀಕರಣ ವ್ಯವಸ್ಥೆಯನ್ನು ನಿರಾಕರಿಸುವ ಮತ್ತು ಜಾತಿ, ಮತಗಳ ಎಲ್ಲೆಯನ್ನು ಮೀರುವ ದೃಷ್ಟಿ ಹಾಗೂ ಸ್ಥಾಪಿತ ವ್ಯವಸ್ಥೆಗೆ ಪ್ರತಿರೋಧ ತೋರಿಸುವುದನ್ನಷ್ಟೇ ಮಾಡದೆ ಪರ್ಯಾಯ ಸಂಸ್ಕೃತಿಯನ್ನು ಸೂಚಿಸುವುದು ಮತ್ತು ಸ್ಥಪಿಸುವುದು ಪ್ರಮುಖವಾಗಿ ಕಾಣುತ್ತದೆ.

ಶೂದ್ರರು, ಕೆಳವರ್ಗದವರು, ದಲಿತರು ಮತ್ತು ಮಹಿಳೆಯರು ಜ್ಞಾನವನ್ನು ಪಡೆದು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಿದ್ಧಿಯನ್ನು ಪಡೆಯುವ ಮೂಲಕ ತಪಸ್ವಿಯಾಗಲು ಸಾಧ್ಯ ಎಂಬುದನ್ನು ಕುವೆಂಪು ಹೇಳುತ್ತಾರೆ. "ಮತೀಯ ಮತ್ತು ಸಾಮಾಜಿಕ ಅಂಧಶ್ರದ್ಧೆ, ಕಂದಾಚಾರಗಳಿಂದ ನಾವು ಪಾರಾಗದಿದ್ದರೆ ನಮಗೆ ಉದ್ಧಾರವಿಲ್ಲ" ವೆಂದ ಕುವೆಂಪು ಅಂತಹ ವಿಚಾರಗಳನ್ನು ತಮ್ಮ ಕೃತಿಗಳಲ್ಲಿ ಅದರಲ್ಲೂ ನಾಟಕ ಕೃತಿಗಳಲ್ಲಿ ತಂದಿರುವುದನ್ನು ಗುರುತಿಸಬಹುದು.

ವಿಚಾರವಾದ ಮತ್ತು ವೈಜ್ಞಾನಿಕ ದೃಷ್ಟಿಗಳಿಂದ ಜಾತಿ-ಜನಾಂಗ ಧೋರಣೆ, ಅಸ್ಪೃಶ್ಯತೆ, ವರ್ಣಾಶ್ರಮ ಮೊದಲಾದ ಸಾಮಾಜಿಕ ಅನ್ಯಾಯಗಳನ್ನು ತೀವ್ರವಾಗಿ ಖಂಡಿಸಿರುವುದನ್ನು ಹಾಗೂ ಸಾಮಾಜಿಕವಾಗಿ, ರಾಜಕೀಯವಾಗಿ ವಿಚಾರಕ್ರಾಂತಿಯನ್ನು ಹುಟ್ಟು ಹಾಕಲು ಯತ್ನಿಸಿರುವುದನ್ನು ಕಾಣಬಹುದು. ಇವರ ವೈಚಾರಿಕ ನಿಕಷದಿಂದ ಧರ್ಮ, ಮತ, ದೈವದ ಪರಿಕಲ್ಪನೆ, ಸಾಮಾಜಿಕ ಸ್ಥಾನಮಾನಗಳಲ್ಲಿ ಗಣನೀಯ ಬದಲಾವಣೆಗಳಾಗಿವೆ. ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೇಲು ವರ್ಗದವರಿಗೆ ಮಾತ್ರ ಮೀಸಲಾಗಿದ್ದ ವಿದ್ಯೆ ಹಾಗೂ ಯುದ್ಧ ವಿದ್ಯೆಯನ್ನು ಕೆಳವರ್ಗದವರು ಪಡೆದರೆ ಸಾಮ್ರಾಜ್ಯ ಶಾಹಿ ಶಕ್ತಿಗಳು ಅವರ ಅಸ್ತಿತ್ವವನ್ನೇ ಬಲಿತೆಗೆದುಕೊಳ್ಳುವ ಸನ್ನಿವೇಶಗಳನ್ನು ಇಲ್ಲಿ ಕಾಣಬಹುದು.

ಕುವೆಂಪು ಬ್ರಾಹ್ಮಣಿಕೆಯನ್ನು ವಿಡಂಬಿಸುತ್ತಲೇ ತಿದ್ದಲು ಪ್ರಯತ್ನಿಸಿದರು. ಒಟ್ಟಿನಲ್ಲಿ ಈ ನಾಟಕಗಳಲ್ಲಿ ಪರಂಪರೆಯಲ್ಲಿ ಆದ ತಪ್ಪುಗಳನ್ನು ತಿದ್ದಿ ವಿವೇಕವನ್ನು ಉಂಟುಮಾಡುವ ಮಾನವೀಯ ನೆಲೆಯ ಶೋಧಕ್ಕೆ ತೊಡಗಿರುವುದು ಕಾಣಿಸುತ್ತದೆ.

ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ಕುವೆಂಪು ನಾಟಕಗಳನ್ನು ಗಂಭೀರವಾಗಿ ಅಧ್ಯಯನ ಮಾಡಿ, ಅವರ ನಾಟಕಗಳನ್ನು ಕುರಿತಂತೆ ಇದುವರೆಗೆ ಬಂದಿರುವ ವಿಮರ್ಶೆಯನ್ನು ಅಭ್ಯಸಿಸಿ ಮುಂದುವರಿದ ವಿವೇಚನೆಯನ್ನು ಕೊಡುವುದು ಈ ನಿಬಂಧದ ಉದ್ದೇಶ. ಕುವೆಂಪು ನಾಟಕಗಳ ತಾತ್ವಿಕ ಹಿನ್ನೆಲೆ, ವರ್ಗ

ಸಂಘರ್ಷದ ಸ್ವರೂಪ, ಸಾಮಾಜಿಕ ಹಾಗೂ ಬೌದ್ಧಿಕ, ಆರ್ಥಿಕ ವೈಷಮ್ಯಗಳಿಂದುಂಟಾಗಿರುವ ಸಮಸ್ಯೆಗಳ ನಿವಾರಣೆಗೆ ಅವರು ತೋರುವ ಪರಿಹಾರ ಮಾರ್ಗ ಇತ್ಯಾದಿಗಳನ್ನು ಗುರುತಿಸುವುದರ ಜೊತೆಗೆ ಕುವೆಂಪು ನಾಟಕಗಳ ಸಾಹಿತ್ಯಿಕ ಮಹತ್ವವನ್ನು ಅರಿಯುವ ಪ್ರಯತ್ನವನ್ನೂ ಇಲ್ಲಿ ಮಾಡಲು ಉದ್ದೇಶಿಸಿದೆ.

ಕುವೆಂಪುರವರ ಎಲ್ಲಾ ಸಾಹಿತ್ಯ ಕೃತಿಗಳಲ್ಲೂ ವರ್ಗ ಸಂಘರ್ಷವನ್ನು ಕಾಣಬಹುದು. ಆದರೆ ಈ ಪ್ರಬಂಧವು ಕುವೆಂಪು ನಾಟಕಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಆ ನಾಟಕಗಳಲ್ಲಿ ಕಂಡುಬರುವ ವರ್ಗ ಸಂಘರ್ಷದ ವಿಶ್ಲೇಷಣೆಗೆ ತನ್ನ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಂಡಿದೆ.

****

ಅಧ್ಯಾಯ-೨

ತಾತ್ವಿಕ ಮತ್ತು ಸಾಮಾಜಿಕ ಹಿನ್ನೆಲೆ

ತಾತ್ವಿಕ ಮತ್ತು ಸಾಮಾಜಿಕ ಹಿನ್ನೆಲೆ

ಸಮಕಾಲೀನ ಭಾರತೀಯ ಸಾಹಿತ್ಯವು ಕನ್ನಡದ ಸಂದರ್ಭದಲ್ಲಿ ಪಡೆದುಕೊಂಡ ಸೃಜನಶೀಲತೆ ಮತ್ತು ವೈಚಾರಿಕತೆಗಳ ಉತ್ಕರ್ಷದ ಪ್ರತಿನಿಧಿಯಂತೆ ಕುವೆಂಪು ಇದ್ದಾರೆ. ಅಭಿವೃದ್ಧಿಶೀಲತೆಯೊಂದಿಗೆ ತಳುಕು ಹಾಕಿಕೊಂಡಿರುವ ಪರಿಸರ ನಾಶದ ತಲ್ಲಣಗಳ ಹಿಂಸೆ, ರಾಷ್ಟ್ರ ವ್ಯಾಪಿಯಾದ ಭ್ರಷ್ಟಾಚಾರದ ಹಿಂಸೆ, ಬಹುಕಾಲದಿಂದ ಹೇಗೋ ಕಾಪಾಡಿಕೊಂಡು ಬಂದ ಕೋಮು ಸಾಮರಸ್ಯದ ಆಕೃತಿಗಳು ರಾಜಕಾರ ಮತ್ತು ಧರ್ಮಗಳ ಅಪವಿತ್ರ ಮೈತ್ರಿಯಿಂದ ಚೂರು ಚೂರಾಗುತ್ತಿರುವುದನ್ನು ಅಸಹಾಯಕವಾಗಿ ನೋಡಬೇಕಾದ ಹಿಂಸೆ, ಅದರ ವಿಸ್ತರಣೆಯಿಂದ ಭಯೋತ್ಪಾದಕತೆಯ ಹಿಂಸೆ, ವಿಜ್ಞಾನ-ತಂತ್ರಜ್ಞಾನಗಳ ಹೊಸ ಆವಿಷ್ಕಾರಗಳ ನಡುವೆಯೂ ಮುಂದುವರೆಯುತ್ತಿರುವ ಎಷ್ಟೋ ಜಡ ಸಂಪ್ರದಾಯಗಳ ಮತ್ತು ಹೊಸದಾಗಿ ಹುಟ್ಟುತ್ತಿರುವ ಮೂಢನಂಬಿಕೆಗಳ ಪರಿಣಾಮವಾದ ವಾಣಿಜ್ಯ ಸಂಸ್ಕೃತಿಯ ಆಕ್ರಮಣಗಳ ಹಿಂಸೆ- ಇಂಥವುಗಳನ್ನು ಎದುರಿಸಲು ಮತ್ತು ದಾಟಲು ಅಗತ್ಯವಾದ ವೈಚಾರಿಕತೆಯನ್ನು ಕುವೆಂಪು ಎತ್ತಿ ಹಿಡಿದಿದ್ದಾರೆ ಎನ್ನುವುದನ್ನು ನೆನೆದರೆ, ಕುವೆಂಪು ಇಂದಿಗೂ ಪ್ರಸ್ತುತ ಎಂಬ ವಿಷಯ ಸ್ಪಷ್ಟವಾಗುತ್ತದೆ.

ಮಲೆನಾಡಿನ ದುರ್ಗಮ ಅರಣ್ಯ ಶ್ರೇಣಿಯ ದಟ್ಟವಾದ ಅನುಭವಗಳು ಬೇರೂರಿ ಬೆಳೆದ ಕುವೆಂಪುರ ಮೃತೆಯಿಂದ ಮೊದಲು ಗೊಂಡು ಭವ್ಯತೆಯವರೆಗಿನ ಅರಣ್ಯಾನುಭವಗಳನ್ನು ಗ್ರಹಿಸಿ ಅಭಿವ್ಯಕ್ತಿಸಿದ್ದಾರೆ.

ಇಂಗ್ಲಿಷ್ ಶಿಕ್ಷಣ, ಪ್ರಾಚ್ಯ ಪಾಶ್ಚಾತ್ಯ ತತ್ವಜ್ಞಾನಗಳ ತಲಸ್ಪರ್ಶಿಯಾದ ತಿಳಿವಳಿಕೆ, ಆಧುನಿಕ ವಿಜ್ಞಾನ ಮತ್ತು ಜಾಗತಿಕ ಸಮಾಜವಾದಿ ಚಿಂತನೆಗಳೊಂದಿಗೆ ನಡೆಸಿದ ಸಂವಾದ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಗಾಂಧಿ, ಅರವಿಂದರು ಮತ್ತು ಲೋಹಿಯಾ ಇಂತಹ ವ್ಯಕ್ತಿಗಳ ಚಿಂತನೆಯ ಪ್ರಭಾವ-ಇತ್ಯಾದಿಗಳಿಂದ ರೂಪುಗೊಂಡ ಕುವೆಂಪು ವೈಚಾರಿಕತೆಯು ಮನುಷ್ಯನ ಚೈತನ್ಯದ ಚಲನಶೀಲತೆಯನ್ನು ಸ್ಥಗಿತಗೊಳಿಸುವ ಎಲ್ಲಾ ವಿಕೃತಿಗಳನ್ನೂ ವಿರೋಧಿಸುತ್ತ ಮನುಷ್ಯರೆಲ್ಲರ ಸಮಾನತೆಯ ಪರವಾದ ಕಾಳಜಿಗಳನ್ನು ಎತ್ತಿ ಹಿಡಿಯುವ ಸ್ವರೂಪದ್ದಾಗಿದೆ.

ಎಲ್ಲಾ ಜಾತಿ, ಮತ, ಪಂಥಗಳನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸುತ್ತ ಮನುಷ್ಯ ಮನುಷ್ಯರ ನಡುವೆ, ಆತ್ಮ ಆತ್ಮಗಳ ಜಡ ಚೈತನ್ಯಗಳ ನಡುವೆ ಯಾವುದೇ ತಾರತಮ್ಯಗಳನ್ನು ಕಲ್ಪಿಸದೆ ಒಂದು ಏಕತೆಯ ಅನುಭವವನ್ನು ಕೊಡುತ್ತಾರೆ.ಅವರು ಪ್ರತಿಪಾದಿಸುವ ಈ ಏಕತೆ ಅಥವಾ 'ಅದ್ವೈತ' 'ಏಕಕಾಲಕ್ಕೆ ಆಧ್ಯಾತ್ಮಿಕವಾದದ್ದೂ ಹೌದು. ಸಾಮಾಜಿಕವಾದದ್ದೂ ಹೌದು, ಮಹಾತ್ಮಾಗಾಂಧಿಯವರ ಸರ್ವೋದಯವನ್ನು ಕುವೆಂಪುರವರು ಒಂದು 'ಯುಗಮಂತ್ರ'ವೆಂದು ಸ್ವೀಕರಿಸುತ್ತಾರೆ. ಈ ಕಾರಣದಿಂದಲೇ ಕುವೆಂಪು ಸರ್ವೋದಯ ವಿರೋಧಿಯಾದ ವರ್ಣ ವ್ಯವಸ್ಥೆ, ಜಾತಿ ಪದ್ಧತಿ, ಮೂಢನಂಬಿಕೆ, ಸಾಂಸ್ಥಿಕ ಧರ್ಮದ ಸಂಕೇತವಾದ ದೇವಸ್ಥಾನ, ಧರ್ಮದ ಹೆಸರಿನಲ್ಲಿ ಸಾಮಾನ್ಯ ಜನರನ್ನು ಶೋಷಣೆಗೆ ಗುರಿಪಡಿಸುವ ಪುರೋಹಿತ ಶಾಹಿ ಇತ್ಯಾದಿಗಳನ್ನು ತಮ್ಮ ಸಮಕಾಲೀನರಾದ ಇತರ ಪ್ರಮುಖ ಬರಹಗಾರರಿಗಿಂತ ಭಿನ್ನವಾಗಿ ಮತ್ತು ಉಗ್ರವಾಗಿ ಚಿಕಿತ್ಸೆಗೆ ಗುರಿಪಡಿಸುತ್ತಾರೆ.

ಶೂದ್ರ ಸಮುದಾಯಕ್ಕೆ ಸೇರಿದ ಕುವೆಂಪು, ಈ ವರ್ಗಕ್ಕೆ ಯಾವತ್ತಿನಿಂದಲೋ ನಿರಾಕೃತವಾದ ಹಿಂದೂ ಧಾರ್ಮಿಕ ಆಧ್ಯಾತ್ಮಿಕ ಪರಂಪರೆಯನ್ನು ಸ್ವಂತ ಅಧ್ಯಯನದ ಮೂಲಕ ಕರಗತ ಮಾಡಿಕೊಂಡು ಆ ಪರಂಪರೆ ಮತ್ತು ಸಂಸ್ಕೃತಿಯನ್ನು ತಮ್ಮ ಪ್ರತಿಭೆ ಮತ್ತು ವೈಚಾರಿಕತೆಗಳಿಂದ, ಈ ಕಾಲಮಾನದ ಅಗತ್ಯಕ್ಕೆ ತಕ್ಕ ಹಾಗೆ ತಮ್ಮ ಸೃಜನ ಹಾಗೂ ಸೃಜನೇತರ ಸಾಹಿತ್ಯಕೃತಿಗಳಲ್ಲಿ ಪುನರ್ ವ್ಯಾಖ್ಯಾನ ಮತ್ತು ಚಿಕಿತ್ಸೆಗೊಳಪಡಿಸಿರುವುದನ್ನು ನೋಡಿದರೆ, ದೇಶದ ಚರಿತ್ರೆ ಹಾಗೂ ಪರಂಪರೆಯನ್ನು ಅತ್ಯಂತ ಆರೋಗ್ಯಪೂರ್ಣವಾದ ಚರ್ಚೆಗೆ ಗುರಿಪಡಿಸಿದ ಸಾಹಿತಿಗಳಲ್ಲಿ ಕುವೆಂಪು ಮುಖ್ಯರಾಗಿ ಕಂಡುಬರುತ್ತಾರೆ.

ಇಂದಿನ ಸಮಾಜದಲ್ಲಿ ಜಾತಿ, ಮತ, ಪಂಥಗಳು ಬೇರೂರಿದ್ದು ಈ ಸಂದರ್ಭದಲ್ಲಿ 'ಗುಡಿ, ಚರ್ಚು, ಮಸೀದಿಗಳ ಬಿಟ್ಟು ಬನ್ನಿ', 'ನೂರುದೇವರನ್ನೆಲ್ಲ ನೂಕಾಚೆ ದೂರ' , 'ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರಾ', 'ಆ ಮತದ ಈ ಮತದ ಹಳೆಮತದ ಸಹವಾಸ ಸಾಕಿನ್ನು, ಓ ಬನ್ನಿ ಸೋದರರೆ ಮನುಜ ಮತಕೆ' ಎಂದು ನಾಲ್ಕು ದಶಕಗಳಿಗೂ ಹಿಂದೆ ಕುವೆಂಪು ಕೊಟ್ಟ ಕರೆ ಇಂದಿಗೂ ಪ್ರಸ್ತುತವಾಗಿರುವುದನ್ನು ಕಾಣಬಹುದು.

ಸ್ವಾತಂತ್ರ್ಯೋತ್ತರ ಭಾರತದ ಎಷ್ಟೋ ವಿದ್ಯಮಾನಗಳಿಗೆ ಕುವೆಂಪು ತಮ್ಮ ಕವಿತೆಗಳ ಮೂಲಕ ಸ್ಪಂದಿಸಿದರೂ, ೧೯೭೪ರಂದು ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದ ಸಂದರ್ಭದಲ್ಲಿ ಅವರು ಮಾಡಿದ 'ವಿಚಾರ ಕ್ರಾಂತಿಗೆ ಆಹ್ವಾನ' ಎಂಬ ಭಾಷಣ ಸಮಕಾಲೀನ ಭಾರತದ ರಾಜಕಾರಣಕ್ಕೆ ಒಂದು ಎಚ್ಚರಿಕೆಯ ಗಂಟೆಯಾಗಿದೆ. 'ಪ್ರಜಾಸತ್ತೆಯನ್ನು ರಕ್ಷಿಸುವ ಇಚ್ಛೆ ನಿಮಗಿದ್ದರೆ ಇಂದಿನ ರೀತಿಯ ಧನಾಶ್ರಿತ ಚುನಾವಣೆಯ ಪದ್ಧತಿಯನ್ನೇ ಬದಲಾಯಿಸಿ ಅದನ್ನು ಗುಣಾಶ್ರಿತವನ್ನಾಗಿ ಪರಿವರ್ತಿಸುವ ಕರ್ತವ್ಯ ನಿಮ್ಮ ಹೆಗಲ ಮೇಲಿದೆ..' 'ಇನ್ನು ಮುಂದಾದರೂ ನಾವು ವೈಜ್ಞಾನಿಕ ದೃಷ್ಟಿಯ ಮತ್ತು ವೈಚಾರಿಕ ಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಮತ ಧಾರ್ಮಿಕ ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು' ಎಂದು ಕರೆ ಕೊಟ್ಟರು.

ನಿಸರ್ಗವೇ ಕುವೆಂಪುರವರಿಗೆ ಪ್ರಪ್ರಥಮ ಆಧ್ಯಾತ್ಮಿಕ ಗುರು. ಕುವೆಂಪು ಹೇಗೆ ನಿಸರ್ಗದ ಒಂದು ಅವಿಭಾಜ್ಯಬಾಗವಾಗುತ್ತದೆ.

ಷೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್, ಟೆನಿಸನ್ ಮುಂತಾದ ಆಂಗ್ಲ ಕವಿಗಳ ಕೃತಿಗಳನ್ನೂ ಕಾಳಿದಾಸಾದಿ ಸಂಸ್ಕೃತ ಕವಿಗಳ ಕೃತಿಗಳನ್ನೂ ಪಂಪ, ರನ್ನ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾದ ಕನ್ನಡ ಕವಿಗಳ ಕೃತಿಗಳನ್ನೂ, ಹೋಮರ್, ಡಾಂಟೆ, ವರ್ಜಿಲ್ ಇವರ ಮಹಾಕಾವ್ಯಗಳನ್ನೂ ವ್ಯಾಸಂಗ ಮಾಡಿ ಕ್ಲಾಸಿಕಲ್ ಮತ್ತು ರೊಮ್ಯಾಂಟಿಸಿಸಮ್ ಕಾವ್ಯ ಸಂಪ್ರದಾಯಗಳ ಸತ್ವವನ್ನು ಧಾರಣ ಮಾಡಿಕೊಂಡಿದ್ದರು.

ಕುವೆಂಪುರವರ ಪೂರ್ಣದೃಷ್ಟಿಯಿಂದ ವಿಶ್ವ ಪ್ರಜ್ಞೆಯನ್ನು ರೂಪಿಸುವ ಮಾನವತಾ ದರ್ಶನ ರೂಪುಗೊಂಡು ಅವರೊಬ್ಬ ದಾರ್ಶನಿಕರಾದರು, ಪೂರ್ಣ ಪ್ರಜ್ಞರಾದರು. ಈ ನಿಲುವು ಅವರ ಎಲ್ಲಾ ಕೃತಿಗಳಲ್ಲಿಯೂ - ಅದು ಕಾವ್ಯವಾಗಲಿ, ಕಾದಂಬರಿಯಾಗಲಿ, ನಾಟಕವಾಗಲಿ- ಒಂದಲ್ಲಾ ಒಂದು ರೂಪದಲ್ಲಿ

ಗೋಚರವಾಗುತ್ತದೆ. ಅವರ ಕಾವ್ಯಮೀಮಾಂಸೆ ಮತ್ತು ವಿಮರ್ಶಾಸಾಹಿತ್ಯಕ್ಕೂ ಈ ಮಾತನ್ನು ಅನ್ವಯಿಸಬಹುದು.

ಕುವೆಂಪು ಶೂದ್ರ ಸಮುದಾಯದ ಆಂತರಿಕ ಶ್ರೇಣೀಕರಣ ವ್ಯವಸ್ಥೆಯಲ್ಲಿದ್ದ ಅಸಮಾನತೆಯನ್ನು ಕಂಡು ಅದರ ವಿರುದ್ಧ ಸಿಡಿದೇಳುವ ಪರಿಸ್ಥಿತಿಯಲ್ಲಿ ಕುವೆಂಪು ಇರಲಿಲ್ಲ. ಅವರ ರಾಷ್ಟ್ರೀಯ ಚಳುವಳಿಯು ದಿನನಿತ್ಯದ ಅನುಭವಗಳನ್ನು ವಾಸ್ತವವಾಗಿದ್ದ ಪ್ರಧಾನ ಸಂಸ್ಕೃತಿಗಳ ಮೌಲ್ಯಗಳ ಮೇಲೆ ವಿಧಿಸುತ್ತಿದ್ದ ನಿಯಂತ್ರಣಗಳನ್ನು ಆಲಿಸಿದ ಕುವೆಂಪುರವರು ಸಾಮಾಜಿಕ ವ್ಯವಸ್ಥೆಯ ಕೀಳರಿಮೆಯಿಂದ ಹೊರಬಂದು ಆತ್ಮವಿಶ್ವಾಸವನ್ನು ರೂಢಿಸಿಕೊಳ್ಳುವ ಕ್ರಿಯೆಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡರು. ಆಗಾಗಲೇ ದಕ್ಷಿಣ ಭಾರತದಲ್ಲಿ ನಡೆಯುತ್ತಿದ್ದ ಅವೈದಿಕ, ಶೂದ್ರ ಚಳುವಳಿಗಳು ಕರ್ನಾಟಕದಲ್ಲೂ ಸಣ್ಣ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿತ್ತು. ತಮಿಳುನಾಡಿನ ಪೆರಿಯಾರ್ ಚಳುವಳಿ ಸಾಮಾಜಿಕ ರಚನೆಯನ್ನೇ ಬದಲಾವಣೆ ಮಾಡುವಷ್ಟು ಪ್ರಭಾವ ಶಾಲಿಯಾಗಿತ್ತು ಮತ್ತು ಇಪ್ಪತ್ತರ ದಶಕದಲ್ಲಿ 'ಪ್ರಜಾಮಿತ್ರ ಮಂಡಳಿ' ಎಂಬ ಹೆಸರಿನಲ್ಲಿ ಮೈಸೂರಿನಲ್ಲಿ ಚಳುವಳಿಯನ್ನು ಆರಂಭವಾಯಿತು. ಇದು ಪ್ರಮುಖವಾಗಿ ಪ್ರಧಾನ ಸಂಸ್ಕೃತಿಯ ವಿರುದ್ಧದ ಚಳುವಳಿಯಾಗಿತ್ತು. ಈ ಚಳುವಳಿಗಳು ಕುವೆಂಪುರವರನ್ನು ತಾತ್ವಿಕ ಮತ್ತು ಸಾಮಾಜಿಕ ಸ್ಥಿತಿಗಳ ಬಗೆಗೆ ಹೋರಾಡುವ ಸ್ಥಿತಿಗೆ ತರುವಲ್ಲಿ ಯಶಸ್ವಿಯಾಗಿರುವುದನನ್ನು ಕಾಣಬಹುದು.

ಕುವೆಂಪುರವರ ಎಲ್ಲಾ ರೀತಿಯ ಪ್ರೇರಕಗಳಿಗೂ ಪ್ರಾದೇಶಿಕ ಮಹಾಕಾವ್ಯಗಳಿಗೂ, ತಾತ್ವಿಕತೆಗಳಿಗೂ ವಾಲ್ಮೀಕಿ, ವ್ಯಾಸ, ಕಾಳಿದಾಸಾದಿಗಳು ಪ್ರೇರಕರಾಗಿರುವುದನ್ನು ಕಾಣಬಹುದು. ಹಾಗೇ ವಸಾಹತುಶಾಹಿಯ ಕಾರಣದಿಂದ ಮತ್ತು ಇಂಗ್ಲಿಷ್ ಶಿಕ್ಷಣ ಹಾಗೂ ಪಾಶ್ಚಿಮಾತ್ಯ ಸಂಸ್ಕೃತಿಯಿಂದಾಗಿ ನಮ್ಮ ಬದುಕಿನ ಎಲ್ಲಾ ರಂಗಗಳಲ್ಲಿಯೂ ಬದಲಾವಣೆಗಳು ಕಾಣಿಸಿಕೊಂಡಂತೆ ಸಾಹಿತ್ಯ ಕ್ಷೇತ್ರದಲ್ಲೂ ಹೊಸ ಬಗೆಯ ರೂಪ ಮತ್ತು ನಾವೀನ್ಯತೆಗಳು ಕಂಡುಬಂದವು. ಇವು ವಿವಿಧ ರೀತಿಯ ಸಾಮಾಜಿಕ ಅನಿಷ್ಟಗಳನ್ನು ತೊಡೆದು ಹಾಕುವಲ್ಲಿ ಮಹತ್ತರ ಪಾತ್ರ ವಹಿಸಿರುವುದನ್ನು ಇಲ್ಲಿ ಕಾಣಬಹುದು.

ಕುವೆಂಪು ಒಬ್ಬ ಕವಿಯಾಗಿ ವಿಜ್ಞಾನದ ಆವಿಷ್ಕಾರಗಳಿಗೆ, ವಿಸ್ಮಯಗಳಿಗೆ ಮತ್ತು ವಿಜ್ಞಾನದ ಕಾರಣದಿಂದ ಪರಂಪರಾಗತ ಜೀವನ ಕ್ರಮ ಹಾಗೂ ವೈಚಾರಿಕತೆಗಳಲ್ಲಿ ಆಗುತ್ತಿದ್ದ ಬದಲಾವಣೆಗಳಿಗೆ, ಬೇರೆ ಕವಿಗಳಿಗಿಂತ ಭಿನ್ನ ರೀತಿಯನಲ್ಲಿ ಸ್ಪಂದಿಸಿದರು. ಅವರ ಕೃತಿಗಳಲ್ಲಿ ಸಾಮಾಜಿಕ ಆವಿಷ್ಕಾರಗಳಿಗೆ, ಹೊಸ ಆಯಾಮಗಳಿಗೆ ವಿಜ್ಞಾನವು ಪ್ರೇರಕ ಶಕ್ತಿಯಾಗಿರುವುದನ್ನು ಕಾಣಬಹುದು.

ಕುವೆಂಪು ತಮ್ಮ ಜೀವನದಲ್ಲಿ ಇದ್ದ ಹಾಗೆ ಅವರ ಸಾಹಿತ್ಯ ಕೃತಿಗಳಲ್ಲಿ ಅತೀಂದ್ರಿಯಾನುಭವಗಳಿಗೆ ಅಪಾರ ಬೆಲೆ ನೀಡಿದ್ದಾರೆ. ಜಗತ್ತಿನ ಹಲವಾರು ಸಂತ ದಾರ್ಶನಿಕರ ಜೀವನದಿಂದ ನಿದರ್ಶನಗಳನ್ನು ನೀಡುವ ಮೂಲಕ ಆ ನಿದರ್ಶನಗಳನ್ನು ಸಮರ್ಥಿಸುತ್ತಾರೆ. ಕೇವಲ ಗ್ರಂಥಸ್ಥ ವಿದ್ಯೆಯಾಗದೆ ಅನುಭವದಲ್ಲಿ ದಕ್ಕಿಸಿಕೊಳ್ಳುವ ಚಿಂತನೆ ಅವರನ್ನು ಜಗತ್ತಿನ ಶ್ರೇಷ್ಠ ಅಧ್ಯಾತ್ಮ ಕವಿಯನ್ನಾಗಿಸಿದೆ, ಬ್ರಹ್ಮಾನುಭವಿಯನ್ನಾಗಿಸಿದೆ, ತತ್ವಜ್ಞಾನಿಯನ್ನಾಗಿಸಿದೆ. ಕಾವ್ಯ-ಅಧ್ಯಾತ್ಮ ಅನುಭವಗಳು ಅವರಲ್ಲಿ ಸೇರಿಕೊಂಡಿವೆ. ಭಾರತೀಯರಿಗೆ ಅದರಲ್ಲೂ ಕನ್ನಡಿಗರಿಗೆ ವೇದಾಂತ ದರ್ಶನದ ಬಗ್ಗೆ ಆತ್ಮ ಪ್ರತ್ಯವನ್ನು

ತಂದುಕೊಟ್ಟ ಕವಿ ಕುವೆಂಪು. ಕುವೆಂಪು ದರ್ಶನದಲ್ಲಿ ವಿಜ್ಞಾನ, ವೇದಾಂತ, ವೈಚಾರಿಕತೆಗಳ ಅಪೂರ್ಣ ಸಾಮರಸ್ಯವನ್ನು ಕಾಣಬಹುದು. ಇದರ ಜೊತೆಗೆ ಕಾವ್ಯದ ಅಮೂಲ್ಯ ವಿಶಿಷ್ಟ ರಸಸಂಗಮವನ್ನು ಕಾಣಬಹುದು.

ಕುವೆಂಪುರವರು ಉಪನಿಷತ್ತಿನ ಕೆಲವು ತತ್ವಗಳನ್ನು ತಮ್ಮ ಕಾವ್ಯದಲ್ಲಿ ಅಳವಡಿಸಿಕೊಂಡಿದ್ದಾರೆ. ಹೊಸ ಹೊಸ ದರ್ಶನಗಳನ್ನು ಕಾವ್ಯಕ್ರಿಯೆಯಲ್ಲಿ ಹುದುಗಿಸಿಕೊಂಡಿದ್ದಾರೆ. ಸಾಂಪ್ರದಾಯಿಕ ಅನಿಷ್ಟಗಳ ವಿರುದ್ಧ ಹೋರಾಡುವುದರ ಮೂಲಕ ಸಾಹಿತ್ಯಕ್ಕೆ ಹೊಸ ಆಯಾಮಗಳನ್ನು ನೀಡಿದ್ದಾರೆ.

ವೈಜ್ಞಾನಿಕ ಮತ್ತು ಸಾಮಾಜಿಕವಾಗಿ ಅಪಾರ ನಿರ್ಧಿಷ್ಟ ಭಾವನೆಗಳನ್ನು, ಸಾಮಾಜಿಕವಾಗಿ ಬದಲಾಗುತ್ತಿರುವ ಹುಟ್ಟಿನಿಂದಲೂ ಭದ್ರ ಬುನಾದಿಯಾಗಿದ್ದ ಹಳೆಯ ಕಂದಾಚಾರಗಳನ್ನು ಸರಿಪಡಿಸುವಲ್ಲಿ ಇವರಿಗಿದ್ದ ಕಾಳಜಿ ದೊಡ್ಡದು. ಜೀವನಕ್ಕೆ ನಿಕಟವಾದ ವೈಜ್ಞಾನಿಕ ಬೆಳವಣಿಗೆಗಳನ್ನು ಕಾವ್ಯ ಕ್ರಿಯಾ ಶಕ್ತಿಯಾಗುವಂತೆ ಅಳವಡಿಸಿಕೊಳ್ಳುವುದರಿಂದಾಗಿ ಸ್ವೀಕೃತ ಧೋರಣೆಯ ಅನ್ವೇಷಣೆ ವ್ಯಕ್ತಿಗಳ ಬದುಕಿನ ಪ್ರಬಲ ಅನ್ವೇಷಣೆ ಆಗುವಂತೆ ಎಚ್ಚರ ವಹಿಸುವುದರಿಂದ ನಿಜವಾದ ಅರ್ಥ ಕಟ್ಟಿಕೊಂಡು ಸಾಮಾಜಿಕ ಅರಿವಿನಲ್ಲಿ ಒಂದಾಗುತ್ತಾರೆ. ತಾತ್ವಿಕವಾಗಿ ಭಾಷೆಯಲ್ಲಿ ಸಾಕಾರಗೊಳಿಸುವ ಅನುಭವದಿಂದಾಗಿ ಮಿಕ್ಕ ಕವಿಗಳಿಗಿಂತ ಭಿನ್ನವಾಗಿ ಕಾಣುವುದನ್ನು ಗುರುತಿಸಬಹುದು.

ಸಾಮಾಜಿಕ ಅಂಧಶ್ರದ್ಧೆ, ಕಂದಾಚಾರ, ವರ್ಣದ್ವೇಷ ಮೊದಲಾದ ಅನಿಷ್ಟಗಳಿಗೆ ಕುವೆಂಪುರವರು ತಮ್ಮ ಸಾಮಾಜಿಕ ಅನುಭವಗಳ ಮೂಲಕ ನಾಟಕಗಳಲ್ಲಿ ಮದ್ದು ಮಾಡಿ ಆಧುನಿಕತೆಯನ್ನು ಮೆರೆದಿದ್ದಾರೆ. ಚಿಂತನೆ, ದರ್ಶನ, ವಾಸ್ತವತೆ ಮತ್ತು ಋಜುಮಾರ್ಗಗಳಿಂದಾಗಿ ಕುವೆಂಪ ನಾಟಕಗಳು ಕನ್ನಡ ಸಾಹಿತ್ಯದಲ್ಲಿ ಬೆಳಕಾಗಿವೆ. ಪ್ರಕೃತಿ ಹಿನ್ನೆಲೆಯಾಗಿ ಭೂಮಿಕೆಯಲ್ಲಿ ನಿಲ್ಲುವುದು ಮಾತ್ರವಲ್ಲದೆ ಪಾತ್ರವೂ ಆಗಿ ಬರುವುದು ಇಲ್ಲಿನ ಮತ್ತೊಂದು ವಿಶೇಷ. ಪುರಾಣದ ಹಳೆಯ ತತ್ವಾಯುಧಗಳಿಗೆಲ್ಲಾ, ವಿಜ್ಞಾನ ಯುಗದ ಹೊಸ ಮೆರುಗನ್ನು ನೀಡಿದ್ದಾರೆ. ಕುವೆಂಪು ನಿಸರ್ಗ ದೃಶ್ಯಗಳಲ್ಲಿ ಅನುಭವಿಸುತ್ತಿದ್ದುದು ಕೇವಲ ಅದರ ಚೆಲುವಿನ ಆರಾಧನೆಯಲ್ಲ, ಆ ಚೆಲುವಿನ ಮೂಲ ಶಕ್ತಿಯಲ್ಲಿ ತನ್ಮಯೀಭವದಿಂದ ಸಿದ್ಧಿಸುವ ಆತ್ಮ ಸಿದ್ಧಿಯನ್ನು ಈ ಅಂಶವೇ ಕುವೆಂಪು ಅವರನ್ನು ಇತರ ಪ್ರಕೃತಿ ಕವಿಗಳಿಗಿಂತ ಉನ್ನತ ಸ್ತರದ ದಾರ್ಶನಿಕ ಕವಿಯಾಗಿಸಿರುವುದು. ಕುವೆಂಪು ತಮ್ಮ ಸ್ವಂತ ಅನುಭವಕ್ಕೆ ಬಂದ ಅರಿವಿನಿಂದ ಅದ್ವೈತ ದರ್ಶನವನ್ನು ಮತ್ತು ಪ್ರಕೃತಿಯನ್ನು ಬಳಸಿಕೊಂಡಷ್ಟು ಬೇರೆ ಯಾವ ದಾರ್ಶನಿಕರೂ ಬಳಸಿಕೊಂಡಿಲ್ಲ ಎಂಬುದನ್ನು ಅವರ ದಾರ್ಶನಿಕ ಮಹಾಕಾವ್ಯದಿಂದಲೇ ತಿಳಿಯಬಹುದು.

ಆಧ್ಯಾತ್ಮಿಕ -ತಾತ್ವಿಕ ವಿಷಯಗಳನ್ನು ಕುರಿತು ಕುವೆಂಪು ಬಳಸುವ 'ದರ್ಶನ ಎಂಬ ಹೆಸರನ್ನು ನೋಡಿದ ಕ್ಷಣವೇ ಅದರ ಆಶದ ಅರಿವಾಗುತ್ತದೆ. ಇದೇನು ತತ್ವಶಾಸ್ತ್ರವಲ್ಲ. ಎಲ್ಲರಿಗೂ ಇದರಲ್ಲಿ ಧ್ವನಿತವಾಗುವ ದರ್ಶನವನ್ನು ವಿವರಿಸಿ ಫಲವಿಲ್ಲ. ಯಾರಿಗೆ ದರ್ಶನ ಬೇಕೋ ಅಂತಹವರಿಗೆ ಅಭ್ಯಾಸದಿಂದ ಅದು ಹೊಳೆದೇ ಹೊಳೆಯುತ್ತದೆ. ಈ ಕಾವ್ಯದ ರಚನೆಗೆ ಪ್ರಚೋದಕ ಶಕ್ತಿ ಅಧ್ಯಾತ್ಮ ಸಾಧನೆ ನಿಜ. ಆದುದರಿಂದ ಇಲ್ಲಿನ ಪ್ರತಿಯೊಂದು ಮಾತಿನಲ್ಲೂ ದರ್ಶನ ಧ್ವನಿಯನ್ನು ಕಾಣಬೇಕಾಗುತ್ತದೆ. ಇಲ್ಲಿ

ದರ್ಶನ ಧ್ವನಿಯ ಮೂಲಕ ಮಾತ್ರವೆ ವ್ಯಕ್ತವಾಗುತ್ತದೆ. ಹಾಗಲ್ಲದಿದ್ದರೆ ಅದು ಶಾಸ್ತ್ರವಾಗುತ್ತಿತ್ತು. ಆದುದರಿಂದಲೇ ನಾನು ದರ್ಶನಧ್ವನಿ ಎಂದೆನೇ ಹೊರತು ದರ್ಶನ ಎನ್ನಲಿಲ್ಲ. ಧ್ವನಿ ಎಂಬುದು ಕಾವ್ಯಪ್ರಪಂಚಕ್ಕೆ ಸೇರಿದ ಮಾತು. ಕಾವ್ಯದ ಆತ್ಮ ಅದು. ಕೇವಲ ತತ್ವವನ್ನು ಬೋಧಿಸಿದರೆ (ಅದು) ಶುಷ್ಕ ಗ್ರಂಥವಾಗುತ್ತದೆ. ಇಲ್ಲಿ ರಸಾನುಭವದ ಮೂಲಕ ದರ್ಶನ ಧ್ವನಿತವಾಗುತ್ತದೆ. 'ರಸಾನುಭವ' ಎಂಬುದನ್ನು ಮಾತ್ರ ಮರೆಯಬಾರದು.

ಕಾಲಾನುಕ್ರಮಣಿಕೆಯಲ್ಲಿ ನಾಟಕಗಳ ತತ್ವ ಮತ್ತು ಸಾಮಾಜಿಕ ಹಿನ್ನೆಲೆಯಿಂದ ಗಮನಿಸಿದಾಗ ಆ ನಾಟಕಗಳ ಸಾಮಾಜಿಕ ದೃಷ್ಟಿ ಧೋರಣೆ, ಆರ್ಥಿಕ ವೈಷಮ್ಯ, ಧಾರ್ಮಿಕ ವೈಷಮ್ಯ ಮತ್ತು ಅವರ ಎಲ್ಲಾ ನಾಟಕಗಳಲ್ಲಿನ ಪ್ರತಿಪಾದನೆಯ ತತ್ವ, ವಸ್ತು ಹಾಗೂ ಸಮಕಾಲೀನ ಪ್ರಜ್ಞೆಯನ್ನು ಕವಿ ಹೇಗೆ ತಂದಿದ್ದಾರೆ ಎಂಬುದನ್ನು ತಿಳಿಯಬಹುದಾಗಿದೆ. ನಾಟಕಗಳಲ್ಲಿ ಮೊದಲು ಪ್ರಕಟವಾದ ಮಕ್ಕಳ ನಾಟಕವೆಂದೇ ಗುರುತಿಸಿಕೊಂಡಿರುವ 'ಮೋಡಣ್ಣನ ತಮ್ಮ' ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡಿದೆ. ಇದೊಂದು ಮಕ್ಕಳ ಮನೋಹರ ರಮ್ಯ ನಾಟಕ. ಕುವೆಂಪು ನಿಸರ್ಗದ ಬಗ್ಗೆ ಹೆಚ್ಚು ಪ್ರೀತಿ ಮತ್ತು ಅನುಭವಗಳನ್ನು ಇಲ್ಲಿ ಹೆಚ್ಚಾಗಿ ಪಡೆದುಕೊಂಡಿರುವುದು ಕಂಡುಬರುತ್ತದೆ.

ಮೋಡ, ಮಗು, ತಾಯಿ ಇವುಗಳ ಸಂಬಂಧವು ಪ್ರಕೃತಿದತ್ತವಾಗಿಯೇ ಕಂಡುಬರುತ್ತದೆ. ಇಲ್ಲಿ ಮೇಘ(ಮೋಡ) ಪ್ರಧಾನವಾಗಿ ಕಂಡುಬರುತ್ತದೆ. ಅಂದರೆ ಪ್ರಕೃತಿ ಮನುಷ್ಯರ ಜೊತೆ ಎಷ್ಟೊಂದು ನಿಕಟ ಸಂಬಂಧ ಹೊಂದಿದೆ ಎಂಬುದನ್ನು ಮೋಡ ಸಂದೇಶದಿಂದಲೇ ತಿಳಿಯಬಹುದು. ಮೋಡದ ಬಳಿಗೆ ಮಗು ಬರಲು ಇಚ್ಛೆಪಟ್ಟಾಗ ಮೋಡ ತಾಯಿ ಮಗುವಿನ ಸಂಬಂಧವನ್ನು ಈ ರೀತಿ ಗುರುತಿಸಿ ಮಗುವಿಗೆ ಸಮಾಧಾನ ಹೇಳುತ್ತದೆ-

"ಬರಬೇಡಣ್ಣಾ! ಬರಬೇಡಣ್ಣಾ
ಅವ್ವನು ಬೈವಳು; ನೀ ನೋಡಣ್ಣಾ!
ಇಲ್ಲಿಗೆ ಬಂದರೆ ಹಾಲನು ಕೊಡುವರು,
ಮೈಯನು ತೊಳೆವರು ನಿನಗಾರಣ್ಣಾ?
ಅತ್ತರೆ ನಿನ್ನನು ಸಂತಸಪಡಿಸಲು
ಹೆತ್ತವರಿಲ್ಲದೆ ಆಗದು, ಅಣ್ಣಾ!"[9]

ತಾಯಿಯ ಪ್ರೇಮವನ್ನು ಮುಂದಿಟ್ಟು ಸಮಾಧಾನಪಡಿಸಿದಾಗ ಮಗು ಗಿರಿ, ಕಾಡುಗಳನ್ನು ಶಿಫಾರಸ್ಸು ಮಾಡುವಂತೆ ಕೇಳಿಕೊಳ್ಳುವ ಕಲ್ಪನೆಯನ್ನು ಕಾಣಬಹುದು. ಆಗ ಮೋಡ ಗಿರಿಗೆ ಈ ರೀತಿ ಉತ್ತರಿಸುತ್ತದೆ.

"ಎಲೆ ಗಿರಿಯಣ್ಣಾ, ನಿನಗೇನಣ್ಣಾ?
ಕುಳಿತುಪದೇಶವ ಮಾಡುವೆಯಣ್ಣಾ!

ಅಣುಗನ ನುಡಿಗಳ ಆಲಿಸಿ ನೀನೂ
ಅಣುಗುವಚನಗಳ ಹೇಳುವಿಯೇನು?
ಹತ್ತು ಕಡಲುಗಳ ಹೊತ್ತರು ನಾನು
ಎತ್ತೆನು ಬಾಲಕನೋರ್ವನ ಕೇಳು
ಸಿಡಿಲು ಮಿಂಚುಗಳನಾಳಲು ಬಲ್ಲೆ;
ಹುಡುಗರನಾಳುವುದಾದರೆ ಒಲ್ಲೆ!
ರೈತರ ಗುಂಪೇ ಬೈದಲು ಸೈರಿಪೆ;
ತಾಯಿಯ ಶಾಪವ ಸೈರಿಸೆ ನಾನು!
ಎಲೆ ಗಿರಿಯಣ್ಣಾ, ಎಲೆ ಗಿರಿಯಣ್ಣಾ
ನಿನಗೇಕಣ್ಣಾ, ಸುಮ್ಮನಿರಣ್ಣಾ!"[೨]

ಈ ರೀತಿಯಾಗಿ ಪ್ರಕೃತಿಯೊಂದಿಗೆ ಸಮಾಜದ ಸಂಬಂಧವನ್ನು ತಂದ ಕುವೆಂಪು ಕವಿಯ ಪ್ರಕೃತಿ ಪ್ರೇಮಕ್ಕೆ ಒಂದು ಉದಾಹರಣೆಯಾಗಿ ಇಡೀ ನಾಟಕಗವನ್ನು ರಚಿಸಿದ್ದಾರೆ.

ಈ ನಾಟಕ ಪದ್ಯರೂಪದಲ್ಲಿಯೇ ಇರುವುದರಿಂದ ಇಲ್ಲಿನ ಸರಳವಾದ ಚಿಕ್ಕ ಚಿಕ್ಕ ವಾಕ್ಯಗಳು, ಪ್ರಾಸ ಅರ್ಥಾನುಸಾರವಾಗಿ, ಗಾನ ರಮ್ಯವಾಗಿದ್ದು ಹಾಗೂ ಪಲ್ಲವಿಯೂ ಇರುವುದನ್ನು ಕಾಣಬಹುದು. ವಸ್ತು ಶೈಲಿ ನಿರೂಪಣಾ ವಿಧಾನಗಳು, ಮಕ್ಕಳ ಭಾವಕೋಶವನ್ನು ವಿಕಾಸಪಡಿಸುವ ಉತ್ತಮ ನಾಟಕ, ಗುಪ್ತಸತ್ವವನ್ನು ಉದ್ದೀಪಿಸುವ ಮಹತ್ವದ ಕಡೆಗೆ ಗುರಿಯಿಡುವಂತೆ ಮಾಡುತ್ತದೆ ಈ ನಾಟಕ.

ಮಗು-ತಾಯಿ, ಮಗು-ಅಧ್ಯಾಪಕ, ಮಗು-ನಿಸರ್ಗ ಈ ಮೂರು ಪರಿಸರದಲ್ಲಿ ಮಕ್ಕಳ ವ್ಯಕ್ತಿತ್ವ ಅರಳುವ ಬಗೆಯನ್ನು ಸ್ಫೋಟಕವಾಗಿ ಕಲ್ಪಿಸಲಾಗಿದೆ. ಇದರಿಂದ ಕವಿಯ ನಿಸರ್ಗ ಪ್ರೇಮವನ್ನು ಕಾಣಬಹುದು.

'ಜಲಗಾರ' ಒಂದು ಸಾಮಾಜಿಕ ನಾಟಕ. ಈ ನಾಟಕದಲ್ಲಿ ವೈಯಕ್ತಿಕ ನೆಲೆಯಲ್ಲಿ ಎದುರಿಸುತ್ತಿದ್ದ ಸಮಸ್ಯೆಗಳನ್ನೇ ವಸ್ತುವಾಗಿ ಮಾಡಿಕೊಂಡು ತಾತ್ವಿಕ ನೆಲೆಯಲ್ಲಿ ಪ್ರಶ್ನಿಸುವ ಪ್ರಯತ್ನ ಮಾಡಿದ್ದಾರೆ. ಸಾಮಾಜಿಕ ಚಿಂತನೆಗೆ ಸಾಹಿತ್ಯ ಕೃತಿ ಅದ್ಭುತ ರೂಪಕವಾಗಿದೆ. ಈ ನಾಟಕದಲ್ಲಿ 'ಕಾಯಕ' ತತ್ವವನ್ನು ಎತ್ತಿ ಹಿಡಿದಿರುವುದು, ಸಮಾಜದ ಕೆಳವರ್ಗದವರನ್ನು ಗುರುತಿಸುವುದು ಪ್ರಧಾನ ವಸ್ತುಗಳಾಗಿ ಕಂಡುಬರುತ್ತದೆ. ಪುರೋಹಿತಶಾಹಿ ಮತ್ತು ವರ್ಣಾಶ್ರಮ ಪದ್ಧತಿ ವಿರೋಧಿ ನೆಲೆಯ ನಾಟಕ ಇದಾಗಿದೆ.

ಕೆಲಸವೇ ಮುಖ್ಯ. ಕೆಲಸದಲ್ಲಿಯೇ ದೇವರನ್ನು ಕಾಣಬಹುದು ಎನ್ನುತ್ತಾ ಜಲಗಾರನ ಬಾಯಿಂದಲೇ ಕವಿ ಈ ರೀತಿ ಹೇಳಿಸುತ್ತಾರೆ-

"ಶಿವನ ಕಾಣಲು ನೀನು

ಗುಡಿಗೆ ಹೋಗುವೆಯೇನು? ನಿನ್ನ ನೇಗಿಲ ಗೆರೆಯ

ದಿವ್ಯ ದೇವಾಲಯದಿ ಶಿವನ ಕಾಣೆಯ ನೀನು?"[5]

ಗಾಂಧೀಜಿಯವರ ಅಸ್ಪೃಶ್ಯತಾ ಚಳುವಳಿ, ಹರಿಜನೋದ್ಧಾರ ಮೊದಲಾದ ಕಾಳಜಿಗಳು ಈ ನಾಟಕದ ಹಿನ್ನೆಲೆಯಲ್ಲಿ ಇರುವುದನ್ನು ಕಾಣಬಹುದು.

ಜಲಗಾರನು ಓದುವುದನ್ನು ಕೇಳಲು ಬರುವವನು ರೈತ. ಇಲ್ಲಿ ಜಲಗಾರನ ಸಾಮಾಜಿಕ ನಂಬಿಕೆ ದೇವರು, ಜನತೆ, ಆದರ್ಶ. ಇದರ ಕಲ್ಪನೆಯ ಸುತ್ತ ಬೆಳಕು ಚೆಲ್ಲುತ್ತದೆ. ಜಲಗಾರನ ಬಾಯಿಂದ ಸಾಹಿತ್ಯ ಭಾಷೆ ಬರುವ ಬದಲು ಜಾನಪದ ಧಾಟಿಯಲ್ಲಿ ಬರುವುದನ್ನು ಕಾಣಬಹುದು. ಜಲಗಾರನ ಮಾತುಗಳಲ್ಲಿ ಸಂಸ್ಕೃತ ಶಬ್ದಗಳೂ ಕಂಡುಬರುತ್ತವೆ.

"ಶಿವಗುಡಿಯ ಶಿವನು ಜೋಯಿಸರ ಶಿವನಂತೆ

ನನ್ನ ಶಿವನೀ ಮಣ್ಣಿನಲ್ಲಿಹನು ನನ್ನ ಶಿವ

ಕೊಳೆತ ಕಸದೊಳಗಿಹನು...."[6]

ನಿಜವಾದ ಶಿವನಿರುವುದು ಗುಡಿಯಲ್ಲಲ್ಲ, ಬಡಜನರೆದೆಯಲ್ಲಿ ಎಂಬುದನ್ನು ಇಡೀ ನಾಟಕದಿಂದ ತಿಳಿಯಬಹುದು. ಕಾಯಕವೇ ದೇವರೆಂಬ ಸತ್ಯ ಕಾಣಬಹುದು. ಸಾಮಾನ್ಯ ವರ್ಗದವನು ಕೂಡ ಶಿವನನ್ನು ಏರಬಲ್ಲ, ಶಿವನಾಗಬಲ್ಲ ಎಂಬುದು ಗೋಚರವಾಗುತ್ತದೆ.

ಈ ನಾಟಕದಲ್ಲಿ ಒಂದು ಕಡೆ ಶ್ರೇಣೀಕೃತ ಸಮಾಜದ ಜಾತಿ ಪದ್ಧತಿ ವ್ಯವಸ್ಥೆ ಬಗ್ಗೆ ಕಡು ವಿರೋಧ ವ್ಯಕ್ತವಾದರೆ, ಮತ್ತೊಂದು ಕಡೆ ಇಡೀ ವ್ಯವಸ್ಥೆಯನ್ನು ಪ್ರತಿಪಾದಿಸುವ ಕರ್ಮ ಸಿದ್ಧಾಂತದ ಬಗ್ಗೆ ನಂಬಿಕೆ ವ್ಯಕ್ತವಾಗುತ್ತದೆ. 'ಕರ್ಮ ಮುಗಿಯುವ ಕಾಲ ಮುಗಿದಿಲ್ಲವಿನ್ನೂ"[7] ಎಂದು ಜಲಗಾರ ಹೇಳುವ ಮಾತುಗಳನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು.

ಜಲಗಾರ ನಾಟಕದಲ್ಲಿ ಸಮಾಜದ ಕೆಳವರ್ಗದ ಜನರನ್ನು ಗುರುತಿಸುವುದು ಮತ್ತು ಸಾಮಾಜಿಕ ಪ್ರಜ್ಞೆ ಇದ.ಇದರಿಂದಾಗಿ ಸಮಾಜದ ಎಷ್ಟೋ ಅನಿಷ್ಟ ಪದ್ಧತಿಗಳ ನಿರ್ಮೂಲನೆಗೆ ಕಾರಣವಾಗಬಹುದೆಂದು ಹೇಳಬಹುದು.

"ಯಮನ ಸೋಲು" ಸ್ತ್ರೀ ಕೇಂದ್ರಿತ ವಸ್ತುವನ್ನುಳ್ಳ ನಾಟಕ. ವಸ್ತು ಉಪನಿಷತ್ತುಗಳ ನಚಿಕೇತನದು. ಆತ ಮೃತ್ಯುವಿನ ಅರ್ಥವನ್ನು ತಿಳಿಯಬಯಸಿದ ಜಿಜ್ಞಾಸು. ಎರಡನೆಯವಳು ಸಾವಿತ್ರಿ, ಆಕೆ ಮೃತ್ಯುವಿನ ವಜ್ರಕಠೋರ ನಿಯಮವನ್ನು ಸಡಿಲಿಸಲು ಪ್ರಯತ್ನಿಸಿ ಸಾಕಷ್ಟು ಯಶಸ್ಸು ಗಳಿಸಿದವಳು. ಇಲ್ಲಿ ಇಬ್ಬರು ಮೃತ್ಯುವಿನ ಅಧಿದೇವತೆಯಾದ ಯಮನನ್ನೇ ನೇರವಾಗಿ ಎದುರಿಸಿರುವುದು ಕಂಡು ಬರುತ್ತದೆ. 'ತಪಸ್ಸಿನ ಶಕ್ತಿ-ಪಾತಿವ್ರತ್ಯದ ಮಹಿಮೆ'ಯನ್ನು ಹೇಳುವುದೇ ಸಾವಿತ್ರಿ ಕಥೆಯ ಮುಖ್ಯ ಉದ್ದೇಶವಾಗಿದೆ. 'ಸಾವಿತ್ರಿ'

ಕಥೆಯನ್ನು ಕುವೆಂಪು ಆಧುನಿಕ ಅರಿವಿನ ಹಿನ್ನೆಲೆಯಲ್ಲಿ ಗ್ರಹಿಸಿದರು. 'ಪಾತಿವ್ರತ್ಯ'ದ ಧರ್ಮವನ್ನು ಸಾರುವ, ಪ್ರಧಾನ ಸಂಸ್ಕೃತಿಯ ಪ್ರಮುಖ ಮೌಲ್ಯವೊಂದನ್ನು ಪ್ರತಿಪಾದಿಸುವ ರೂಢಿಯ ಸಾವಿತ್ರಿ ಕಥೆ ಕುವೆಂಪು ಅವರಿಗೆ ಹೊಸ 'ದರ್ಶನ' ನೀಡಿದೆ, ಪ್ರೇಮಕಥಾನಕವಾಗಿ ಕಂಡಿದೆ. ಸತ್ಯವಾನನ ಸಾವು ಖಚಿತ (ಅಲ್ಪಾಯು) ಎಂದು ಗೊತ್ತಿದ್ದೂ ಸಾವಿತ್ರಿ ಮದುವೆಯಾಗುತ್ತಾಳೆ. "ಪ್ರೇಮ ಮೃತ್ಯುಗೆ ಬೆದರಿ ಓಡುವುದೇ?"[1] ಎಂಬ ಕವಿಯ ಮಾತು ಇಡೀ ನಾಟಕದ ಸ್ವರೂಪವನ್ನು ರೂಪಿಸಿದೆ.

ಇಲ್ಲಿ ತತ್ವಜ್ಞಾನಿ ಹಾಗೂ ಸಾಹಿತಿಯ ನಡುವಿನ ವ್ಯತ್ಯಾಸವು ಕಂಡುಬರುತ್ತದೆ. ಪಾಶ್ಚಾತ್ಯ ಹಾಗೂ ಪೌರ್ವಾತ್ಯ ತತ್ವಶಾಸ್ತ್ರಗಳ ಆಳವಾದ ಪರಿಚಯ ಅವರಿಗಿತ್ತು. ಈ ರೀತಿಯ ದ್ವಂದ್ವದ (ತಂತ್ರಜ್ಞಾನಿ, ಸಾಹಿತಿ) ಮಧ್ಯದಲ್ಲಿ ಕುವೆಂಪು ಸಾಹಿತ್ಯಕ್ಕೆ ಒಲವು ತೋರುತ್ತಾರೆ. ಆದುದರಿಂದ ಈ ಕಥೆಯಲ್ಲಿ ಯಮನ ಸೋಲು ಕಂಡುಬರುತ್ತದೆ.

ಪ್ರೇಮ ನಿಷ್ಠೆಯ ಎದುರು ಯಮಧರ್ಮ ತಲೆಬಾಗುತ್ತಾನೆ.

"ಮಿರ್ತುವನು ಎದೆಯೊಲವು

ಗೆದ್ದಿ ತೆಲೆ ತಾಯೆ! ನಿನ್ನಿನಿಯನನ್ನಿಗೋ

ಕೊಟ್ಟಿಹೆನು...."[2]

ನಿನ್ನ ಪ್ರೇಮದ ಮುಂದೆ ನನ್ನ ಶಕ್ತಿಯು ಜಳ್ಳು ಎಂದು ಧರ್ಮದ ನಿಯಮವನ್ನು ಧರ್ಮದ ತಪಸ್ಸಿನಿಂದಲೇ ಸಡಿಲಿಸುವ ಸಾಧನೆ ಸಾವಿತ್ರಿಯದು. ಸಾವಿತ್ರಿಗೆ ಒಂದಾದ ಮೇಲೊಂದರಂತೆಯನ್ನು ವರಗಳನ್ನು ನೀಡುತ್ತಾ ಹೋಗುತ್ತಾನೆ. ಪತಿಯ ಹಿಂದೆ ನರಕಕ್ಕಾದರೂ ಹೋದೇನು ಎಂದು ಹೇಳಿ ಯಮನನ್ನು ಮೆಚ್ಚಿಸಿ ಕೊನೆಯದಾಗಿ ಪತಿಯ ಪ್ರಾಣವನ್ನು ಮರಳಿ ಪಡೆಯುತ್ತಾಳೆ. ಸಾವಿತ್ರಿಯ ಕಥೆಯಿಂದ ಎಲ್ಲವನ್ನೂ ಮೀರಿದುದು 'ವಿಶ್ವಪ್ರೇಮ' ಎಂಬುದು ಸಾಧಿತವಾಗುತ್ತದೆ.

ಅಸಾಧ್ಯವಾದುದನ್ನು ಸಾಧ್ಯ ಎಂದು ತೋರಿಸಿರುವುದು "ಯಮನ ಸೋಲು" ನಾಟಕದ ವಿಶೇಷ.

'ಬಿರುಗಾಳಿ' ಷೇಕ್ಸ್‌ಪಿಯರ್‌ನ ಟೆಂಪೆಸ್ಟ್ ನಾಟಕದ ಅನುವಾದ. ಕುವೆಂಪು ಷೇಕ್ಸ್‌ಪಿಯರ್‌ನನ್ನು ಅನುಸರಿಸಿ ಅಲ್ಲಿನ ಪಾತ್ರದ ಹೆಸರುಗಳನ್ನು ಮಾತ್ರ ಬದಲಾಯಿಸಿರುವುದು ಕಂಡುಬರುತ್ತದೆ. ಈ ನಾಟಕದಲ್ಲಿ ಮಧ್ಯಮ ನೀಚ ಪಾತ್ರಗಳ ಸಂಭಾಷಣೆಯಲ್ಲಿ ಗದ್ಯವನ್ನು ಉಪಯೋಗಿಸಿರುತ್ತಾರೆ. ಪದ್ಯರಚನೆಯಲ್ಲಿ ಹೆಚ್ಚು ಸ್ವಾತಂತ್ರ್ಯವನ್ನು ವಹಿಸಿರುತ್ತಾರೆ. ಕುವೆಂಪು 'ಬಿರುಗಾಳಿ' ನಾಟಕ ರಚನೆಯ ಮೂಲಕ ಹೊಸದೊಂದು ಭಾಷಾಶೈಲಿಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದಂತೆ ತೋರುತ್ತದೆ.

'ಬಿರುಗಾಳಿ'ಗೆ ಮೂಲ ಕೃತಿಯಾದ ಟೆಂಪೆಸ್ಟ್ ನಾಟಕ ಮಿಲಾನಿನ ನಗರದ ಶ್ರೀಮಂತ ಪ್ರಾಸ್ಪೆರೋವಿನ ಬದುಕಿನ ಚಿತ್ರ. ಅವನು ದ್ರೋಹಿಯಾದ ತಮ್ಮನ ಮಸಲತ್ತಿಗೆ ಬಲಿಬಿದ್ದು ರಾಜ್ಯಭ್ರಷ್ಟನಾಗಿ ತನ್ನ ಚಿಕ್ಕ ಹೆಣ್ಣುಮಗುವಿನೊಡನೆ ಒಂದು ನಿರ್ಜನ ದ್ವೀಪ ಸೇರುತ್ತಾನೆ. ಕೊನೆಗೆ ಅಲ್ಲಿ ಮಗಳ ಮುಂದಿನ ಜೀವನದ ಬಗ್ಗೆ ಯೋಚನೆ ಮಾಡಿ ಒಂದು ದಿನ ಸಮುದ್ರ ತೀರದಲ್ಲಿ ನಿಂತಿದ್ದಾಗ ನೌಕೆ ಕಾಣಿಸುತ್ತದೆ. ಆ

ನೌಕೆಯಲ್ಲಿ ತನ್ನ ಪರಮವೈರಿಯಾದ ತಮ್ಮ, ಅವನ ದ್ರೋಹ ಕಾರ್ಯಕ್ಕೆ ನೆರವು ನೀಡಿದ ನೇಪಲ್ಸ್‌ನ ದೊರೆ ಅವರ ಪರಿವಾರವನ್ನೆಲ್ಲಾ ಮುಳುಗಿಸುತ್ತಾನೆ. ಆದರೆ ಅವರು ಸಾಯುವುದಿಲ್ಲ. ನೇಪಲ್ಸ್‌ನ ಯುವರಾಜ ಫರ್ಡಿನಾಂಡ್‌ನನ್ನು ಬರಮಾಡಿ ಅವನಿಗೂ ತನ್ನ ಮಗಳು ಮಿರಾಂಡಾಳಿಗೂ ಪ್ರೀತಿಯುಂಟಾಗಲು, ನಂತರ ಅವರ ವಿವಾಹ ಮಾಡಿಸಿ ಕೊನೆಗೆ ಆ ನೌಕೆಯವರನ್ನೆಲ್ಲಾ ಒಟ್ಟುಗೂಡಿಸಿ ತನ್ನ ತಮ್ಮನ ಅನ್ಯಾಯ ವರ್ತನೆಯನ್ನು ಮನ್ನಿಸುತ್ತಾನೆ. ಇದು ಟೆಂಪೆಸ್ಟ್ ನಾಟಕದ ಕಥೆಯ ತಿರುಳು.

ವೈರ ವೈರಕ್ಕೆ ಮದ್ದಲ್ಲ, ಸೇಡು ಸೇಡನ್ನು ಹೇರುತ್ತದೆ. ಪ್ರೇಮ ಔದಾರ್ಯ ಕ್ಷಮೆ ಸಹನೆ ಮಾನವನನ್ನು ಪುನೀತಗೊಳಿಸುವ, ಭೂಮಿಗೆ ನಾಕವನ್ನೆಳೆದು ತರುವ ದೈವೀ ಗುಣಗಳು. ಇವೆಲ್ಲಾ ಪ್ರಾರ್ಥನೆ, ಪೂಜೆ, ಧ್ಯಾನ ತಪಸ್ಸುಗಳಿಂದ ಮಾತ್ರ ಒದಗುವಂಥವು ಎಂಬಿವೇ ವಿಶ್ವತತ್ವಗಳು ಈ ನಾಟಕದಲ್ಲಿ ಪ್ರತಿಮಿತವಾಗಿವೆ. ಇಲ್ಲಿನ ಪಾತ್ರ ಸೃಷ್ಟಿ, ಸನ್ನಿವೇಶ ಕಲ್ಪನೆ ಮತ್ತು ನಾಟಕದ ವಾತಾವರಣ ಭಾರತೀಯ ಸಂಪ್ರದಾಯಕ್ಕೂ ಅಭಿರುಚಿಗೂ ತುಂಬ ಹೊಂದಿಕೊಂಡಿದೆ.

'ನನ್ನ ಗೋಪಾಲ' ಒಂದು ಮಕ್ಕಳ ನಾಟಕ. ತಾಯಿಯ ಭಕ್ತಿ ಮತ್ತು ಗೋಪಾಲನ ನಂಬಿಕೆ ಒಲ್ಮೆಗಳೇ ಭಗವಂತನ ಒಲಿಯುವಿಕೆಗೆ ಕಾರಣ ಎಂಬುದು ಇಲ್ಲಿ ಸತ್ಯ ಸಂಗತಿ. ವಚನಕಾರರ ನಿಲುವನ್ನೇ ಇಲ್ಲಿ ಕಾಣಬಹುದು, 'ಉಳ್ಳವರು ಶಿವಾಲಯವ ಮಾಡುವರು' ಎಂಬ ವಚನವನ್ನು ನೆನಪಿಗೆ ತರುತ್ತದೆ. ಬನದ ಗೋಪಾಲ ಬೇರೆ ಯಾರಿಗೂ ಕಾಣುವುದಿಲ್ಲ. ನಿನ್ನ ತಾಯಿಯ ಭಕ್ತಿ, ನಿನ್ನೊಲ್ಮೆ ಇವುಗಳಿಗೆ ಮೆಚ್ಚಿ ನಿನಗೆ ಕಾಣಿಸಿಕೊಳ್ಳುತ್ತೇನೆ, ನಿನ್ನೊಡನೆ ಆಟವಾಡುತ್ತೇನೆ ಎಂದು ಹೇಳುತ್ತಾನೆ. ಇಲ್ಲಿ ಭಕ್ತಿ ಪ್ರಧಾನವಾಗಿರುವುದನ್ನು ಕಾಣಬಹುದು. 'ಕಂದನಲಿ ಶಿವನ ಕಾಣುವ ಬಂಧನವೇ ಮುಕ್ತಿ' ಎಂದು ಇಲ್ಲಿನ ತಾಯಿಯಲ್ಲಿ ಭಕ್ತಿ ಮೈಯೆತ್ತಿ ನಿಂತಿರುವುದನ್ನು ಕಾಣಬಹುದು. ಇಲ್ಲಿನ ಭಾವಪೂರ್ಣವಾದ ಗದ್ಯ ಸಹಜವಾಗಿಯೇ ಭಾವಜೀವಿಗಳಾದ ಮಕ್ಕಳ ಮನಸ್ಸನ್ನು ಸೆರೆಹಿಡಿಯದಿರದು. ಇದೊಂದು ಶಿಶುಸಾಹಿತ್ಯಕ್ಕೆ ಅಪೂರ್ವ ಹಾಗೂ ಅನರ್ಘ್ಯ ಕಾಣಿಕೆ.

'ಶ್ಮಶಾನ ಕುರುಕ್ಷೇತ್ರಂ'-ನಾಟಕವು ಮಹಾಭಾರತ ಸಂಗ್ರಾಮದ ಕಡೆಯ ದಿನದ ವಸ್ತುವನ್ನು ಹೊಂದಿದೆ. ಹದಿನೆಂಟು ದಿನಗಳ ರಣಕೋಲಾಹಲದಿಂದ ತುಂಬಿ ತುಳುಕಿದ ಭಾರತದ ಯುದ್ಧ ಕೊನೆಗೊಂಡ ದಿನದ ಘೋರ ವಿಷಣ್ಣ ರಾತ್ರಿಯ ಚಿತ್ರ ಇಲ್ಲಿದೆ. ಅದುವರೆಗೂ ರಣಕಲಿಗಳ ಸಾಹಸ ಕ್ಷೇತ್ರವಾಗಿದ್ದ ಕುರುಕ್ಷೇತ್ರ ಈಗ ಶ್ಮಶಾನವಾಗಿದೆ. ಅಂತಿಮ ಘಟ್ಟವನ್ನು ಕುವೆಂಪು ತಮ್ಮ ನಾಟಕದ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ವಾಸ್ತವವಾಗಿ ವ್ಯಾಸರು ಎಲ್ಲಿಗೆ ನಿಲ್ಲಿಸಿದ್ದರೋ ಅಲ್ಲಿಂದ ಪ್ರಾರಂಭಗೊಳ್ಳುತ್ತದೆ. ಮಹಾಭಾರತ ಯುದ್ಧ ಶ್ಮಶಾನ ಕುರುಕ್ಷೇತ್ರದಲ್ಲಿ ಪರ್ಯವಸಾನಗೊಂಡಿತು. ಅಲ್ಲಿಗೆ ದ್ವಾಪರಯುಗವೂ ಅಂತ್ಯಗೊಂಡಿತು. ಆದರೆ ಈ ಅಂತ್ಯ ಮತ್ತೊಂದು ಯುಗಕ್ಕೆ ನಾಂದಿಯಾಗುತ್ತದೆ. 'ಶ್ಮಶಾನ ಕುರುಕ್ಷೇತ್ರಂ' ನಾಟಕದಲ್ಲಿ ದ್ವಾಪರ ಯುಗದ ಅಂಚಿನಲ್ಲಿ ನಿಂತು ಕಲಿಯುಗವನ್ನು ನಮಗೆ ತೋರಿಸುವ ಕವಿ ಪ್ರತಿಭೆ. ಭೂತ ವರ್ತಮಾನಗಳನ್ನು ಹಿಡಿದಿಟ್ಟು ಭವಿಷ್ಯ ವಿಹಾರಿಯಾಗುತ್ತದೆ. ಇತಿಹಾಸವನ್ನು ಮಾತ್ರವಲ್ಲ, ವಿಕಾಸವನ್ನೂ ಧ್ವನಿಸುತ್ತದೆ. ಭೀಷ್ಮ, ದ್ರೋಣ, ಕರ್ಣಾದಿಗಳು ದ್ವಾಪರ ಯುಗದ ಆಧಾರ

ಸ್ತಂಭಗಳಾಗಿದ್ದವರು. ಅವರು ಮಡಿದೊಡನೆ ಆ ಯುಗವೂ ಕೊನೆಗೊಳ್ಳುತ್ತದೆ. ಹೀಗೆ ಮಹಾಭಾರತ ಯುದ್ಧದಿಂದ ಒಂದು ಸಂಸ್ಕೃತಿಯ, ಒಂದು ನಾಗರಿಕತೆಯ, ಒಂದು ಮೌಲ್ಯ ಸಮುದಾಯ ಅಂತ್ಯವಾದುದನ್ನು ನೋಡುತ್ತೇವೆ.

'ಯುದ್ಧ'ದ ಬಗೆಗಿನ ಚಿಂತನಾ ಕ್ರಮಕ್ಕೆ ಕುವೆಂಪು ಅವರ ಸೃಜನಶೀಲ ಮನಸ್ಸು ಸ್ಪಂದಿಸಿ ಸೃಷ್ಟಿಸಿರುವ ರೂಪಕವೇ 'ಶ್ಮಶಾನ ಕುರುಕ್ಷೇತ್ರಂ' ನಾಟಕ.

ದ್ವಾಪರ-ಕಲಿ ಇವರ ಸಂವಾದದ ಮೂಲಕ ಕುವೆಂಪು ಸಂಧೀಕಾಲದ ವಸ್ತುವನ್ನೊಳಗೊಂಡ ತಮ್ಮ ಈ ಕೃತಿಗೆ ಅಗತ್ಯ ಹಿನ್ನೆಲೆಯನ್ನು, ತಾತ್ವಿಕ ಚೌಕಟ್ಟೊಂದನ್ನು ರೂಪಿಸಿಕೊಂಡಿದ್ದಾರೆ.

'ಶ್ಮಶಾನ ಕುರುಕ್ಷೇತ್ರಂ' ನಾಟಕದ ವಿಶಿಷ್ಟಾನುಭವ ನಮ್ಮ ಭವಿಷ್ಯವನ್ನು ಹಸನುಗೊಳಿಸಲು ಅಗತ್ಯ ಪರಿಕರಗಳನ್ನು ಒದಗಿಸುತ್ತದೆಂದೇ ಈಗಲೂ ಇದು ಅತ್ಯಂತ ಪ್ರಸ್ತುತ.

'ವಾಲ್ಮೀಕಿಯ ಭಾಗ್ಯ' ರಾಮಾಯಣದ ಕಥಾವಸ್ತುವನ್ನುಳ್ಳದ್ದು. ಈ ಕಥೆಯಲ್ಲಿ ರಾಮ, ಸೀತೆ, ಲಕ್ಷ್ಮಣ, ವಾಲ್ಮೀಕಿ ಮಹರ್ಷಿಗಳು ಪ್ರಧಾನವಾಗಿದ್ದಾರೆ. "ಶ್ರೀ ರಾಮಚಂದ್ರನ ಪಿಸುಣ್ಣೆ ಕಿವಿಗೊಟ್ಟ ಕಟ್ಟಾಣತಿಯಂತೆ ಸೌಮಿತ್ರಿ ಗರ್ಭಿಣಿಯಾಗಿದ್ದ ಸೀತಾಮಾತೆಯನ್ನು ಅರಣ್ಯದಲ್ಲಿ ಬಿಟ್ಟು ಹೋಗುವ ಹೃದಯ ವಿದ್ರಾವಕವಾದ ಸನ್ನಿವೇಶವನ್ನು ಚಿತ್ರಿಸುತ್ತದೆ ಈ ನಾಟಕ." ರಾಮನ ಆಜ್ಞೆಯಂತೆ ಸೀತೆಯನ್ನು ಲಕ್ಷ್ಮಣನು ಬಿಟ್ಟು ಬಂದ ಮೇಲೆ, ಅಲ್ಲಿ ಸೀತಾ ಮಾತೆಯು ವಿವಿಧ ರೀತಿಯಾಗಿ ಗೋಳಾಡುತ್ತಾಳೆ. "ರಾಮಾ!ರಾಮಾ! ರಾಮಾ! ಎಂದು ಆಕ್ರಂದಿಸುತ್ತಾಳೆ. ಈ ಸನ್ನಿವೇಶವೇ 'ರಾಮಾಯಣ'ದ ಸೃಷ್ಟಿಗೂ ಕಾರಣವಾಗುತ್ತದೆ. ಲವ-ಕುಶರೇ ಇದು ವಾಲ್ಮೀಕಿಯ ಭಾಗ್ಯ ಎಂದು ಲೋಕ ಪ್ರಸಿದ್ಧಗೊಳಿಸುತ್ತಾರೆ. ಆ ಮೂಲಕ ಕವಿ ಶೂದ್ರನೊಬ್ಬನಿಗೆ ಲೋಕಮಾನ್ಯತೆಯನ್ನು ತಂದುಕೊಟ್ಟ ಪ್ರತಿಭೆ ಎದುರು, ಸಾಧನೆಯ ಸಿದ್ಧಿಯ ಎದುರು ಎಲ್ಲರೂ ಸಮಾನತೆಯ ಸಮತಾವಾದವನ್ನು ಪ್ರತಿಬಿಂಬಿಸಿದ್ದಾರೆ.

'ಮಹಾರಾತ್ರಿ' ನಾಟದಲ್ಲಿ ಸಿದ್ಧಾರ್ಥ ತನ್ನ ರಾಜ್ಯದ ಐಶ್ವರ್ಯವನ್ನೆಲ್ಲ ಬಿಟ್ಟು ಸತ್ಯಾನ್ವೇಷಣೆಗಾಗಿ ಹೊರಡುವ ಆ ರಾತ್ರಿ ಆತನ ಜೀವನದಲ್ಲಿಯೇ ಮಹತ್ವಪೂರ್ಣವಾದುದು. ಆದ್ದರಿಂದಲೇ ಕುವೆಂಪು ಆದನ್ನು 'ಮಹಾರಾತ್ರಿ' ಎಂದು ಹೆಸರಿಸಿದ್ದಾರೆ. ಇದೊಂದು ಐತಿಹಾಸಿಕ ಪ್ರಸಂಗವಾಗಿದೆ. ಶಾಕ್ಯರರಸರ ಪುತ್ರ ಸಿದ್ಧಾರ್ಥ ಬುದ್ಧನಾಗುವ ಕಥೆಯೇ 'ಮಹಾರಾತ್ರಿ' ನಾಟಕದ ವಸ್ತುವಾಗಿದೆ.

ಪುರೋಹಿತಶಾಹಿಯ ಹಿಡಿತದಲ್ಲಿ ಸಿಕ್ಕಿ ನರಳುತ್ತಿರುವ ಭಾರತೀಯ ಸಮಾಜಕ್ಕೆ ಬಿಡುಗಡೆಯ ಹಾದಿಗಳಲ್ಲೊಂದು ಬುದ್ಧಮಾರ್ಗ. ವೈದಿಕಧರ್ಮಕ್ಕೆ ಪರ್ಯಾಯವಾಗಿ ಸಂವೇದನಾಶೀಲ ಪ್ರಗತಿಪರ ಮನಸ್ಸು ಬೌದ್ಧಧರ್ಮದ ಕಡೆ ಒಲಿಯುವುದು ಭಾರತೀಯ ಚರಿತ್ರೆಯಲ್ಲಿ ಕಂಡು ಬರುವ ಸಂಗತಿ. ಈ ನಾಟಕದಲ್ಲಿ ಸಮಕಾಲೀನ ಸಂದರ್ಭವನ್ನು ನೋಡಬಹುದು. ಸೇವಕ ಚೆನ್ನ ಸಿದ್ಧಾರ್ಥನಿಗೆ ಏಕೆ ನನ್ನೊಡೆಯ, ಇಲ್ಲಿ ಸೊಗವಿಲ್ಲವೇ ನಿನಗೆ? ಎಂದು ಕೇಳುತ್ತಾನೆ. ಇದಕ್ಕೆ ಪ್ರತಿಯಾಗಿ ಸಿದ್ಧಾರ್ಥ ತಾನೊಬ್ಬ ಸುಖಿಯಾದರೇನಾಯ್ತು? ಎಂದು ಮಾರ್ಮಿಕವಾಗಿ ನುಡಿಯುತ್ತಾನೆ. ಬಡತನದಲ್ಲಿ ಬೆಂದು ನೋಯುತ್ತಿರುವ ಲೋಕಕ್ಕೆ ಸಮಾಧಾನ ತರುವ ಪ್ರಯತ್ನ ಸಿದ್ಧಾರ್ಥನದು. ಇಲ್ಲಿ ಸಾಮಾಜಿಕ ಕಾಳಜಿಯನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಸೃಜನಶೀಲ ಲೇಖಕರಾದ ಕುವೆಂಪು ನಮ್ಮ ಕಾಲದ ಶ್ರೇಷ್ಠ ಸಾಮಾಜಿಕ ಚಿಂತಕರೂ

ಹೌದು ಎಂಬುದನ್ನು ಈ ನಾಟಕ ಸಾಬೀತು ಮಾಡಿದೆ.

'ರಕ್ತಾಕ್ಷಿ' ನಾಟಕವು ಷೇಕ್ಸ್‌ಪಿಯರ್‌ನ ಹ್ಯಾಮ್ಲೆಟ್ ನಾಟಕದ ರೂಪಾಂತರ. ಆದರೆ ಬಿರುಗಾಳಿ ಮೂಲ ಕೃತಿಯ ಆಶಯವನ್ನು ಭಾರತೀಯ ಸನ್ನಿವೇಶಕ್ಕೆ ಹೊಂದಿಸಿಕೊಂಡು ಕೃತಿ ರಚಿಸಿದ್ದಾರೆ. ಹ್ಯಾಮ್ಲೆಟ್ ನಾಟಕದ ಕಥಾವಸ್ತುವನ್ನು ಬೇರೆ ಮಾಡಿ ಈ ನಾಟಕವನ್ನು ರಚನೆ ಮಾಡಿರುವುದು ಕಂಡುಬರುತ್ತದೆ.

ಕುವೆಂಪು ರಕ್ತಾಕ್ಷಿ ನಾಟಕವನ್ನು ಐತಿಹಾಸಿಕ ವಸ್ತುವನ್ನು ಆರಿಸಿಕೊಂಡು ಬರೆಯಲು ಅವರ ಕಾಲದ ಸಂದರ್ಭ ಚಾರಿತ್ರಿಕ ಒತ್ತಾಯವೂ ಇದ್ದಂತೆ ಕಾಣುತ್ತದೆ.

ಎ.ಆರ್.ಕೃಷ್ಣಶಾಸ್ತ್ರಿಗಳು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ನೀಡಿದ ಒಂದು ಉಪನ್ಯಾಸದಿಂದ ಕುವೆಂಪು ಪ್ರೇರಿತರಾಗಿ ಆ ಭಾಷಣದ ವಸ್ತುವನ್ನೇ ಆರಿಸಿಕೊಂಡು ಈ ನಾಟಕ ಬರೆದಿರುವುದಾಗಿ ತಿಳಿದುಬರುತ್ತದೆ.

೧೭೫೫ರ ಕಾಲವಾದ ಮಲೆನಾಡಿನ ಬಿದನೂರಿನ ಬಸಪ್ಪನಾಯಕನ ಚರಿತ್ರೆಯನ್ನು ವಿವರವಾಗಿ ಹೇಳಿ, ಇದು ಕಥಾವಸ್ತುವಾಗಬಲ್ಲದೆಂಬುದನ್ನು ತೋರಿಸಿದ್ದರು. ಅದೇ ವಸ್ತುವನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಬಸಪ್ಪ ನಾಯಕನು ಕಾಲವಾದ ಮೇಲೆ ಅವನ ಹೆಂಡತಿಯೂ ಅವನ ದತ್ತು ಮಗ ಚೆನ್ನಬಸವಯ್ಯನೂ ರಾಜ್ಯವಾಳುತ್ತಿದ್ದರು. ರಾಣಿಯು ನಿಂಬಯ್ಯನನ್ನು ಕಟ್ಟಿಕೊಂಡು ಕೆಟ್ಟ ಮಾರ್ಗಕ್ಕೆ ಬಿದ್ದುದನ್ನು ಕಂಡು ಬಸವಯ್ಯ ಆಕ್ಷೇಪಿಸಿದನು. ಒಬ್ಬ ಜಟ್ಟಿಯನ್ನು ಗೊತ್ತು ಮಾಡಿ ಬಸವಯ್ಯನನ್ನು ರಾಣಿಯು ಕತ್ತು ಮುರಿದು ಕೊಲ್ಲಿಸಿ, ಸೋಮಶೇಖರನನ್ನು ದತ್ತು ತೆಗೆದುಕೊಂಡಳು. ಯಾವನೋ ಒಬ್ಬನು ಚೆನ್ನ ಬಸವಯ್ಯನೆಂದು ನಟಿಸಿ ಹೈದರನ ಸಹಾಯ ಪಡೆಯುವನು. ಮಂತ್ರಿ ಲಿಂಗಣ್ಣನು ಕುಂಸಿಯಲ್ಲಿ ಹೈದರನನ್ನು ಕಂಡು ಅವನಿಗೆ ನಿಜಾಂಶವನ್ನು ತಿಳಿಸಿ ಸಹಾಯ ಮಾಡುವನು. ಹೈದರನು ಊರನ್ನು ಗೆದ್ದು, ಮೋಸಗಾರನನ್ನೂ, ರಾಣಿ, ನಿಂಬಯ್ಯ, ಸೋಮಶೇಖರ ಇವರನ್ನೂ ಮದ್ದಗಿರಿಯ ದುರ್ಗದಲ್ಲಿ ಸೆರೆ ಇಡಿಸುವನು.

'ಶ್ರೀ'ಯವರ 'ಅಶ್ವತ್ಥಾಮನ್' ಮಾದರಿಯನ್ನನುಸರಿಸಿ, ಸಂಪೂರ್ಣವಾಗಿ 'ಹ್ಯಾಮ್ಲೆಟ್' ನಾಟಕವನ್ನೇ ರೂಪಾಂತರಿಸಿದ್ದರೆ 'ರಕ್ತಾಕ್ಷಿ' ಇನ್ನೂ ಪರಿಣಾಮಕಾರಿಯಾಗಿರುತ್ತಿತ್ತು. ದುರಂತ ನಾಟಕವಾಗಿ ರಕ್ತಾಕ್ಷಿ ಯಶಸ್ವಿಯಾಗದಿದ್ದರೂ ಜನಪ್ರಿಯ ನಾಟಕವಾಗಿ ಅದು ಹೆಸರು ಪಡೆದಿದೆ.

'ಶೂದ್ರ ತಪಸ್ವಿ' ನಾಟಕವು ಶೂದ್ರರು ಅನುಭವಿಸುತ್ತಿರುವ ಕಷ್ಟ ಸಂಕಷ್ಟಗಳೇ ಶಾಪವಾಗಿ; ಈ ನೆಲದಲ್ಲಿ ಹುಟ್ಟಿ ಬೆಳೆದರೂ ಪರಕೀಯರಂತೆ, ಗುಲಾಮರಂತೆ, ನಾಯಿಗಳಂತೆ ಜೀವನ ಮಾಡಬೇಕಾಗಿದೆ. ರಾಷ್ಟ್ರದ ಸಂಪತ್ತನ್ನು ಉತ್ಪತ್ತಿ ಮಾಡುವವರು ಎಂದು ಗೊತ್ತಿದ್ದರೂ ಅವರನ್ನು ಕಡೆಗಣಿಸಲಾಗಿದೆ. ಶೂದ್ರ ತಪಸ್ಸು ಮಾಡುವುದು ಅಪರಾಧ ಎಂಬುದು ಶ್ರೀರಾಮನ ದೃಷ್ಟಿಯಿಂದಲೂ ಕಂಡುಬರುತ್ತದೆ ಎಂಬುದನ್ನು ಈ ನಾಟಕವು ಮನಗಾಣಿಸಿದೆ.

ಶೂದ್ರ ತಪಸ್ವಿ ನಾಟಕದ ವಸ್ತು ವಾಲ್ಮೀಕಿ ರಾಮಾಯಣದ ಉತ್ತರ ಕಾಂಡದ ಶಂಭೂಕ ಪ್ರಸಂಗ. ಬ್ರಾಹ್ಮಣನ ಮಗ ಸತ್ತ ನಂತರ, ಆ ಶವವನ್ನು ಶ್ರೀರಾಮನ ಅರಮನೆಯ ಮುಂದಿಟ್ಟು ಬ್ರಾಹ್ಮಣ ರೋದಿಸುತ್ತಾನೆ. ಶ್ರೀ ರಾಮ ಮಂತ್ರಿಗಳ ಸಭೆ ಕರೆದು ದೂರಿನ ಬಗ್ಗೆ ವಿಚಾರಿಸುತ್ತಾನೆ. ನಾರದ ಬಂದು

ಶೂದ್ರ ತಪಸ್ಸು ಮಾಡುತ್ತಿರುವುದರಿಂದ ಬ್ರಾಹ್ಮಣನ ಮಗ ಅಕಾಲ ಮರಣಕ್ಕೀಡಾಗಿದ್ದಾನೆ ಎಂದು ಹೇಳುತ್ತಾನೆ. ರಾಮ ಶೂದ್ರನನ್ನು ಹುಡುಕಿಕೊಂಡು ಹೊರಡುತ್ತಾನೆ. ದಕ್ಷಿಣ ದಿಕ್ಕಿನಲ್ಲಿ ಶಂಭೂಕನೆಂಬ ತಪಸ್ವಿಯನ್ನು ಭೇಟಿಯಾಗಿ ಆತ ಯಾವ ವರ್ಗಕ್ಕೆ ಸೇರಿದವನೆಂದು ಕೇಳುತ್ತಾನೆ. ಆಗ ಅವನು ಶೂದ್ರನೆಂದು ಹೇಳುತ್ತಿರುವಾಗಲೇ ಶ್ರೀರಾಮ ಅವನ ತಲೆಯನ್ನೇ ಕತ್ತರಿಸುತ್ತಾನೆ. ಆಗ ಶಂಭೂಕನ ಮೃತ ಶರೀರದಿಂದ ಒಬ್ಬ ಗಂಧರ್ವ ಮೈದೋರಿ ರಾಮನಿಗೆ ತನ್ನ ಕೃತಜ್ಞತೆ ನಿವೇದಿಸಿ, ತಾನೊಂದು ಶಾಪದಿಂದ ಶೂದ್ರನಾಗಿ ಹುಟ್ಟಿ ತಪಸ್ಸು ಮಾಡುತ್ತಿದ್ದುದಾಗಿಯೂ, ರಾಮನ ಖಡ್ಗಾಹುತಿಯಿಂದ ಶಾಪ ವಿಮೋಚನೆಯಾಯಿತೆಂದೂ ಹೇಳುತ್ತಾನೆ.

ಬ್ರಾಹ್ಮಣನಿಂದೆ ನಾಟಕದ ಉದ್ದೇಶವಲ್ಲ. ಶಾಸ್ತ್ರಾಂಧನಾದ ಬ್ರಾಹ್ಮಣನಿಗೆ ಪಾಠ ಕಲಿಸಬೇಕು. ಶ್ರೀರಾಮ ವಾಲ್ಮೀಕಿಯರಿಗಂಟಿದ ಕಳಂಕವನ್ನು ಅಳಿಸಬೇಕು, ದೇಶವನ್ನು ಈ ತನಕ ಅಡ್ಡದಾರಿಗೆಳೆದ ಶಾಸ್ತ್ರ ಪುರಾಣಗಳನ್ನು, ಮೌಢ್ಯ ಸಂಪ್ರದಾಯಗಳನ್ನು ತೊಲಗಿಸಬೇಕೆಂಬುದೇ ಕುವೆಂಪುರವರ ತಾತ್ವಿಕ ನಿಲುವಾಗಿದೆ.

'ಬೆರಳ್‌ಗೆ ಕೊರಳ್' ನಾಟಕವು ಕುವೆಂಪುರವರ ವೈಚಾರಿಕತೆ ಹಾಗೂ ತಾತ್ವಿಕ ನಿಲುವುಗಳನ್ನು ಹೊಂದಿರುವುದು ಕಂಡುಬರುತ್ತದೆ. ಈ ನಾಟಕವು ವಸ್ತು, ಆಶಯ, ಆಕೃತಿ -ಇವುಗಳ ದೃಷ್ಟಿಯಿಂದಲೂ ಸಾಹಿತ್ಯದಲ್ಲಿ ಒಂದು ಶ್ರೇಷ್ಠ ಸ್ಥಾನ ಪಡೆದಿದೆ. ಈ ನಾಟಕದ ವಸ್ತು ಮಹಾಭಾರತದಲ್ಲಿ ಬರುವ ಒಂದು ಪ್ರಸಂಗವಾಗಿದೆ.

ವ್ಯಾಧನ ಮಗನಾದ ಏಕಲವ್ಯ ದ್ರೋಣನ ಬಳಿ ವಿದ್ಯೆ ಕಲಿಯಲೆಂದು ಹಸ್ತಿನಾವತಿಗೆ ಬರುತ್ತಾನೆ. ಏಕಲವ್ಯನು ಬೇಡನಾದುದರಿಂದ ದ್ರೋಣ ಈತನನ್ನು ಶಿಷ್ಯನಾಗಿ ಸ್ವೀಕರಿಸುವುದಿಲ್ಲ. ಆದರೆ ಏಕಲವ್ಯನು ನಿರಾಶನಾಗದೆ ಕಾಡಿಗೆ ಬಂದು ದ್ರೋಣನ ಪ್ರತಿಮೆಯನ್ನು ಮಾಡಿ ಶ್ರದ್ಧಾಭಕ್ತಿಗಳಿಂದ ಬಿಲ್ವಿದ್ಯೆ ಕಲಿಯುತ್ತಾನೆ. ಕೊನೆಗೆ ಅರ್ಜುನನನ್ನು ಮೀರಿಸುವಂತೆ ಬಿಲ್ವಿದ್ಯೆ ಕಲಿಯುತ್ತಾನೆ. ಅದು ಅರ್ಜುನನನಿಗೆ ತಿಳಿದು ದ್ರೋಣರ ಮೂಲಕ ಗುರುದಕ್ಷಿಣೆಯನ್ನು ಪಡೆಯುವಂತೆ ಮಾಡಿ ಏಕಲವ್ಯನ ಹೆಬ್ಬೆರಳನ್ನು ಕಾಣಿಕೆಯಾಗಿ ಕೇಳಿಸುತ್ತಾನೆ. ಆಗ ಏಕಲವ್ಯ ಯೋಚಿಸದೆ ಹೆಬ್ಬೆರಳನ್ನು ಕತ್ತರಿಸಿ ಕೊಡುತ್ತಾನೆ. ಇಲ್ಲಿ ಏಕಲವ್ಯನ 'ಗುರುಭಕ್ತಿ' ಪ್ರಧಾನವಾಗಿ ಕಂಡುಬರುತ್ತದೆ. ಕುವೆಂಪು ಸೂಚಿಸಿರುವ 'ಗುರು-ಕರ್ಮ-ಯಜ್ಞ' ತತ್ವ ನಾಟಕದಲ್ಲಿ ಮುಖ್ಯವಾಗಿ ಕಾಣುತ್ತದೆ. ಮೂಲ ಕತೆಯಲ್ಲಿರುವ ಏಕಲವ್ಯ, ದ್ರೋಣ, ಅರ್ಜುನ ಈ ಪ್ರಧಾನ ಪಾತ್ರಗಳ ಜೊತೆ 'ತಾಯಿ' ಪಾತ್ರವನ್ನು ಸೃಷ್ಟಿಸಿದ್ದಾರೆ. ಕಾಡಿನಲ್ಲಿ ಆತನಿಗೆ 'ಮನುಷ್ಯ ಸಂಬಂಧ' ವಿರುವುದು ಅಬ್ಬೆಯೊಂದಿಗೆ ಮಾತ್ರ. ಜೊತೆಗೆ ದ್ರೋಣನ ಮೂರ್ತಿ ಇವುಗಳು ಅವನ ಸಂಗಾತಿಗಳು. ತಾಯಿ ಮಗನ ಸಂಬಂಧದಿಂದಾಗಿಯೇ ಮಗನ ಬೆರಳಿಗೆ ಬದಲು ಅದಕ್ಕೆ ಕಾರಣವಾದವರ ಕೊರಳು ಕೇಳುವುದು ಕಂಡುಬರುತ್ತದೆ.

ನಗರ ಸಂಸ್ಕೃತಿ ಮತ್ತು ದೇಸಿ ಸಂಸ್ಕೃತಿಗಳ ಅಂತರವನ್ನು, ಸಂಘರ್ಷವನ್ನು, ತಾಯಿ ಮತ್ತು ಏಕಲವ್ಯರ ನಡುವೆ ನಡೆಯುವ ಸಂಭಾಷಣೆಯಲ್ಲಿ ಕಾಣಬಹುದು.

ಈ ನಾಟಕದಲ್ಲೂ ಶೂದ್ರ ಸಮಸ್ಯೆ ತಲೆಯೆತ್ತುತ್ತದೆ. ಆದರೆ ಬ್ರಾಹ್ಮಣ ಶೂದ್ರರ ಸಮರವಲ್ಲ, ಕ್ಷತ್ರಿಯ ಶೂದ್ರರ ಸಂಘರ್ಷ ಇಲ್ಲಿದೆ.

'ಬಲಿದಾನ' ನಾಟಕದ ಕಥಾವಸ್ತು ಭಾರತದ ಸ್ವಾತಂತ್ರ್ಯ ಸಂಗ್ರಾಮ. ಸ್ವಾತಂತ್ರ್ಯ ಸಂಗ್ರಾಮದ ವೇಳೆಯಲ್ಲಿ ಭಾರತದಲ್ಲಿ ಉಂಟಾದ ಮತೀಯ ಕಲಹ, ಅದರಿಂದ ಉಂಟಾದ ರಕ್ತ ಪ್ರವಾಹ-ಇದು ಸ್ವಾತಂತ್ರ್ಯ ಸಾಧನೆಗೆ ಅನುವು ಮಾಡಿದ 'ಬಲಿದಾನ'ದ ಘೋರಮುಖ. ಆದರೆ ಸ್ವಾತಂತ್ರ್ಯ ಬಂದ ಮೇಲೂ ಬಲಿದಾನ ನಡೆಯುತ್ತದೆ ಎಂಬುದನ್ನು (ಗಾಂಧಿಯವರ ಹತ್ಯೆಯನ್ನು ಸೂಚ್ಯವಾಗಿ ಹೇಳುತ್ತಾ), ಭರತ ಸುತ ಪ್ರಶ್ನಿಸಿದಾಗ ಹೋರಾಟದ ಅಂತ್ಯವಲ್ಲ, ಅಂತರದ ಶೃಂಖಲೆಗಳನ್ನು ಎದುರಿಸಿ ಹೋರಾಡಬೇಕಾದ ಹೋರಾಟದ ಆರಂಭ. ಇದು ಬಲಿದಾನ ನಾಟಕದ ದರ್ಶನವಾಗಿದೆ.

ದೇಶದ ಸ್ವಾತಂತ್ರ್ಯಕ್ಕೆ ವ್ಯಕ್ತಿಯ ಸ್ವಾತಂತ್ರ್ಯವೂ ಅಗತ್ಯ. ಅಂತಹ ವ್ಯಕ್ತಿ ಸ್ವಾತಂತ್ರ್ಯ ಬರಬೇಕಾದರೆ ಆತ ತನ್ನ ಜೀವನದಲ್ಲಿ ಬಲಿ ಪರಂಪರೆಯನ್ನು ಅನುಸರಿಸಬೇಕು. ನಾನು, ನನ್ನದು-ಇವುಗಳ ಬಲಿದಾನವಾಗದೆ ವ್ಯಕ್ತಿ ಸ್ವತಂತ್ರನಾಗುವುದಿಲ್ಲ. ಸ್ವತಂತ್ರ ಜೀವನಕ್ಕೆ ಅವಿರತ ಸಾಧನೆ ಬೇಕು. ಹೆಜ್ಜೆ ಹೆಜ್ಜೆಗೂ ಆತ ಬಲಿದಾನ ಮಾಡಲು ಸಿದ್ಧನಿರಬೇಕು ಎಂಬುದು ಈ ನಾಟಕದ ನಿಲುವಾಗಿದೆ. 'ಬಲಿದಾನ' ನಾಟಕ ಸಮಕಾಲೀನ ಭಾರತದ ಬಗ್ಗೆ ಕುವೆಂಪು ನಡೆಸಿದ ಚಿಂತನೆಯ ಒಂದು ರೂಪಕದಂತಿದೆ.

'ಚಂದ್ರಹಾಸ' ನಾಟಕವು ಚಂದ್ರಹಾಸನ ಕಥೆಯನ್ನು ನಿರೂಪಿಸುವಂತಹದ್ದು. ಅವನ ದೈವಕೃಪೆಯನ್ನೇ ಈ ನಾಟಕ ವ್ಯಕ್ತಪಡಿಸುತ್ತದೆ. 'ಚಂದ್ರಹಾಸ' ನಾಟಕದ ದುಷ್ಟಬುದ್ಧಿಯ ಪಾತ್ರ ಎಲ್ಲ ಹಂತದಲ್ಲೂ ಸಾಂಕೇತಿಕವಾಗಿ ಮೂಡಿ ಬಂದಿದೆ. ದುಷ್ಟಬುದ್ಧಿ ಲೋಕಪಾತ್ರದಲ್ಲಿ ಅಧಮನಾಗಿದ್ದರೂ ಕಲಾಪಾತ್ರದಲ್ಲಿ ಮಹೋಜ್ವಲಸ್ಥಾನ ಪಡೆದನು. ಅವನ ದೋಷಗಳು ಸಹ ಮಗನ ಮೇಲಿನ ಅತಿಯಾದ ಮಮತೆಯಿಂದಲೇ ಉಂಟಾಗುತ್ತವೆ. 'ವ್ಯಕ್ಷಭೈರವ' ಪಾತ್ರವಂತು ಇಡೀ ಭಾರತೀಯ ಸಾಹಿತ್ಯದಲ್ಲಷ್ಟೇ ಅಲ್ಲದೇ ವಿಶ್ವಸಾಹಿತ್ಯದಲ್ಲಿಯೂ ವಿನೂತನವಾಗಿದೆ. 'ಚಂದ್ರಹಾಸ' ನಾಟಕವನ್ನು ಮಾನವೀಯ ಭಾವನೆಗಳ ಕೋಶವೆಂದೇ ಹೇಳಬಹುದು.

'ಕಾನೀನ' ನಾಟಕವು ಕರ್ಣನನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿದೆ. ಪಂಪನು 'ವಿಕ್ರಮಾರ್ಜುನ ವಿಜಯ'ದಲ್ಲಿ ಕರ್ಣನ ಬಗ್ಗೆ ಹೇಳುತ್ತಾ ಅರ್ಜುನನನ್ನು ನಾಯಕನನ್ನಾಗಿ ಮಾಡಿಕೊಂಡಿದ್ದರೂ 'ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆ' ಎಂದಿದ್ದಾನೆ. ಕುವೆಂಪು ಕಾನೀನ ನಾಟಕದಲ್ಲಿ ಕರ್ಣನ ಜೀವನ ವೃತ್ತಾಂತವನ್ನು ಹಿನ್ನೆಲೆಯಾಗಿ ಮಾಡಿಕೊಂಡಿದ್ದಾರೆ. ಸೂರ್ಯನ ವರಪ್ರಸಾದದಿಂದ ಕುಂತಿ ಮಗುವನ್ನು ಪಡೆದು ಲೋಕಾಪವಾದಕ್ಕೆ ಹೆದರಿ ಗಂಗೆಗೆ ಒಪ್ಪಿಸುವ ಪ್ರಸಂಗ ಮತ್ತು ಆ ಮಗು ಸೂತನಿಗೆ ಸಿಕ್ಕಿ 'ರಾಧೇಯ'ನಾಗುವ, ಬಿಲ್ವಿದ್ಯೆ ಕಲಿಯುವ ಹಂಬಲ ಹಾಗೂ ಕರ್ಣನ ಮಹತ್ವಾಕಾಂಕ್ಷೆಯಿಂದ ಪರಶುರಾಮನಲ್ಲಿ ವಿದ್ಯೆ ಕಲಿತ ಪ್ರಸಂಗವನ್ನೂ, ಹಸ್ತಿನಾವತಿಗೆ ಬಂದು ದುರ್ಯೋಧನನ ಸಖ್ಯ ಬೆಳೆಸಿ ಆತನಿಗೆ ಪ್ರೀತಿ ಪಾತ್ರನಾಗುವ ಸನ್ನಿವೇಶಗಳು ಮನೋಜ್ಞವಾಗಿವೆ.

ಕೃಷ್ಣನನ್ನು ಎದುರಿಸುವ ಕರ್ಣನ ನೈತಿಕ ಬಿಕ್ಕಟ್ಟು, ಭಾವನಾತ್ಮಕ ಸಂಘರ್ಷ ಅತ್ಯಂತ ತೀವ್ರವಾದುದು.

****

ಅಡಿಟಿಪ್ಪಣಿ

೧. ಕುವೆಂಪು ಸಮಗ್ರ ನಾಟಕ, ಸಂ.ಡಾ.ಕೆ.ಸಿ.ಶಿವಾರೆಡ್ಡಿ, ಪುಟ ೬೮೮.

೨. ಕುವೆಂಪು ಸಮಗ್ರ ನಾಟಕ, ಸಂ.ಡಾ.ಕೆ.ಸಿ.ಶಿವಾರೆಡ್ಡಿ, ಪುಟ ೬೮೭.

೩. ಅದೇ, ಪುಟ ೮.

೪. ಕುವೆಂಪು ಸಮಗ್ರ ನಾಟಕ, ಸಂ.ಡಾ.ಕೆ.ಸಿ.ಶಿವಾರೆಡ್ಡಿ, ಪುಟ ೭.

೫. ಅದೇ, ಪುಟ ೧೯.

೬. ಅದೇ, ಪುಟ ೩೬.

೭. ಅದೇ, ಪುಟ ೬೯.

ಅಧ್ಯಾಯ-೩

ವರ್ಗ ಪರಿಕಲ್ಪನೆ

ವರ್ಗ ಪರಿಕಲ್ಪನೆ

ಕುವೆಂಪುರವರ ನಾಟಕಗಳಲ್ಲಿ ವರ್ಗ ಪರಿಕಲ್ಪನೆಗಳನ್ನು ಗುರುತಿಸಬಹುದು. ವರ್ಗ ಮತ್ತು ವರ್ಣ ಪದ್ಧತಿಗಳು ಬೇರೆ ಬೇರೆ ಪರಿಕಲ್ಪನೆಯಲ್ಲಿ ಕಂಡುಬರುವುದನ್ನು ಕಾಣಬಹುದು. ವರ್ಣ ವ್ಯವಸ್ಥೆಯಲ್ಲಿ ಧರ್ಮ, ಜಾತಿ, ಅಸ್ಪೃಶ್ಯತೆ ಈ ರೀತಿಯಾಗಿ ಕಂಡುಬಂದರೆ, ವರ್ಗ ವ್ಯವಸ್ಥೆಯಲ್ಲಿ ಸಾಮಾಜಿಕವಾಗಿ ಕಂಡುಬರುವ ರೈತ ವರ್ಗ, ಕಾರ್ಮಿಕ ವರ್ಗ, ವಿದ್ಯಾವಂತ ವರ್ಗ, ಅವಿದ್ಯಾವಂತ ವರ್ಗ, ಶಿಕ್ಷಿತ ವರ್ಗ, ಅಶಿಕ್ಷಿತ ವರ್ಗ, ಆರ್ಥಿಕವಾಗಿ ಮೇಲುವರ್ಗ, ಕೆಳವರ್ಗ, ನಗರ ಸಂಸ್ಕೃತಿ ವರ್ಗ, ಹಳ್ಳಿ ಸಂಸ್ಕೃತಿ ವರ್ಗ, ಸ್ತ್ರೀ ವರ್ಗ, ಪುರುಷ ವರ್ಗ ಇತ್ಯಾದಿಯಾಗಿ ಗುರುತಿಸಿಕೊಂಡು ಈ ಎರಡೂ (ವರ್ಗ, ವರ್ಣ) ಸ್ತರಗಳನ್ನು ಕುವೆಂಪು ನಾಟಕದಲ್ಲಿ ವರ್ಣಾಶ್ರಮಧರ್ಮ, ಜಾತಿ ಪದ್ಧತಿಯ ವೈಷಮ್ಯಗಳು, ಆರ್ಥಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದು.

ಹಿಂದೂ ಧರ್ಮದೊಳಗಿದ್ದೇ ವರ್ಣವ್ಯವಸ್ಥೆಯನ್ನು ವಿರೋಧಿಸುವ ಕ್ರಮವನ್ನು ಕುವೆಂಪು ಅವರಲ್ಲಿ ನಾವು ಕಾಣುತ್ತೇವೆ.

ಕುವೆಂಪು ಅವರ ಜಾತಿ ಪದ್ಧತಿಯ ವಿರೋಧ ಸ್ವಲ್ಪಮಟ್ಟಿಗೆ ಕೇರಳದ ಬ್ರಾಹ್ಮಣೇತರ ಜಾತಿಗಳ ಹೋರಾಟದ ಸ್ವರೂಪವನ್ನು ಹೋಲುವಂಥದು. ಕೇರಳದ ಬ್ರಾಹ್ಮಣೇತರ ಜಾತಿಗಳ ಚಳವಳಿ ತಮಿಳುನಾಡಿನಲ್ಲಿಯಂತೆ ಸಿಟ್ಟಿನ, ಆಕ್ರೋಶದ ಸಮಗ್ರ ತಿರಸ್ಕಾರದ ರೂಪವನ್ನು ಪಡೆಯಲಿಲ್ಲ. ಬದಲಾಗಿ ಇದು ಸಾಮಾಜಿಕ ಧಾರ್ಮಿಕ ಸುಧಾರಣಾ ಚಳುವಳಿಯ ರೂಪವನ್ನು ಪಡೆಯಿತು. ಆದರೆ ಇದೆಲ್ಲವೂ ನಡೆದದ್ದು ಸಾಂಪ್ರದಾಯಿಕ, ಧಾರ್ಮಿಕ ಪರಿಭಾಷೆಯಲ್ಲಿಯೇ. ಹಿಂದೂ ಧರ್ಮದ ಸಂವಿಧಾನದ ಚೌಕಟ್ಟಿನಲ್ಲೇ ಒಳಗಿನ ಬಂಡಾಯಗಾರರಾಗಿ ಉಳಿದದ್ದು ಕುವೆಂಪು ಅವರ ಸೃಜನಶೀಲ ಜೀವನದ ಅತ್ಯಂತ ಮುಖ್ಯ ಸಂಗತಿ. ವರ್ಣ ವ್ಯವಸ್ಥೆಯ ಕೆಲವು ಅಂಶಗಳನ್ನು ಧಿಕ್ಕರಿಸಿ, ಮತ್ತೆ ಕೆಲವನ್ನು ತಿರಸ್ಕರಿಸದೇ ಹೋದದ್ದು ನಮ್ಮ ಆಧುನಿಕ ಸಂಸ್ಕೃತಿಯ ಚರಿತ್ರೆಯಲ್ಲಿ ಗಮನಾರ್ಹ ಸಂಗತಿಯಾಗಿ ಉಳಿದಿದೆ.

ಉತ್ಪಾದನಾ ವ್ಯವಸ್ಥೆಯ ಹಿನ್ನೆಲೆಯಲ್ಲಿ ಶ್ರೇಣೀಕರಣಗಳನ್ನು ವಿಂಗಡಿಸುವುದೇ ವರ್ಗ ಎಂಬ ಹಿನ್ನೆಲೆಯಿಂದ ನೋಡಿದಾಗ ಕುವೆಂಪು ಕೆಲವು ಶ್ರೇಷ್ಠ ಸಮಾಜವಾದಿ ಕೃತಿಗಳನ್ನು ರಚಿಸಿದ್ದಾರೆ. ಕಲ್ಕಿ, ಧನ್ವಂತರಿಯ ಚಿಕಿತ್ಸೆ, ಸಾಲದ ಮಗು ಮುಂತಾದ ಕೃತಿಗಳು ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೇ ಶ್ರೇಷ್ಠ ಸಮಾಜವಾದಿ ಕೃತಿಗಳ ಸಾಲಿಗೆ ಸೇರುವಂಥವು.

ಸಮಾಜ ಶಾಸ್ತ್ರಜ್ಞ ಎಂ.ಎನ್.ಶ್ರೀನಿವಾಸ್ 'ಈ ವರ್ಣ ವ್ಯವಸ್ಥೆಯ ಮಾಡೆಲ್ ಜಾತಿ ಪದ್ಧತಿಯ ತಪ್ಪು ಹಾಗೂ ತಿರುಚಿದ ಚಿತ್ರಣವನ್ನು ನೀಡುತ್ತದೆ. ಜಾತಿ ಪದ್ಧತಿಯನ್ನು ಅರ್ಥಮಾಡಿಕೊಳ್ಳಬಯಸುವ ಎಲ್ಲ ಸಮಾಜ ವಿಜ್ಞಾನಿಗಳು ಈ 'ವರ್ಣ'ದ ಮಾಡೆಲ್ಲಿನಿಂದ ಬಿಡುಗಡೆ ಹೊಂದಬೇಕಾಗಿದೆ"[9] ಎನ್ನುತ್ತಾರೆ. 'ವರ್ಣ' ಎನ್ನುವ ಪರಿಕಲ್ಪನೆಗಿಂತ ಜಾತಿ-ಉಪಜಾತಿ ಎನ್ನುವ ಪರಿಕಲ್ಪನೆಗಳೇ ಹೆಚ್ಚು ಉಪಯುಕ್ತವಾದದ್ದು ಎಂಬ ವಾದವನ್ನು ಬಹುತೇಕ ಆಧುನಿಕ ಸಮಾಜ ವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ಆದರೆ ಕುವೆಂಪು ಅವರ ಕೃತಿಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ಸ್ವಾರಸ್ಯಕರ ಸಂಗತಿಯೊಂದಿದೆ. ಅವರ ಬಹುಪಾಲು ಕಾವ್ಯ,

ನಾಟಕಗಳಲ್ಲಿ ಬರುವ ಸಾಮಾಜಿಕ ಸಂಘರ್ಷದ ಸ್ವರೂಪವನ್ನು ವಿವರಿಸಬೇಕಾದರೆ 'ವರ್ಣ ವ್ಯವಸ್ಥೆ'ಯ ಪರಿಕಲ್ಪನೆಯನ್ನೇ ಬಳಸಿಕೊಳ್ಳಬೇಕಾಗುತ್ತದೆ.

ಕುವೆಂಪು ಅವರು ನಂಬಿರುವ ತತ್ವ ಮತೀಯವಲ್ಲದ ಅಧ್ಯಾತ್ಮ. ಅವರು ಭಾರತೀಯ ಸಂಸ್ಕೃತಿಯನ್ನು ಎಲ್ಲರಂತೆ 'ವೈದಿಕ ಸಂಸ್ಕೃತಿ' ಎಂದು ಕರೆಯುವುದಿಲ್ಲ. ಅದರಲ್ಲಿ ಅವೈದಿಕ ಸಂಸ್ಕೃತಿಯ ಪಾತ್ರವೂ ತೀರ ಮುಖ್ಯ ಎಂಬುದನ್ನು ಅವರು ನಂಬಿದವರು ಮತ್ತು ಪ್ರತಿಪಾದಿಸಿದವರು. ವೈದಿಕ ಅವೈದಿಕ ಮೂಲತಃ ಎರಡೂ ಒಂದೇ, ಬೇರೆ ಬೇರೆ ಅಲ್ಲ. ವೈದಿಕಕ್ಕೆ ಬೆಳವಣಿಗೆಯ ಅವಕಾಶ ಮತ್ತು ಪ್ರೋತ್ಸಾಹ ದೊರೆತರೆ, ಅವೈದಿಕ ಅಂಥ ಪ್ರೋತ್ಸಾಹವಿಲ್ಲದೆ ಸೊರಗಿ ಹೋಯಿತು. ಅವೈದಿಕಕ್ಕೂ ಅವಕಾಶ ದೊರೆತರೆ, ಅದು ವೈದಿಕಕ್ಕಿಂತ ಮಿಗಿಲಾಗಿ ಬೆಳವಣಿಗೆ ಹೊಂದುತ್ತದೆ ಎಂದು ಅವರು ತಿಳಿದವರು. ಮತೀಯತೆಯಲ್ಲಿ ನಂಬಿಕೆ ಕಳೆದುಕೊಂಡು ಕುವೆಂಪು ಅವರು ತಮ್ಮ ಜೀವನದುದ್ದಕ್ಕೂ ವೈದಿಕತೆಯನ್ನು ಸವಾಲಾಗಿ ತೆಗೆದುಕೊಂಡರು. ವೈದಿಕತೆಯ ಎಲ್ಲ ಸವಲತ್ತುಗಳನ್ನು ದಕ್ಕಿಸಿಕೊಂಡು, ಅದು ಸಾದಿಸದ್ದನ್ನು ಕೂಡ ಸಾಧಿಸಿದರು. ವೈದಿಕತೆಯ ಹೆಸರಿನಲ್ಲಿ ಸಮಾಜವನ್ನು ಕಬಳಿಸುತ್ತಿದ್ದ ಕುಶಕ್ತಿಯನ್ನು ಹೊಸ ಜಗತ್ತಿಗೆ ಪರಿಚಯಿಸಿದರು. ಅವೈದಿಕ ಜನಾಂಗದ ಪ್ರತಿನಿಧಿಯಾಗಿ ತಮ್ಮ ಸಾಹಿತ್ಯ ಸೃಷ್ಟಿ ಮಾಡಿದರು. ಇದನ್ನು ಕುವೆಂಪು ಅವರ 'ಜಲಗಾರ' ನಾಟಕದಲ್ಲಿ ವೈದಿಕ (ಬ್ರಾಹ್ಮಣ) ಮಾಡಲಾಗದ್ದನ್ನು ಅವೈದಿಕ (ಜಲಗಾರ) ಮಾಡಿ ತೋರಿಸಿದ್ದಾನೆ. ಅಂದರೆ ಬ್ರಾಹ್ಮಣರ ಶಿವನಲ್ಲ ಜಲಗಾರನ ಶಿವ ಎಂಬುದನ್ನು ಶಿವನಿಂದ ಬಯಲು ಮಾಡಿಸಿರುವುದನ್ನು ಕಾಣಬಹುದು.

ಶೂದ್ರರನ್ನು ಗುಲಾಮರನ್ನಾಗಿ ಮಾಡಿ ಮೂಢಪಶುಗಳಿಗಿಂತಲೂ ಕೀಳುಮಟ್ಟದಲ್ಲಿಟ್ಟು, ಅವರ ದುಡಿಮೆಯಿಂದ ತಾವು ಸುಖಭೋಗಿಗಳಾಗಿರುವ ಆಚಾರ್ಯ ನಾಮಕ ನೀಚರನ್ನು ವಿಚಾರವೇದಿಕೆಯ ಸಾಕ್ಷಿ ಪೆಟ್ಟಿಗೆಯಲ್ಲಿ ನಿಲ್ಲಿಸುವ ಧೈರ್ಯ ದೃಢತೆಗಳನ್ನು ನಮ್ಮ ತರುಣರಿಗೆ ಕಲಿಸಬೇಕು. ಹಳೆಯ ಶಾಸ್ತ್ರ, ಬೂಸಲು ಧರ್ಮ, ಕೇಡಿ ಜಗದ್ಗುರು, ಸ್ವಾರ್ಥಶೀಲ ಆಚಾರ್ಯ ಇವರನ್ನೆಲ್ಲ ಧಿಕ್ಕರಿಸುವಂತಾಗಬೇಕು ಎಂದು ಕುವೆಂಪು ಹೇಳುತ್ತಾರೆ.

'ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಭಕ್ತಿಯ ಪೂಜೆಯ ಹೆಸರಿನಲ್ಲಿ ಅನೇಕ ಪ್ರಸಿದ್ಧ ಪುಣ್ಯಕ್ಷೇತ್ರಗಳ ಹೆಸರಿನಲ್ಲಿ ಜನರನ್ನು ಹೆದರಿಸಿ ಯಾವ ರೀತಿ ಮೋಸ ಮಾಡುತ್ತಿದ್ದಾರೆ? ಸುಲಿಗೆ ಮಾಡುತ್ತಿದ್ದಾರೆ' ಎನ್ನುವುದನ್ನು ಸಾಮಾನ್ಯರಿಗೆ ಕಲಿತವರು ಹೇಳಬೇಕೆಂದು ಅವರನ್ನು ಪ್ರಚೋದಿಸುತ್ತಾರೆ.

'ಭರತ ಖಂಡದ ಪತನಕ್ಕೆ ಮುಖ್ಯ ಕಾರಣವೆಂದರೆ, ರಾಜವರ್ಗದವರ ಮತ್ತು ಪುರೋಹಿತವರ್ಗದವರ ಅಧಿಕಾರ ಬಲದಿಂದ ವಿದ್ಯಾಬುದ್ಧಿಗಳ ಸರ್ವ ಸ್ವಾಮ್ಯವೂ ಅತ್ಯಲ್ಪ ಸಂಖ್ಯೆಯ ಕೆಲವೇ ಕೆಲವು ಬ್ರಾಹ್ಮಣರ ಹಸ್ತಗತವಾದದ್ದು' ಎಂದು ನುಡಿದು, ಶೂದ್ರ ಸಮಾಜದ ದಾರುಣ ಪರಿಸ್ಥಿತಿಗೆ ಪುರೋಹಿತರೇ ಮೂಲಕಾರಣವೆಂಬ ಸ್ವಾಮಿ ವಿವೇಕಾನಂದರ ಅಭಿಪ್ರಾಯದ ಹೆಜ್ಜೆಯನ್ನೆ ಕುವೆಂಪು ಅವರು ಅನುಸರಿಸುತ್ತಾರೆ. 'ಉಚ್ಚ ವರ್ಣದ ಮತ್ತು ಉಚ್ಚ ವರ್ಗದ ಪ್ರತಿಯೊಂದು ಜಾತಿಯೂ ತನ್ನ ಕೈಯಿಂದಲೇ ತನ್ನ ಶ್ಮಶಾನ ಚಿತೆಯನ್ನು ರಚಿಸಿಕೊಳ್ಳುವುದು ಅದರ ಪ್ರಧಾನ ಕರ್ತವ್ಯವೇ ಆಗಬೇಕಾಗುತ್ತದೆ' ಎಂಬ ಮಾತನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕುವೆಂಪು ೧೯೩೦ರಷ್ಟು ಹಿಂದೆಯೇ ರಚಿಸಿದ 'ಶ್ಮಶಾನ ಕುರುಕ್ಷೇತ್ರಂ' ನಾಟಕದಲ್ಲಿ ಕೃಷ್ಣ ಹಾಡುವ ಭರತ ವಾಕ್ಯವಿಂತಿದೆ

ತಾಳ್ಮೆ, ತಾಳ್ಮೆ, ಓ ರುದ್ರ, ಕೆಡಿಸದಿರ್ ಕಾವ್ಯಮನ್....

ಮುಂಗಾಣಯ್... ಸಾರ್ವಭೌಮತ್ವ ಭಂಗಂ.....

ಸ್ವತಂತ್ರ ಭಾರತರಂಗಂ... ಸರ್ವಪ್ರಜಾಧಿಪತ್ಯಂ....

ಸರ್ವಸಮತ್ವಂ.... ಜಗತ್‌ಕಲ್ಯಾಣಂ......

ಭೂವೈಕುಂಠಂ.. ನೋಡದೋ.......

ದೂರದೊಳ್, ಬಹುದೂರದೊಳ್ ಕಾಲಗರ್ಭದೊಳ್...

ಸಾಮಾನ್ಯ ಮಾನವ ಸಂಸಾರಂ.. ಸತಿಪತಿಗಳ ಶೃಂಗಾರಂ...

ಮಕ್ಕಳಾಟಂ, ನೋಟಂ, ಕಾವ್ಯಂ

ಕಲಿಯುಗ ಮಹಾಕಾವ್ಯಂ!

ಸುಮಧುರಂ.... ದಿವ್ಯಂ. .... ಸುಶ್ರಾವ್ಯಂ

ನಮ್ಮ ರಾಜಕೀಯ ಆಂದೋಲನದ ಹಾಗೂ ಅರ್ಥಶಾಸ್ತ್ರದ ಗುರಿ ಎಲ್ಲಿಯ ತನಕ ಮುಂದುವರಿಯ ಬೇಕೆನ್ನುವುದನ್ನು ಪ್ರವಾದಿ ಕವಿಯ ವಾಣಿ ಸೂಚಿಸುತ್ತದೆ.

ಜಾತಿ ಕಲ್ಪನೆಯ ಬಗೆಗೆ ಕುವೆಂಪುರವರಿಗೆ ಸ್ಪಷ್ಟತೆಯಿದೆ. "ಜಾತಿಪದ್ಧತಿ, ವರ್ಣಾಶ್ರಮ ಇವುಗಳೆಲ್ಲಾ ಪುರಾಣಗಳು ಪ್ರಾರಂಭವಾದಾಗಿನಿಂದ ಶುರುವಾದವು. ಪ್ರಾರಂಭದಲ್ಲಿ ಜಾತಿ ಅನ್ನೋ ಭಾವನೆಯೇ ಇಲ್ಲ. ನೀವು ಉಪನಿಷತ್ತಿನ ಮಟ್ಟಕ್ಕೆ ಹೋದರೆ ಅಲ್ಲಿ ವಿಶ್ವತತ್ತ್ವಗಳಿವೆಯೇ ಹೊರತು, ಅವು ಯಾವುದೋ ಒಂದು ದೇಶಕ್ಕೆ, ಒಂದು ಕಾಲಕ್ಕೆ, ಒಂದು ಮತಕ್ಕೆ ಸಂಬಂಧಪಡತಕ್ಕಂತಹವಲ್ಲ. ಅಂತಹ ವಿಶ್ವತತ್ತ್ವಗಳನ್ನು ನಾವು ಮಾತ್ರವಲ್ಲ, ಪ್ರಪಂಚದ ಜನತೆ, ಬುದ್ಧಿವಂತ ಜನತೆಯೆಲ್ಲ ಮಾನ್ಯ ಮಾಡುತ್ತದೆ."[೨]

ವರ್ಗಗಳು ಪ್ರಜ್ಞಾವಂತ ವರ್ಗಗಳಾಗಿ ರೂಪುಗೊಂಡು ಪ್ರಗತಿಪರ ಚಾರಿತ್ರಿಕ ಹೋರಾಟ ನಡೆಸುವುದು ಇಂತಹ ಸಮಾಜಗಳಲ್ಲಿ ಅಸಾಧ್ಯ ಕೂಡಾ. ತುಂಬಿ ತುಳುಕುವ ದಾರಿದ್ರ್ಯವಿದ್ದರೂ, ಶೋಷಣೆಯಿದ್ದರೂ ಒಂದು ವರ್ಗ ತನಗಾಗಿ ಇದನ್ನು ಪ್ರತಿಭಟಿಸುವುದು ಸಾಧ್ಯವಾಗುವುದಿಲ್ಲ. ಬಂಡವಾಳಶಾಹೀ ಪೂರ್ವದ ಈ ಸಮಾಜ ವ್ಯವಸ್ಥೆಗಳಲ್ಲಿ ವಾಸ್ತವ ವ್ಯವಸ್ಥೆ ಮತ್ತು ನ್ಯಾಯಬದ್ಧ ವ್ಯವಸ್ಥೆಗಳ ನಡುವಿನ ಘರ್ಷಣೆ ಖಚಿತವಾಗಿ ರೂಪುಗೊಂಡಿರುವುದಿಲ್ಲ. ಇಲ್ಲಿರುವ ಅಶಾಂತಿಯ, ಸಂಘರ್ಷದ ಸ್ವರೂಪವೇ ಬೇರೆ. ಇದನ್ನೇ ಊಳಿಗಮಾನ್ಯ ಪದ್ಧತಿಯೊಳಗೆ ನಡೆಯುವ 'ಮೌನಸಂಘರ್ಷ' ಎನ್ನುವುದು.

ಆರ್ಥಿಕ ಅಸಮಾನತೆಯ ಬಗ್ಗೆ ಕುವೆಂಪುರವರಿಗೆ ಆಕ್ರೋಶವಿದ್ದುದನ್ನು ಕಾಣಬಹುದು. ಆರ್ಥಿಕ ಅಸಮಾನತೆಯಿಂದ ದೇಶದ ಉದ್ಧಾರ ಆಗುವುದಿಲ್ಲ, ಜನರ ಬದುಕು ಹಸನಾಗುವುದಿಲ್ಲ ಎಂಬುದು

ಅವರ ನಿಲುವಾಗಿತ್ತು ಎಂಬುದನ್ನು ತಿಳಿಯಬಹುದು.

ಭಾರತದಲ್ಲಿ ಅಸಮಾನತೆಯ ದ್ಯೋತಕವಾಗಿ ಅತಿ ಶ್ರೀಮಂತಿಕೆ, ಅತಿ ಬಡತನ ಕಾಣುತ್ತಿದೆ. ಇದಕ್ಕೆ ಕಲ್ಕಿ ಪದ್ಯವನ್ನು ಉದಾಹರಿಸಬಹುದು.

ಧನಿಕರ ಮನೆಗಳು ಒಂದೆಡೆ ನಿಂತಿವೆ
ಬಡವರ ಗುಡಿಸಲು ಒಂದೆಡೆ ನಿಂತಿವೆ.
ಜ್ಯೋತಿಯ ಮಣಿದೀಪಗಳಲ್ಲಿ,
ಕತ್ತಲು, ಕಗ್ಗತ್ತಲು ಇಲ್ಲಿ!
ಹಾಡಿನ ನುಣ್ದನಿಯತ್ತ,
ಗೋಳಿನ ನೀಳ್ದನಿಯಿತ್ತ!
ಕೂಳನು ಹೆಮ್ಮೆಗೆ ಬಿಸುಡುವರಲ್ಲಿ,
ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲಿ!
ಆ ಕಡೆ ಉದ್ಯಾನ,
ಈ ಕಡೆ ಶ್ಮಶಾನ!
ಪೀತಾಂಬರಗಳ ಹೊದೆಯುವರಲ್ಲಿ
ಕೌಪೀನಕೆ ಚಿಂದಿಯು ಸಿಗದಿಲ್ಲಿ!
ನೋಡುತ ನೋಡುತ ನೋಡುತ್ತಿದ್ದೆ;
ನೋಡುತ್ತಿರೆಯಿರೆ ಬೆಚ್ಚಿ ಬಿದ್ದೆ:
ಬಡಬಗ್ಗರ ಜಠರಾಗ್ನಿಯು ಎದ್ದು,
ಗುಡಿಸಲುಗಳಿಗೇ ಬೆಂಕಿಯು ಬಿದ್ದು,
ಧಗಧಗ ಧಗಧಗ ಹೊತ್ತಿದುದು,
ಭುಗಿಭುಗಿಲೆನ್ನುತ ಮುತ್ತಿದುದು!
ಮುಗಿಲಿನವರೆಗೂ ಬಾನಿನವರೆಗೂ
ದಿಕ್ಕು ದಿಕ್ಕುಗಳ ಜುಟ್ಟಿನವರೆಗೂ
ಬಡವರ ಬೆಂಕಿಯು ನಾಲಗೆ ಚಾಚಿ

ಶ್ರೀಮಂತರನಪ್ಪಿತು ಬಾಚಿ!

ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರಗಳ ದಾರ್ಶನಿಕ ಚಿತ್ರ ನೀಡುವ ಕುವೆಂಪುರವರ 'ಬಲಿದಾನ' ನಾಟಕದಲ್ಲಿ ತೀವ್ರತರವಾದ ವೈಚಾರಿಕತೆಯಿದೆ. ಅದರಲ್ಲೂ ಸ್ವತಂತ್ರ ಭಾರತಕ್ಕೆ ಮಾರಕವಾದ ಜಾತಿಮತ ವ್ಯವಸ್ಥೆ ತೊಲಗಬೇಕೆಂಬ ಸಂದೇಶವಿದೆ. "ಬಲಿದಾನಕುಂಟೆ ಕೊನೆ? ಬಲಿಪರಂಪರೆಯಲ್ತೆ ಸ್ವಾತಂತ್ರ್ಯ ಜೀವನಂ" ಎಂದು ಕವಿ ಪ್ರಶ್ನಿಸಿದ್ದಾರೆ.

ಕುವೆಂಪು ಪುರೋಹಿತ ಶಾಹಿ ವಿರುದ್ಧ ಬೆಳೆಸಿಕೊಂಡ ವೈಚಾರಿಕತೆಯ ಆರಂಭದ ಬೀಜಗಳು ಅವರ ಬದುಕಿನ ಘಟನೆಗಳಲ್ಲಿ ಮನೆ ಮಾಡಿವೆ. ಮಾಧ್ಯಮಿಕ ಶಾಲೆಯಲ್ಲಿ ಅವರು ಸ್ವಯಂ ಇಚ್ಛೆಯಿಂದಾಗಿ ಸಂಸ್ಕೃತ ಆರಿಸಿಕೊಂಡಾಗ "ಸಂಸ್ಕೃತ" ಕಷ್ಟ ಕಣೋ. ಅದು ಬ್ರಾಹ್ಮಣರಿಗೆ ಮಾತ್ರ ಎಂದು ಬ್ರಾಹ್ಮಣ ಗುರುಗಳು ಹೆದರಿಸಿದ್ದು, ಬ್ರಾಹ್ಮಣ ಶಾಲೆಗಳಲ್ಲಿ ಬ್ರಾಹ್ಮಣ ಹುಡುಗರು ಬೇರೆ ಮತ್ತು ಒಕ್ಕಲಿಗ ಹುಡುಗರು ಬೇರೆ ಕೂರಬೇಕಾದ ಪರಿಸ್ಥಿತಿ, ಶಾಲೆಗೆ ಬರುವಾಗ ಪ್ರತಿಯೊಬ್ಬರೂ ಕಡ್ಡಾಯವಾಗಿ 'ಜಾತಿ ಲಲಾಟ'ದಲ್ಲಿ ಬರಬೇಕೆಂಬ ಕಡ್ಡಾಯ ವಿಧಿ. ಇವೆಲ್ಲವೂ ಶೂದ್ರ ಲೋಕದ ಹಳ್ಳಿಯಿಂದ ಬಂದಂತಹ ಮುಗ್ಧ ಬಾಲಕನ ಸೂಕ್ಷ್ಮ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿರುವುದು ಕಂಡುಬರುತ್ತದೆ. ಆಂಗ್ಲೇಯ ರೀತಿಯ ಶಾಲೆಗಳು ಪ್ರಾರಂಭವಾದಾಗ ಬ್ರಾಹ್ಮಣರು ಆ ಶಾಲೆಗಳೆಲ್ಲಾ ತಮಗೆ ಮಾತ್ರ ಮೀಸಲೆಂಬ ಮನೋಭಾವದಿಂದ ವರ್ತಿಸುತ್ತಿದ್ದರು. ಮನುವಿನಂತೆಯೇ ಇಂಗ್ಲಿಷರೂ ತಮ್ಮ ಸನಾತನ ಧರ್ಮ ರಕ್ಷಣೆಗೆ ಬದ್ಧರಾಗಿದ್ದಾರೆ ಎಂದು ಬ್ರಾಹ್ಮಣರು ಭಾವಿಸಿದಂತೆ ತೋರುತ್ತದೆ. ವಿಜಯನಗರ ಮೊದಲಾದ ಹಿಂದೂ ರಾಜ್ಯಗಳ ದೊರೆಗಳಂತೆ ಇಂಗ್ಲಿಷರು ಬ್ರಾಹ್ಮಣ ಶಾಪಕ್ಕೆ ಹೆದರಲಿಲ್ಲವಾದ್ದರಿಂದ ಶೂದ್ರರ ಮಕ್ಕಳು ಶಾಲೆಗೆ ಹೋಗುವಂತಾಯಿತು.

ಕುವೆಂಪುರವರು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಬರೆದಾಗ ಎಂತೋ ಅಂತೆಯೇ ಮಲನ ಕಥೆ ಬರೆದಾಗಲೂ (೧೯೨೪) "ಕೆಲವು ಬ್ರಾಹ್ಮಣರು ನಾನು ಬ್ರಾಹ್ಮಣನೇ ಇರಬೇಕೆಂದು ವಾದಿಸಿದರಂತೆ. ಅವರ ಪ್ರಕಾರ ಬ್ರಾಹ್ಮಣ ಜಾತಿಯಲ್ಲಿ ಹುಟ್ಟದವನಿಗೆ ಕಾವ್ಯ ಬರೆಯುವುದು ಸಾಧ್ಯವೇ ಇಲ್ಲ. ಬ್ರಾಹ್ಮಣರ ಮುಂದೆ ತಾವು ಎಲ್ಲದರಲ್ಲಿಯೂ ಕೀಳು ಮತ್ತು ನೀಚರೆಂಬ ಭಾವನೆ ಶೂದ್ರ ವರ್ಗದಲ್ಲಿ ಶತಶತಮಾನಗಳಿಂದ ಬೇರೂರಿ ಹೋಗಿತ್ತು" ಎಂದು ಬರೆದಿದ್ದಾರೆ. ಇಂತಹ ಪ್ರಸಂಗವನ್ನೇ ಅವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಎದುರಿಸಿದ್ದನ್ನು ದಾಖಲಿಸುತ್ತಾ ಇವರ ಕವನಗಳನ್ನು ಮೆಚ್ಚಿ 'ಶಾಸ್ತ್ರಿ' ಅನ್ನುವವರು ಇವರು ಬ್ರಾಹ್ಮಣರೇ ಇರಬೇಕೆಂದು ಭಾವಿಸುತ್ತಾರೆ. "ಬ್ರಾಹ್ಮಣನಲ್ಲದವನಿಗೆ ಅಂತಹ ವ್ಯಕ್ತಿತ್ವವಾಗಲಿ, ಕಾವ್ಯ ರಚನಾ ಶಕ್ತಿಯಾಗಲಿ, ಅಲಭ್ಯವೆಂದು ಆಗಿನ ಕಾಲದವರ, ಅದರಲ್ಲಿಯೂ ಉಚ್ಚವರ್ಗದರವ ಭಾವನೆಯಾಗಿತ್ತು"[೩] ಎಂಬುದನ್ನು ಅವರೇ ದಾಖಲಿಸಿದ್ದಾರೆ.

ಬ್ರಾಹ್ಮಣರು ಸಮಾಜದಲ್ಲಿ ಅತ್ಯಂತ ಮೇಲುವರ್ಗದವರು. ಅವರು ದರಿದ್ರರಾಗಿರಲಿ, ಕೊಳಕರಾಗಿರಲಿ, ಜಾರರಾಗಿರಲಿ, ಚೋರರಾಗಿರಲಿ ಅವರಿಗೆ ಅಗ್ರ ಮರ್ಯಾದೆ ಸಲ್ಲಬೇಕು. ಮಂಜುನಾಥಭಟ್ಟರು ಅತ್ಯಂತ ದೀನದರಿದ್ರಾವಸ್ಥೆಯಲ್ಲಿ ಮಲೆನಾಡಿಗೆ ಬಂದವರು. ತಾವು ಮೇಲು

ಜಾತಿಯವರೆಂಬ ಕಾರಣಕ್ಕಾಗಿ ಎಲ್ಲರಿಂದಲೂ ಗೌರವವನ್ನು, ಆಶ್ರಯವನ್ನು ಪಡೆದವರು. ಆದರೆ ಕಾಲಕ್ರಮೇಣ ಅಲ್ಲಿನ ಮಣ್ಣಿನ ಮಕ್ಕಳನ್ನು ಪರಸ್ಪರ ಎತ್ತಿ ಕಟ್ಟಿ ತಾವು ಲಾಭಗಿಟ್ಟಿಸಿಕೊಂಡು, ಮೋಸ-ಕಪಟಗಳಿಂದ ಅವರವರ ಸ್ವತ್ತನ್ನು ಎತ್ತಿಹಾಕಿ ಭಾರೀ ಶ್ರೀಮಂತರಾದರು.

ಬ್ರಾಹ್ಮಣ ವರ್ಗಕ್ಕಿಂತ ಕೆಳಗಿನ ಸ್ತರದವರು ಗೌಡರು. ಅವರ ಬಳಿ ಜೀತ ಮಾಡುವ ಹೊಲೆಯರು, ದೀವರು, ಬಿಲ್ಲವರು ಮುಂತಾದವರನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುತ್ತಾರೆ. ಅವರಿಗೂ ತಮ್ಮಂತೆಯೇ ಮಾನ-ಮರ್ಯಾದೆಯಿದೆ ಎಂಬುದನ್ನು ಅವರು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಕೆಳಜಾತಿಯವರ ಹೆಣ್ಣುಗಳನ್ನು ಗೌಡರು ಅನುಭೋಗಿಸಬಹುದು. ಅವರ ಮನೆಯಳಗೆ ಹೋಗಿ ಸರಸವಾಡಬಹುದು. ಆದರೆ ಇವರ ಮನೆಯ ಹೊಸ್ತಿಲನ್ನು ಅವರು ದಾಟುವಂತಿಲ್ಲ. ದೂರದಲ್ಲಿ ಕಂಡ ಕೂಡಲೇ ಅವರು ಮುಖ ಅಡಿಯಾಗಿ ಬೀಳಬೇಕು. ಇವರ ಸಾಲದ ಮಕ್ಕಳಾಗಿ ಅವರು ವಂಶಪಾರಂಪರ್ಯವಾಗಿ ದುಡಿಯಬೇಕು.

ಈ ಜೀತದಾಳುಗಳಲ್ಲೇ ಪರಸ್ಪರ ಮಡಿ-ಮೈಲಿಗೆ ದೀವರು-ಗೌಡರುಗಳ ಮನೆಗೆ ಹೋಗುವಂತಿಲ್ಲವಾದರೆ, ದೀವರ ಮನೆಗೆ, ಬಿಲ್ಲವರ ಮನೆಗೆ ಹೊಲೆಯನು ಹೋಗುವಂತಿರಲಿಲ್ಲ. ಹೊಟ್ಟೆಪಾಡಿಗಾಗಿ ಹೊರ ದೇಶಗಳಿಂದ ಬಂದ ಸಾಬರು ಇಲ್ಲಿ ಮತ್ತೊಂದು ಶೋಷಕ ವರ್ಗವಾಗುತ್ತಾರೆ. ತಮ್ಮ ಕ್ರೌರ್ಯದಿಂದ ಬಡವರನ್ನು, ಅಶಕ್ತರನ್ನು, ಮುಗ್ಧರನ್ನು ಹಿಂಸಿಸುತ್ತಾರೆ. ತಮ್ಮ ಒಡೆಯರಿಗಾಗಿ ವಸೂಲು ಮಾಡುವ ಸಾಲದ ಜೊತೆಗೆ, ಹೆದರಿಸಿ ಬೆದರಿಸಿ ತಮ್ಮ ಮಾಮೂಲನ್ನೂ ವಸೂಲು ಮಾಡಿಕೊಳ್ಳುತ್ತಾರೆ. ವ್ಯಾಪಾರದಲ್ಲಿ ಮೋಸ, ಕಳವು, ದರೋಡೆ ಮತ್ತು ಅತ್ಯಾಚಾರಗಳಿಂದ ಅಸಹಾಯಕರನ್ನು ಶೋಷಿಸುತ್ತಾರೆ.

ರಾಜಕಾರಣ ಮತ್ತು ವ್ಯಾಪಾರಕ್ಕಾಗಿ ವಿದೇಶಗಳಿಂದ ಬಂದ ಕ್ರೈಸ್ತ ಪಾದ್ರಿಗಳು ಮಲೆನಾಡಿನ ಜನರ ಮುಗ್ಧತೆಯನ್ನು ಬಂಡವಾಳ ಮಾಡಿಕೊಂಡು ಅವರ ಜಾತಿ, ಆಚಾರವಿಚಾರಗಳನ್ನು ಹೀಗಳೆದು, ಹಲವಾರು ಆಮಿಷಗಳನ್ನೊಡ್ಡಿ ತಮ್ಮ ಮತವನ್ನು ಹೇಗೆ ಹರಡುತ್ತಾರೆಂಬುದನ್ನೂ ಇಲ್ಲಿ ಚಿತ್ರಿಸಲಾಗಿದೆ. ಇದು ಶೋಷಣೆಯ ಮತ್ತೊಂದು ಮುಖವನ್ನು ಅನಾವರಣಗೊಳಿಸುತ್ತದೆ.

ಕುವೆಂಪುರವರ ವರ್ಗಪರಿಕಲ್ಪನೆಯ ದೃಷ್ಟಿಯಲ್ಲಿ ಕಿತ್ತು ತಿನ್ನುವ ಬಡತನ, ಶೋಷಣೆಯಿದ್ದರೂ ಈ ಸಮಾಜಗಳಲ್ಲಿ ಬಂಡಾಯದ ಪ್ರಜ್ಞೆ ಏಕೆ ಮೂಡಲಿಲ್ಲ ಎಂಬುದಕ್ಕೆ ಖ್ಯಾತ ಬ್ರಿಟಿಷ್ ಚರಿತ್ರಕಾರ ಹಾಬ್ಸ್ವಾಮ್ ಬೇರೆ ರೀತಿಯಲ್ಲಿ ಉತ್ತರಿಸುತ್ತಾನೆ. ಆತನ ಪ್ರಕಾರ ಬಂಡವಾಳಶಾಹಿಯಲ್ಲದ ಹಿಂದುಳಿದ ಸಮಾಜಗಳಲ್ಲಿ ವರ್ಗಪ್ರಜ್ಞೆ ಪೂರ್ಣವಾಗಿ ಹರಳುಗಟ್ಟಲು ಸಾಧ್ಯವಿಲ್ಲ. ಆದ್ದರಿಂದ ಇಲ್ಲೆಲ್ಲಾ ವರ್ಗಸಂಘರ್ಷ ಅಸಂಘಟಿತವಾದ ಪ್ರಿಮಿಟಿವ್ ಎನ್ನಬಹುದಾದ ಕ್ರಿಯೆಗಳ ಮೂಲಕ ವ್ಯಕ್ತವಾಗುತ್ತದೆ. ವ್ಯವಸ್ಥೆಯ ಕಟ್ಟುಪಾಡುಗಳ ಹಿಂಸಾತ್ಮಕ ಉಲ್ಲಂಘನೆಯಾಗಿ ವ್ಯಕ್ತವಾಗುತ್ತದೆ. ಈ ಮೇಲಿನ ಚಿತ್ರಣವನ್ನು ನಾವು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ನೋಡಬಹುದು.

ಮಲೆನಾಡಿನ ಜೀವನವನ್ನು, ವರ್ಗ ಸಂಬಂಧಗಳನ್ನು ಕುರಿತು ಕನ್ನಡ ಪರಂಪರೆಯಲ್ಲಿ ಹಿಂದೆ

ಕಾಣದಂತಹ ಹೊಸ ದರ್ಶನವೊಂದನ್ನು ಕುವೆಂಪು ಸಾಧಿಸಿದ್ದಾರೆ. ಶ್ರೇಷ್ಠದರ್ಜೆಯ ಕಲಾವಿದನೊಬ್ಬನಿಗೆ ಮಾತ್ರ ಈ ರೀತಿಯ ಸಾಧನೆ ಸಾಧ್ಯ. ಒಟ್ಟಾರೆಯಾಗಿ ಹೇಳುವುದಾದರೆ, ಕುವೆಂಪು ಅವರ ಕೇಂದ್ರ ಕಾಳಜಿಗಳು. ಧಾರ್ಮಿಕ ಮಾನವತಾವಾದದ ಕಾಳಜಿಗಳು, ಇಂಥ ಕಾಳಜಿಗಳುಳ್ಳ ಸಾಹಿತಿ ವರ್ಣ-ವರ್ಗ ಸಂಘರ್ಷದಂದ ತೀರಾ ಮುಕ್ತ. ದಿನ ನಿತ್ಯದ ಸಂಬಂಧಗಳನ್ನು ತನ್ನ ಸೃಜನಶೀಲ ಜೀವನದ ಉನ್ನತ ಹಂತಗಳಲ್ಲಿ ಒಳಗೊಳ್ಳಲು ಯತ್ನಿಸುವುದಿಲ್ಲ. ಚರಿತ್ರೆಯಲ್ಲಿನ ಹಿಂಸೆಯನ್ನು ಭೀತನಾಗಿ, ಅದನ್ನೇ ಮುಖ್ಯ ಕಾಳಜಿಯಾಗಿರಿಸಿಕೊಂಡ ಲೇಖಕ ಶೇಕ್ಸ್‌ಪಿಯರನಿಗಿಂತ ಧಾರ್ಮಿಕ ಕಾಳಜಿಗಳ ಮಿಲ್ಟನ್ ಕುವೆಂಪುವಿಗೆ ಪ್ರಿಯವಾದದ್ದು ಈ ಕಾರಣದಿಂದಲೆ.

ವರ್ಣಗಳ ಗುಣ ಕರ್ಮಗಳು ನಿಯಮಾನುಸಾರವಾಗಿ ನಡೆಯುವಾಗ ಆಯಾ ಗುಣ ಕರ್ಮರತವಾದ ವರ್ಣಗಳು ಆಕಸ್ಮಿಕ ಬಾಧೆಗಳಿಗೆ ಒಳಗಾದ, ತಮ್ಮ ತಮ್ಮ ಗುಂಪಿಗೆ ಸೇರಿದ ದೇಹಿಗಳ ರಕ್ಷಣೆಗೆ ಸಿದ್ಧರಾಗದಿರುವಷ್ಟು ಬಿಕ್ಕಟ್ಟಿನ ಬಂಧನದಲ್ಲಿರುವುವು. ಆದುದರಿಂದ ವರ್ಣಾತೀತವಾಗಿ ಅಂದರೆ ಚತುರ್ವರ್ಣ ಬಂಧನಾತೀತವಾಗಿರುವ ವರ್ಣವು ತನ್ನದೇ ಆದ ಒಂದು ವೈಶಿಷ್ಟ್ಯವನ್ನು ಹೊಂದಿರಬೇಕಾಗಿರುವುದು. ಇದು ಪೂರ್ಣತೆಯ ಸಾಕ್ಷಾತ್ಕಾರವನ್ನು ಹೊಂದಿದ ಅತಿವರ್ಣಾಶ್ರಮಿಗಳಂತೆಯೇ ಪ್ರಾಪಂಚಿಕವಾದ ವರ್ಣ ಬಂಧನ ಸ್ವತಂತ್ರವಾಗಿರುವ ಸ್ಥಿತಿಯನ್ನು ಹೋಲುವುದು.

ಕುವೆಂಪು ತಲೆತಲಾಂತರಗಳಿಂದ ಬಂದ, ಇಂದಿನ ವೈಜ್ಞಾನಿಕ ಪರಿಧಿಯಲ್ಲಿ ಅರ್ಥರಹಿತವಾಗುತ್ತಿರುವ ಜಾತಿ ವ್ಯವಸ್ಥೆಯನ್ನು ತಮ್ಮ ಸಾಹಿತ್ಯದುದ್ದಕ್ಕೂ ಪ್ರಶ್ನಿಸುವುದರಿಂದಾಗಿ ಶೂದ್ರರೂ ಬ್ರಾಹ್ಮಣರಾಗಲು ಸಾಧ್ಯವೆಂಬುದರತ್ತ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಾರೆ.

ಸ್ವಾತಂತ್ರ್ಯಪೂರ್ವದ ಪ್ರಬಲ ಸಾಮಾಜಿಕ ಕ್ರಾಂತಿ ಅಸಮಾನತೆಯನ್ನು ಕೇಂದ್ರವಾಗಿರಿಸಿಕೊಂಡಿದೆ. ಕುವೆಂಪು ಇತ್ತ ತೀವ್ರ ಗಮನ ಹರಿಸುತ್ತಾರೆ. 'ಬೆರಳ್‌ಗೆ ಕೊರಳ್' ನಾಟಕದಲ್ಲಿ 'ವರ್ಗ' ವ್ಯವಸ್ಥೆಯನ್ನು ಕೇಂದ್ರವಾಗಿ ಸೆರೆ ಹಿಡಿಯುತ್ತಾರೆ. ಇಲ್ಲಿ ಆರ್ಥಿಕ ಅಸಮಾನತೆ ತಂದೊಡ್ಡುವ ವಿಪತ್ತನ್ನು, ಸಾಮಾಜಿಕ ಬೆಳವಣಿಗೆಯಲ್ಲಿ ಅದರ ಉತ್ಪಾತವನ್ನು ತೀವ್ರವಾಗಿ ಅನ್ವೇಷಿಸುತ್ತಾರೆ.

ಶ್ರೀಮಂತ ವರ್ಗದವರಿಗೇ ಮೀಸಲಾದ ವಿದ್ಯಾಭ್ಯಾಸವನ್ನು ಯಶಸ್ವಿಯಾಗಿ ಚಿತ್ರಿಸುವುದರ ಮೂಲಕ ಗಂಭೀರವಾದ ಸಾಮಾಜಿಕ ಸಮಸ್ಯೆಯ ಹರವಿನಲ್ಲಿ ನಿರ್ಗತಿಕ ಏಕಲವ್ಯ, ಪಟ್ಟಭದ್ರ ಹಿತಾಸಕ್ತಿಗಳಾದ ಬಂಡವಾಳಶಾಹಿ ರಾಜಮನೆತನದ ವೈಭವದ ಅರ್ಜುನ, ದುರ್ಯೋಧನಾದಿಗಳು, ಮಡಿವಂತಿಕೆಯ ನಡುವೆ ಸಿಲಿಕೊಂಡ ದ್ರೋಣ ಇವರನ್ನು ಚಿತ್ರಿಸುತ್ತಾರೆ. ವಿದ್ಯೆ ಕೆಲವರ ಸೊತ್ತಾಗುವುದನ್ನು ದಿಟ್ಟತನದಿಂದ ಪ್ರಶ್ನಿಸಿ ಅದನ್ನು ಸಾಮಾನ್ಯನವರೆಗೆ ಹರಿಸಲು ಬಳಸುವ ವಿಧಾನ, ಬೆಳೆಸುವ ಪಾತ್ರ ನಾಟಕದ ದೃಷ್ಟಿಯಿಂದ ಮಹತ್ವದ್ದಾಗುವಂತೆ ಸಾಮಾಜಿಕ ಪ್ರಜ್ಞೆಯ ದೃಷ್ಟಿಯಿಂದಲೂ ಮಹತ್ವದ್ದಾಗುತ್ತದೆ. ಕಡು ಬಡವ ವಿದ್ಯಾಭ್ಯಾಸ ಮಾಡುವುದು ಜಾತಿ ಮತ್ತು ಆರ್ಥಿಕ ದೃಷ್ಟಿಯಿಂದ ಅಸಾಧ್ಯವಾದ ಅಂದಿನ ವಾತಾವರಣವನ್ನು ಬಯಲು ಮಾಡುತ್ತ ಹೋಗುವುದರಿಂದ ನಾಟಕ ಚಾಲನ ಶಕ್ತಿ ಸಾಮಾಜಿಕ ಚಾಲನಶಕ್ತಿಯೂ ಆಗುತ್ತದೆ. ಮುಖ್ಯವಾದ ವರ್ಗ ಸಮಸ್ಯೆಯನ್ನು ಮರೆತು ಕೇವಲ ತತ್ವತ್ರಯಗಳಿಂದಾಗಿ

ಈ ನಾಟಕ ಉತ್ತಮ ಎಂದು ಹೇಳುವುದು ನಾಟಕದ ಮುಖ್ಯ ತಳಹದಿಯಾದ ಸಾಮಾಜಿಕ ಸಮಸ್ಯೆಯನ್ನು ಮರೆತಂತಾಗುತ್ತದೆ.

ಇಲ್ಲಿ ದ್ರೋಣ ವರ್ಣ ವ್ಯವಸ್ಥೆಗೆ ಅಂಟಿಕೊಂಡೂ ಬದಲಾಗುತ್ತಿರುವ ಗುರುವಾಗಿ ಕಂಡರೆ, ಅರ್ಜುನ ಪರಿವರ್ತಿತನಾಗದ ವರ್ಗವ್ಯವಸ್ಥೆಯ ಶ್ರೀಮಂತ ವ್ಯಕ್ತಿಯಾಗಿ ಕಾಣುತ್ತಾನೆ. ಇವರಿಬ್ಬರ ನಡುವೆ ಬಡತನದಲ್ಲಿ ವಿದ್ಯೆಗಾಗಿ ಹಂಬಲಿಸಿ ತಾಕಲಾಟದಲ್ಲಿ ಬದುಕಿ ಈ ಎರಡೂ ಬಿರುಕನ್ನೂ ಮುಚ್ಚಬಲ್ಲ ಶಕ್ತಿಯಾಗಿ, ಸಾಮಾಜಿಕ ನ್ಯೂನತೆಯನ್ನು ಮೈಗೂಡಿಸಿಕೊಂಡ ಶಕ್ತಿಯಾಗಿ ಏಕಲವ್ಯ ನಿಲ್ಲುತ್ತಾನೆ.

ಕುವೆಂಪು ಬಾಲ್ಯದಿಂದಲೇ ನಮ್ಮ ಸಮಾಜವನ್ನು ಕುತೂಹಲದಿಂದ ನೋಡುತ್ತ ಬಂದ, ಕೆಳವರ್ಗದವರನ್ನು ಮೇಲ್ವರ್ಗದವರು ನಡೆಸಿಕೊಳ್ಳುತ್ತಿರುವ ರೀತಿಯನ್ನು ಗಮನಿಸಿದ, ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಸಂಸ್ಕೃತ ಕಲಿಯುವುದು ಶೂದ್ರರ ಕೆಲಸವಲ್ಲ ಎಂಬಂತಹ ನುಡಿಗಳನ್ನು ಕೇಳಿದ, ಮೈಸೂರಿಗೆ ಬಂದು ಕಾಲೇಜು ವಿದ್ಯಾರ್ಥಿಯಾಗಿ ವಿದ್ಯಾರ್ಥಿಗಳನ್ನು ತಾರತಮ್ಯ ಭಾವದಿಂದ ಕಾಣುತ್ತಿರುವ ಉಚ್ಚವರ್ಗದವರ ಭಾವನೆಗಳನ್ನು ತಿಳಿದುಕೊಂಡು 'ಜಲಗಾರ ' ನಾಟಕವನ್ನು ಬರೆಯುವ ಮೂಲಕ ಸಮಾಜದ ಕಣ್ಣು ತೆರೆಸುವ ಪ್ರಯತ್ನ ಮಾಡಿದರು. ಈ ನಾಟಕದ ನಾಯಕರು ಕೆಳವರ್ಗದಿಂದಲೇ ಬಂದವರು, ಶೋಷಣೆಗೆ ಒಳಗಾದವರು.

'ಜಲಗಾರ' ಮೇಲ್ನೋಟಕ್ಕೆ ಒಂದು ಸಾಮಾಜಿಕ ವಸ್ತು ಆಧಾರಿತ ನಾಟಕ ಎನಿಸಿದರೂ ಅದರ ಗಮ್ಯಗುರಿ ಅಧ್ಯಾತ್ಮ ಸಿದ್ಧಿಯ ಶಿವಸಾಕ್ಷಾತ್ಕಾರವಾಗಿದೆ. ಅದು ಇಲ್ಲಿ ಪ್ರತಿಮಾರೂಪದಲ್ಲಿ ಚಿತ್ರಿತವಾಗಿದೆ. ಬೀದಿ ಗುಡಿಸುವ ತನ್ನ ನಿತ್ಯದ ನಮ್ರ ಕಾಯಕದಲ್ಲಿ ಮಗ್ನನಾಗಿ ಅದರಲ್ಲಿಯೇ ದೇವರನ್ನು ಕಂಡ ಕರ್ಮಯೋಗಿಯಾದ ಜಲಗಾರನ ಮಾನಸಿಕ ಔನ್ನತ್ಯವನ್ನು ಇಲ್ಲಿ ತುಂಬ ಸೊಗಸಾಗಿ ಎತ್ತಿ ತೋರಿಸಲಾಗಿದೆ. ಧರ್ಮದ ಹೆಸರಿನಲ್ಲಿರುವ ಅಂಧಶ್ರದ್ಧೆಗಳು, ಆಡಂಬರಗಳು, ಅನ್ಯಾಯಗಳು ಜನತೆಯ ಶೋಷಣೆಗೂ ಸಮಾಜದ ವಿಷಮತೆಗೂ ಹೇಗೆ ಕಾರಣವಾಗಿವೆ ಎಂಬ ಅಂಶ ಇಲ್ಲಿ ಅರ್ಥವತ್ತಾಗಿ ಅಭಿವ್ಯಕ್ತಗೊಂಡಿದೆ. ಕ್ರಮೇಣ ಜಲಗಾರ ಮರೆಯಾಗಿ, ಒಳಿತು ಕೆಡುಕುಗಳ ಮಧ್ಯ ನಡೆಯುವ ಹೋರಾಟದ ಚಿರಂತನ ಚಿತ್ರ ಮೈದೋರಿ ಕೊನೆಗೆ ಶಿವಸಾಕ್ಷಾತ್ಕಾರವಾಗುತ್ತದೆ. ಇಡೀ ನಾಟಕ ಒಂದು ಪ್ರತಿಮಾರೂಪದ ಸಾಂಕೇತಿಕ ನಿರೂಪಣೆಯಾಗಿ ನಿಲ್ಲುತ್ತದೆ.

ಲೌಕಿಕ ವಸ್ತುವನ್ನು ಅಲೌಕಿಕ ಮಟ್ಟಕ್ಕೆ ಏರಿಸುವ ಚತುರತೆ ಇಲ್ಲಿ ಕಂಡುಬರುತ್ತದೆ. ಇಲ್ಲಿ ಬರುವ ಸಾಮಾಜಿಕ ಮತ್ತು ಧಾರ್ಮಿಕ ವಿಷಮತೆಯ ವಿಡಂಬನೆ ಕೇವಲ ವಿಡಂಬನೆಯಾಗಿ ಮಾತ್ರ ಉಳಿಯದೆ ಇಡೀ ನಾಟಕ ಕಟ್ಟಡ ಆಧ್ಯಾತ್ಮಿಕ ತಳಹದಿಯ ಮೇಲೆ ನಿಂತಿರುವುದು ಕಂಡುಬರುತ್ತದೆ. ಈ ನಾಟಕ ನಮ್ಮ ಸಾಮಾಜಿಕ ಪ್ರಜ್ಞೆಯನ್ನು ಸರ್ವಕಾಲಿಕ ಪ್ರಜ್ಞೆಯ ಮಟ್ಟಕ್ಕೆ ವಿಸ್ತರಿಸುತ್ತದೆ.

ವರ್ಣವ್ಯವಸ್ಥೆಯ ಹೆಸರಿನಲ್ಲಿ ಅಂದು ಸಾಮೂಹಿಕವಾಗಿ ಹೇರಿಬಿಟ್ಟಿದ್ದ ಭಯಂಕರ ಮೌಢ್ಯ ಮತ್ತು ಅದನ್ನು ಪ್ರತಿಪಾದಿಸುತ್ತಿದ್ದ ಪುರೋಹಿತಶಾಹಿಗಳ ವಿರೋಧವೇ 'ಶೂದ್ರ ತಪಸ್ವಿ'. 'ಶೂದ್ರನೊಬ್ಬ ತಪಸ್ಸು ಮಾಡುತ್ತಿರುವ ಅಧರ್ಮ ಕಾರಣವಾಗಿ ತನ್ನ ಮಗ ಮಡಿದನೆಂದು ವೃದ್ಧ ಬ್ರಾಹ್ಮಣ ರಾಮನಿಗೆ

ದೂರು ಸಲ್ಲಿಸುತ್ತಾನೆ. ರಾಮ ಶಂಭೂಕನ ತಲೆ ಕತ್ತರಿಸಲು ಬ್ರಾಹ್ಮಣ ಪುತ್ರ ಬದುಕುತ್ತಾನೆ" ಎಂಬಂಥ ಈ ಕಥೆಯನ್ನು ಸ್ವತಃ ಶೂದ್ರ ತಪಸ್ವಿಯಾದ ವಾಲ್ಮೀಕಿ ಬರೆದಿರಲಾರ. ರಾಮನಂಥ ಆದರ್ಶ ರಾಜ ಹೀಗೆ ಮಾಡಿರಲಾರ. ವರ್ಣ ವಿದ್ವೇಷದಿಂದ ಕೂಡಿರುವ ಈ ಕಥೆ ಪ್ರಕ್ಷಿಪ್ತವಾದುದಾಗಿರಬೇಕು. ವರ್ಣಪಕ್ಷಪಾತಿಗಳಾರೋ ಇದನ್ನು ಕಟ್ಟಿ ಸೇರಿಸಿರಬೇಕು ಎಂದು ಬಗೆದ ಸ್ವತಂತ್ರ ವಿಚಾರಶೀಲರಾದ ಕುವೆಂಪು, ಇಲ್ಲಿರುವ ಅಮಾನವೀಯವಾದ ವಿಚಾರಗಳನ್ನು ಬೇರೊಂದು ರೀತಿಯಲ್ಲಿ ಅರ್ಥೈಸಿ, ಆಧುನಿಕ ದೃಷ್ಟಿಕೋನಕ್ಕೆ ಅನ್ವಯವಾಗುವಂತೆ ಪರಿವರ್ತಿಸಿ, ಆ ಮೂಲಕ ಶಾಶ್ವತ ಸಂದೇಶವನ್ನು ಸಾರಿ, ವಾಲ್ಮೀಕಿ ಮತ್ತು ರಾಮ ಇಬ್ಬರ ವ್ಯಕ್ತಿತ್ವಕ್ಕೆ ಗುರಿಯಾದುದರಲ್ಲಿ ಧರ್ಮದ್ರೋಹವೇನೋ ಇದೆ. ಆದರೆ ಅದು ಬ್ರಾಹ್ಮಣನು ಹೇಳುವಂತೆ ಶೂದ್ರನು ತಪಸ್ಸು ಮಾಡಿದುದರಿಂದ ಉಂಟಾದ ಧರ್ಮದ್ರೋಹವಲ್ಲ. ಶೂದ್ರನು ತಪ್ಪು ಮಾಡುವುದೇ ಅಧರ್ಮವೆಂದು ಬ್ರಾಹ್ಮಣನು ಭಾವಿಸಿದುದರಿಂದ ಉಂಟಾದ ಧರ್ಮದ್ರೋಹ. ಇದನ್ನು ಅರಿತ ರಾಮ ಬ್ರಾಹ್ಮಣನಿಗೆ ಆ ತಪ್ಪು ಮನವರಿಕೆಯಾಗುವಂತೆ ಮಾಡುತ್ತಾನೆ. ಆ ಮೂಲಕ ಧರ್ಮ ಸ್ಥಾಪನೆಗೆ ಕಾರಣನಾಗುತ್ತಾನೆ.

ಕುವೆಂಪು ಮಾಡಿದ ಈ ಪರಿವರ್ತನೆಯಿಂದ ಇಲ್ಲಿ ಬರುವ ಬ್ರಾಹ್ಮಣನ ಘನತೆ, ಧರ್ಮದ ಔನ್ನತ್ಯ ಮತ್ತು ರಾಮನ ಮಹೋನ್ನತ ವ್ಯಕ್ತಿತ್ವ ಎಲ್ಲವೂ ಏಕಕಾಲಕ್ಕೆ ಮಹಿಮಾನ್ವಿತವಾಗಿ ಬೆಳೆದಿವೆ. ಪೌರಾಣಿಕ ಅಂಧ ಶ್ರದ್ಧೆಯೊಂದು ಕವಿ ಪ್ರತಿಭಾಲೋಕದಲ್ಲಿ ಪ್ರವೇಶಿಸಿ ಹೇಗೆ ಪುನರ್ಜನ್ಮ ಪಡೆದು ಬೆಳಗಬಲ್ಲದು ಎಂಬುದಕ್ಕೆ ಈ ನಾಟಕ ಒಂದು ಉಜ್ವಲ ಉದಾಹರಣೆಯಾಗಿದೆ. 'ತಪಸ್ಸು ಮಹಿಮಾಪೂರ್ಣವಾದುದು. ಅದಕ್ಕೆ ಜಾತಿ ಮತದ ಸೋಂಕಿಲ್ಲ. ಅದು ಯಾರಲ್ಲಿಯೂ ಪೂಜನೀಯವಾದುದೇ ಆಗಿದೆ' ಎಂಬ ಸತ್ಯವನ್ನು ಸಾರುವ ಈ ನಾಟಕ ತುಂಬ ವಿಚಾರಪ್ರಚೋದಕವೆನಿಸಿದೆ.

ಜಲಗಾರ, ಶೂದ್ರತಪಸ್ವಿ, ಬೆರಳ್‌ಗೆ ಕೊರಳ್ ಪ್ರಮುಖವಾಗಿ ಈ ಮೂರೂ ನಾಟಕಗಳಲ್ಲಿ ವರ್ಣ ಭೇದದ ಹಿನ್ನೆಲೆಯನ್ನು ಕಾಣಬಹುದು.

****

ಅಡಿಟಿಪ್ಪಣಿ

೧. ಅಮೃತ ಮತ್ತು ಗರುಡ, ಡಿ.ಆರ್.ನಾಗರಾಜ್, ಪುಟ ೩೪೬.

೨. ಅನಿಕೇತನ, ಸಂ.ಸಾ.ಶಿ.ಮರುಳಯ್ಯ, ಪುಟ ೫೨೩.

೩. ಅದೇ, ಪುಟ ೫೩೨.

ಅಧ್ಯಾಯ-೪

ವರ್ಗ ಸಂಘರ್ಷದ ಸ್ವರೂಪ

ವರ್ಗ ಸಂಘರ್ಷದ ಸ್ವರೂಪ

ಉತ್ಪಾದನಾ ವ್ಯವಸ್ಥೆಯ ಹಿನ್ನೆಲೆಯಲ್ಲಿ ಶ್ರೇಣೀಕರಣಗಳನ್ನು ವಿಂಗಡಿಸುವುದೇ ವರ್ಗ ಎಂಬ ಹಿನ್ನೆಲೆಯಿಂದ ನೋಡಿದಾಗ ಕುವೆಂಪು ಕೆಲವು ಶ್ರೇಷ್ಠ ಸಮಾಜವಾದಿ ಕೃತಿಗಳನ್ನು ರಚಿಸಿದ್ದಾರೆ. ಕಲ್ಕಿ, ಧನ್ವಂತರಿಯ ಚಿಕಿತ್ಸೆ, ಸಾಲದ ಮಗು ಮುಂತಾದ ಕೃತಿಗಳು ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೇ ಶ್ರೇಷ್ಠ ಸಮಾಜವಾದಿ ಕೃತಿಗಳ ಸಾಲಿಗೆ ಸೇರುವಂಥವು. ವೈಜ್ಞಾನಿಕ ಸಮಾಜವಾದದ ತಳಹದಿಯ ಮೇಲೆ ನಡೆದ ರಷ್ಯದ ಸಮಾಜವಾದಿ ಕ್ರಾಂತಿ ಕುವೆಂಪು ಅವರ ಸೃಜನಶೀಲ ಮನಸ್ಸಿನ ಮೇಲೆ ಅತ್ಯಂತ ಆಳವಾದ ಪರಿಣಾಮವನ್ನುಂಟುಮಾಡಿದೆ. ಕುವೆಂಪು ಅವರ ಒಟ್ಟು ಸಾಹಿತ್ಯ ಸೃಷ್ಟಿಯಲ್ಲಿ ಸಮಾಜವಾದೀ ಆಶಯಗಳು ಸಾಕಷ್ಟು ಗಮನಾರ್ಹ ಸ್ಥಾನವನ್ನು ಗಳಿಸಿವೆ. ಅವರ ಕೆಲವು ಕೃತಿಗಳಲ್ಲಿ ಆಧ್ಯಾತ್ಮಿಕ, ಸೌಂದರ್ಯಾತ್ಮಕ ಕಾಳಜಿಗಳು ಕಂಡು ಬರುತ್ತದೆ. ಈ ನೆಲದ ಬಗೆಗಿನ ನಿಷ್ಠುರ ಕಾಳಜಿಗಳು ಕಡಿಮೆಯಾಗಿ ಕೆಲವೊಮ್ಮೆ ಬರೀ ಅಮೂರ್ತಮೌಲ್ಯಗಳ ಪ್ರತಿಪಾದನೆಯೇ ಮುಖ್ಯ ಗುರಿಯಾಗಿಬಿಡುತ್ತದೆ. ನೆಲದ ವಾಸ್ತವಕ್ಕೆ ಸ್ಪಂದಿಸುವ ಕಲಾವಿದ ಕುವೆಂಪು, ತತ್ವಜ್ಞಾನಿ ಕುವೆಂಪು ಇವರಿಬ್ಬರ ನಡುವಿನ ವ್ಯತ್ಯಾಸವನ್ನು ಈ ಕಡೆಗಳಲ್ಲಿ ಗುರುತಿಸಬೇಕಾಗಿದೆ.

ಕುವೆಂಪುರವರ ಜಲಗಾರ, ಶೂದ್ರ ತಪಸ್ವಿ, ಬೆರಳ್‌ಗೆ ಕೊರಳ್ ನಾಟಕಗಳಲ್ಲಿ ಪ್ರಮುಖವಾಗಿ ವರ್ಗ ಸಂಘರ್ಷದ ಸ್ವರೂಪವನ್ನು ಕಾಣಬಹುದಾಗಿದೆ. ವರ್ಗ ಅಥವಾ ವರ್ಣ ಸಂಘರ್ಷದಲ್ಲಿ ಬ್ರಾಹ್ಮಣ, ಕ್ಷತ್ರಿಯ, ಶೂದ್ರ, ರೈತವರ್ಗ, ಶ್ರೀರಾಮ, ಏಕಲವ್ಯ-ಪ್ರಮುಖವಾಗಿ ಇವರ ನಡುವೆ ನಡೆಯುವ ಸಂಘರ್ಷವನ್ನು ಇಲ್ಲಿ ತಿಳಿಯಬಹುದು ಮತ್ತು ಸಮಾಜದ ದೃಷ್ಟಿಯಿಂದ ಇವುಗಳ ಸ್ಥಾನವನ್ನು ಗುರುತಿಸಬಹುದಾಗಿದೆ.

ವರ್ಣಾಶ್ರಮವನ್ನು ವಿರೋಧಿಸುವ ದೃಷ್ಟಿಯಿಂದ ಕುವೆಂಪು ಅವರ 'ಜಲಗಾರ' ನಾಟಕ ಮುಖ್ಯವಾಗಿ ಕಂಡುಬರುತ್ತದೆ. ಪುರೋಹಿತ ಶಾಹಿಯನ್ನು ವಿರೋಧಿಸುವ ನೆಲೆಯಿಂದಲೂ ಈ ನಾಟಕ ಪ್ರಮುಖವಾಗಿದೆ. ಜಲಗಾರ ಮತ್ತು ರೈತ ಇಬ್ಬರೂ 'ಕಾಯಕ' ತತ್ವದ ಮೇಲೆ ನಿಂತಿರುವುದು ಕಂಡುಬರುತ್ತದೆ. ಆದರೆ ಮೊದಲು ರೈತ ಹಾಡುವ ಹಾಡು ಸಹ ಜಲಗಾರ ಹಾಗೂ ರೈತ ಇಬ್ಬರೂ ವೈದಿಕ ಸಂಸ್ಕೃತಿಯನ್ನು ವಿರೋಧಿಸುವ, ಕಾಯಕ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಹಾಗೆ ಕಾಣುತ್ತದೆ. ಆ ಹಾಡು ಹೀಗಿದೆ-

ರೈತ- ನೇಗಿಲ ಯೋಗಿಯು ನಾನು;

ಮಣ್ಣಿನ ಭೋಗಿಯು ನಾನು!

ಕೆರೆಗಳ ತೊರೆಗಳ ಗೆಳೆಯನು ನಾನು,

ಹೊಲಗಳ ಬನಗಳ ದೊರೆ ನಾನು

ಹೊಯ್ಯುವೆ, ಗೆಯ್ಯುವೆ, ಕೊಯ್ಯುವೆ ನಾನು;

ಉಣ್ಣುವೆ. ಉಣಿಸೀಯುವೆ ನಾನು.

ನೇಗಿಲ ಗೆರೆಯೇ ತೋರುವುದೆನಗೆ

ಮುಕ್ತಿಯ ಹಾದಿಯನು;

ವೇದಗಳೆಲ್ಲಾ ನೆಗೆನೆಗೆದರಿಯದ

ಅಂತ್ಯದ ಆದಿಯನು.

ನನ್ನಿಯನರಿಯುವೆ ಕರ್ಮದಲಿ;

ಸೊಗವನು ಕಾಣುವೆ ಧರ್ಮದಲಿ!

ಬದುಕಿ ಬಾಳಿ ನಾ ಗೆಯ್ಯುವೆ ನಲಿಯುವೆ,

ಇಹಪರಗಳ ನಾ ಸಾಧಿಸುವೆ

ಬದುಕಿ ಬಾಳಿ, ಕರ್ತವ್ಯವ ಮಾಡಿ

ಮೇಲಾಗುವುದನು ಬೋಧಿಸುವೆ!

ನೇಗಿಲ ಯೋಗಿಯು ನಾನು!

ಮಣ್ಣಿನ ಭೋಗಿಯು ನಾನು!

ಈ ಮೇಲಿನ ಹಾಡಿನಲ್ಲಿ ರೈತ "ನೇಗಿಲ ಗೆರೆಯೇ ತೋರುವುದೆನಗೆ ಮುಕ್ತಿಯ ಹಾದಿಯನು; ವೇದಗಳೆಲ್ಲಾ ನೆಗೆನೆಗೆದರಿಯದ ಅಂತ್ಯದ ಆದಿಯನು. ನನ್ನಿಯನರಿಯುವೆ ಕರ್ಮದಲಿ"[9] ಎನ್ನುತ್ತಾನೆ. ಆದರೆ ಆತನಲ್ಲಿರುವ ದ್ವಿಮುಖ ವ್ಯಕ್ತಿತ್ವದಿಂದ ಶಿವನನ್ನು ಗುಡಿಯಲ್ಲಿ ಕಾಣಲು ಹೋಗುತ್ತಾನೆ. ಇಲ್ಲಿ ನಾಟಕಕಾರರು ರೈತನನ್ನು ವೈದಿಕತೆಗೆ ಮರುಳಾಗಿರುವ ಅವೈದಿಕತೆಯ ಸಂಕೇತವಾಗಿ ತರುತ್ತಾರೆ. ಮೂಲತಃ ರೈತ ಮತ್ತು ಜಲಗಾರರಲ್ಲಿ ಭೇದವಿಲ್ಲದಿದ್ದರೂ ವೈದಿಕತೆಯ ಪ್ರಭಾವದಿಂದ ತಪ್ಪಿಸಿಕೊಳ್ಳುವುದರಲ್ಲಿ ಇಬ್ಬರೂ ಭಿನ್ನರಾಗುತ್ತಾರೆ. ಮುಂದೆ ರೈತ ಇಬ್ಬಗೆಯ ವ್ಯಕ್ತಿತ್ವಕ್ಕೆ ಸಂಕೇತವಾಗುತ್ತಾನೆ.

ರೈತ-ಜಲಗಾರನ ಸಂಭಾಷಣೆಯಲ್ಲಿ ರೈತ ಮೇಲುವರ್ಗದ ಸಮಾಜದ ನಿಯಮಗಳನ್ನು ಪಾಲಿಸುವವನಂತೆ ಕಾಣಿಸುತ್ತಾನೆ. ಜೋಯಿಸರ ಶಿವನನ್ನು ಪೂಜಿಸಲು ಹೋಗುವಾಗ ನಡೆಯುವ ಸಂಭಾಷಣೆ ಹೀಗಿದೆ. ಜಲಗಾರ-ಮುಂಜಾನೆಯೊಳಗೆಲ್ಲಿ ಹೋಗುತಿಹೆ, ರೈತ?

ರೈತ- ಓಹೊ ನೀನರಿಯೆಯಾ? ಇಂದು ನಮ್ಮೂರ

ಶಿವಗುಡಿಯ ಜಾತ್ರೆ! ಬರುವುದಿಲ್ಲವೆ ನೀನು?

ತೇರೆಳೆಯಲೆಂದನಿಬರೂ ಬರುತಿಹರು

ಜಲಗಾರ-ನನಗೇಕೆ ಶಿವಗುಡಿಯ ಜಾತ್ರೆ? ಜೋಯಿಸರು

ದೇಗುಲದ ಒಳಗೆನ್ನ ಸೇರಿಸರು

ರೈತ-ದೂರದಲ್ಲಿಯೆ ನಿಂತು ಕೈ ಮುಗಿದು ಬಾ

ಜಲಗಾರ-ಕರ್ಮವಾರಾಧನೆ, ಸೇವೆಯೇ ಪೂಜೆ.

ನನ್ನ ಭಾಗಕೆ ಪೊರಕೆ ಆರತಿ. ಗುಡಿಸುವುದೆ

ನನ್ನ ದೇವರ ಪೂಜೆ!- ನಿನ್ನೆ ದೇಗುಲದೆಡೆಗೆ

ಹೋದೆನ್ನಂ ಕಂದನಂ ಬೈದಿರಿದು ನೂಕಿದರು.

ಶಿವಗುಡಿಯ ಶಿವನು ಜೋಯಿಸರ ಶಿವನಂತೆ;

ನನ್ನ ಶಿವನೀ ಮಣ್ಣಿನಲ್ಲಿಹನು. ನನ್ನ ಶಿವ

ಕೊಳೆತ ಕಸದೊಳಗಿಹನು, ಕಪ್ಪುರದೊಳಿಲ್ಲ;

ಮಂಗಳಾರತಿಯೊಳಿಲ್ಲ; ಹೂವುಗಳಲಿಲ್ಲ.

ಯಾವೆಡೆಯೊಳಾನಿಹೆನೊ ಅವನಲ್ಲಿಯೇ ಇಹನು.

ನನ್ನೆದೆಯ ದೇಗುಲ; ನನ್ನೊಲ್ಮೆಯದೆ ಪೂಜೆ.

ಮೊದಲು ರೈತ ಹಾಡಿಕೊಂಡು ಬಂದ ರೀತಿ ಮತ್ತು ಈ ಸಂಭಾಷಣೆಯಲ್ಲಿ ರೈತ ದೇವಾಲಯಕ್ಕೆ ಹೊರಟಿದ್ದಾನೆ. ಜೋಯಿಸರ ಶಿವನನ್ನು ಪೂಜಿಸಲು ಈ ಸಂದರ್ಭದಲ್ಲಿ ಜಲಗಾರ ತನ್ನ ಭಾವನೆಯನ್ನು ವ್ಯಕ್ತಪಡಿಸುತ್ತಾನೆ.

ಶಿವನ ಕಾಣಲು ನೀನು

ಗುಡಿಗೆ ಹೋಗುವೆಯೇನು? ನಿನ್ನ ನೇಗಿಲ ಗೆರೆಯ

ದಿವ್ಯ ದೇವಾಲಯದಿ ಶಿವನ ಕಾಣೆಯ ನೀನು?

ಹೀಗೆ ಜಲಗಾರ ಹೇಳಿದಾಗ ಇದಕ್ಕೆ ಪ್ರತಿಯಾಗಿ ರೈತ ಜಲಗಾರನನ್ನು ಕುರಿತು ಸಮಾಜದ ಮೇಲು ವರ್ಗದವರಂತೆ ಮಾತನಾಡುವುದನ್ನು ಕಾಣಬಹುದು.

ರೈತ-ಸೊಗದ ಮೋರೆಯನೆ ಕಂಡರಿಯನೀ ಜಲಗಾರ

ಪೂಜೆಯೆಂಬುದನರಿಯ; ದೇವನೆಂಬುದನರಿಯ;

ಹುಟ್ಟುಗುಣ ಸುಟ್ಟರೂ ಹೋಗುವುದೆ?

ರೈತ ಸಮಾಜದ ಕೆಳತುದಿಯಲ್ಲಿದ್ದರೂ ಇವರ ಮಾತನ್ನು ಗಮನಿಸಿದರೆ ಶ್ರೇಣೀಕೃತ ಸಮಾಜದ ವ್ಯಕ್ತಿಯಂತೆ ಕಂಡುಬರುವುದು ಆಶ್ಚರ್ಯವೆನಿಸುತ್ತದೆ.

ಇಪ್ಪತ್ತನೇ ಶತಮಾನದ ಆರಂಭದಲ್ಲಿ ಆಧುನಿಕ ಶಿಕ್ಷಣ ಆಗತಾನೇ ಹೊಸ ಆಲೋಚನೆಗಳನ್ನು ರೂಪಿಸುತ್ತಿದ್ದ ಕಾಲದಲ್ಲಿ ಜಾತಿ ವ್ಯವಸ್ಥೆಯಲ್ಲಿ 'ವಿದ್ಯೆ' ಕೆಲವು ವರ್ಗದವರ ಸ್ವತ್ತಾಗಿತ್ತು. ಆದರೆ ಕುವೆಂಪು ಜಲಗಾರನಿಂದ ಹಾಡಿಸಿದ ಹಾಡು

ಗುಡಿಯೊಳಗಿರಲು ದೇವ

ಒಡೆಯನಾರೀ ಜಗವ ಕಾವ?

ವಿಗ್ರಹದೊಳಿರೆ ರಾಮ

ಯಾರದೀ ಲೋಕದಾರಾಮ?

ಮೂಡಣದೊಳಿಹನು ಹರಿ;

ಪಡುವಣದೊಳಿಹನು ಅಲ್ಲಾ!

ಹೃದಯದೊಳು ನೀ ನೋಡೆ

ಸಲೆ ವಿಚಾರವ ಮಾಡೆ

ಅಲ್ಲಿರುವನು ಕರೀಮು;

ಅಲ್ಲೆ ತೋರ್ಪನು ರಾಮ!

ಜಗದ ಮನುಜರಿಗೆಲ್ಲಾ

ಬ್ರಹ್ಮನಾಗಿಹನಲ್ಲಾ!

ಅಲ್ಲ ರಾಮರ ಕಂದನ್

ಆಗಿರುವನು ಕಬೀರ!

ಆತನೇ ಎನಗೆ ಗುರು

ಮೇಣಾತನೇ ಪೀರ!

ಬ್ರಾಹ್ಮಣ ವರ್ಗದ ವರ್ಣಭೇದಕ್ಕೆ, ಅಸ್ಪೃಶ್ಯಭಾವಕ್ಕೆ, ಅವರ ಟೊಳ್ಳುತನಕ್ಕೆ ಇಲ್ಲಿ ಬರುವ ಪಾರ್ವರು ಉದಾಹರಣೆಯಾಗುತ್ತಾರೆ. ಜಲಗಾರನು ಹಾಡುವ ಹಾಡನ್ನು ದೂರದಿಂದ ಕೇಳಿದಾಗ "ಯಾರೋ ದಿವ್ಯಾತ್ಮನಿರಬೇಕು. ಮಧುರತಮ ಗಾಯನವು ಅಮಲತಮ ಹೃದಯದಿಂದಲ್ಲದೆ, ಹೊರಹೊಮ್ಮಲರಿಯದು"[2] ಎಂದು ಮಾತನಾಡಿಕೊಂಡಿದ್ದವರು, ಅದನ್ನು ಹಾಡಿದವನು ಕೀಳು ಜಾತಿಯವನೆಂದು ತಿಳಿದಾಗ "ಸಂಗೀತವನಿತೇನು ಮನಮೋಹಿಪಂತೆ ಇರಲಿಲ್ಲ. ಗಾನದೇವಿಯು ಹೀನ ಜಲಗಾರನನ್ ಒಲಿಯುವಳೆ?"[3] ಎಂದು ತಿರಸ್ಕರಿಸುತ್ತಾರೆ. ಜಾತಿಗೆ ವರ್ಣಕ್ಕೆ ಬೆಲೆ ಕೊಡುತ್ತಿದ್ದ ಡಾಂಬಿಕ ಜನರ ಹೀನಬುದ್ಧಿಯ ಪೂರ್ಣ ಚಿತ್ರವನ್ನು ಇಲ್ಲಿ ತೋರಿಸುವುದರ ಜೊತೆಗೆ, ಸಾಮಾಜಿಕವಾಗಿ ಅವರೆಷ್ಟು

ಅಪಾಯಕಾರಿ ಎಂಬುದೂ ತಿಳಿಯುತ್ತದೆ.

ಸಾಮಾನ್ಯ ಜನತೆ ಸರಿಯಾದ ತಿಳಿವಿಲ್ಲದೆ ಮಿಥ್ಯವನ್ನೇ ಸತ್ಯವೆಂದು ನಂಬಿ ಮೋಸ ಹೋಗುತ್ತಾರೆ, ಎಂಬುದು ಉತ್ಸವದಿಂದ ಹಿಂದಿರುಗುತ್ತಿರುವ ರೈತನಿಂದ ವ್ಯಕ್ತವಾಗುತ್ತದೆ. "ಶಿವನ ಗುಡಿ ದೊಡ್ಡ ಗುಡಿ! ಏನು ಚಿತ್ರದ ಕೆಲಸ! ವಿಗ್ರಹವು ಬಲು ಚಂದ! ಜೋಯಿಸರ ಮಡಿ ಪಂಚೆ... ಜರತಾರಿಯಪ್ಪಾ"[೪] ಎಂಬಲ್ಲಿನ ಅವನ "ಮರುಳಾಗುವಿಕೆ"ಯನ್ನೂ ನಾಟಕಕಾರರು ವಿಡಂಬಿಸಿದ್ದಾರೆ. ಕೇವಲ ಹೊರಕ್ಕೆ ಮಾತ್ರ ಮರುಳಾಗಿ, ಒಳಗಿನ ದನಿಗೆ ಬೆಲೆ ಕೊಡದ ಅಸಂಖ್ಯರನ್ನು ವಾಸ್ತವದ ಕಡೆ ತೋರಿಸುವ ಪ್ರಯತ್ನವಿದೆ.

ದೇವಸ್ಥಾನದಿಂದ ಬರುತ್ತಿರುವ ಪಾರ್ವರು ಆಡುವ ಮಾತುಗಳು "......... ಅಂತೂ ನಮಗೆಲ್ಲ ಶಿವಗುಡಿಯ ದೆಸೆಯಿಂದ ಹಿಟ್ಟು ಹೊಟ್ಟೆಗೆ ದುಡ್ಡು ಬಟ್ಟೆಗೆ."[೫] ಇವು ಸಾಮಾಜಿಕವಾಗಿ ಅವರು ನಡೆಸುತ್ತಿದ್ದ ದಬ್ಬಾಳಿಕೆ, ಸುಲಿಗೆಯನ್ನು ಸೂಚಿಸುತ್ತವೆ. ಈ ವರ್ಗಕ್ಕೂ ತಮ್ಮ ಶೋಷಕತನದ ಅರಿವಿದೆ. ಆದರೆ ತಮ್ಮ 'ಜರತಾರಿ'ಗಳ ಮಧ್ಯೆ ಅದನ್ನು ಬಚ್ಚಿಟ್ಟುಕೊಂಡಿದ್ದಾರೆ.

ಜೋಯಿಸರು ಪೂಜಿಸುವ ಗುಡಿಗೆ ಹೋಗುವ ರೈತನಿಗೆ ಕುವೆಂಪು ಕಿವಿಮಾತುಗಳನ್ನು ಹೇಳುತ್ತ ಮತ ಹೇಗೆ ಹುಟ್ಟುತ್ತದೆ ಮತ್ತು ರಾಜ್ಯವಾಳುವವರೆ ರೈತನನ್ನು ಹೇಗೆ ಸುಲಿಗೆ ಮಾಡುತ್ತಾರೆ ಎಂದು ಹೇಳುತ್ತಾ, ರೈತನೇ ನಿಜವಾದ ದೇಶಭಕ್ತ ಎನ್ನುತ್ತಾರೆ.

"ಮೊದಲ ಠಕ್ಕನು ಮೊದಲ ಬೆಪ್ಪನಂ ಸಂಧಿಸಲು
ಸಂಭವಿಸಿಕೆಂಬರೀ ಮತ ಎಂಬ ಮತಿವಿಕಾರಂ
ದೊರೆ ಪುರೋಹಿತರ್ ಅವಳಿಮೊಲೆಯೂಡಿ ಸಲಹಿದರದಂ.
ಮತದ ಮದಿರೆಯ ನೀಂಟಿ ಮಂಕುಬಡಿದಿದೆ ಜನಕೆ.
ಕೊನೆ ದೊರೆಯ ಕೊರಳಿಗಾ ಕೊನೆ ಪುರೋಹಿತನ ಕರುಳ್
ಉರುಳಾಗುವಾವರೆಗೆ ಸುಖವಿಲ್ಲ ಈ ಧರೆಗೆ!"[೬]

ರಾಜ ಮತ್ತು ಪುರೋಹಿತನ ಸಂಬಂಧವನ್ನು ವಿವರಿಸುತ್ತಾರೆ. ರೈತನ ಬಗ್ಗೆ ಕುವೆಂಪುರವರಿಗೆ ತುಂಬಾ ಸಹಾನುಭೂತಿ.

ಕರಿಯರದೋ ಬಿಳಿಯರದೋ ಯಾರದಾದರೇನು
ಸಾಮ್ರಾಜ್ಯ ಯಾವಾಗಲೂ ಸುಲಿಗೆ ರೈತನಿಗೆ!
ವಿಜಯನಗರವೋ? ಮೊಗಲ ಆಳ್ವಿಕೆಯೋ? ಇಂಗ್ಲಿಷರಾಳ್ವಿಕೆಯೋ?
ಎಲ್ಲರೂ ಜಿಗಣೆಗಳೇ ನನ್ನ ನೆತ್ತರಿಗೆ

ಎಂದು ಹೇಳುತ್ತ ಎಲ್ಲರೂ ರೈತರ ರಕ್ತವನ್ನು ಹೀರುತ್ತಾರೆ ಎಂದಿದ್ದಾರೆ.

ಶಾಸ್ತ್ರ ಪುರಾಣಗಳೆಲ್ಲ ಬೇರು ಬಿಟ್ಟಿರುವ ದೈವ ಸಂಬಂಧವಾದ ವಿಚಾರಗಳೆಲ್ಲ ಕಟ್ಟುಕತೆಗಳೆಂಬ ಮೂದಲಿಕೆಯೂ ಶ್ರಮಜೀವಿಯ ಶುದ್ಧ ಕಾಯಕದಲ್ಲಿ ಭಗವಂತ ಪ್ರತ್ಯಕ್ಷನಾಗುತ್ತಾನೆ. ಸಾಮಾನ್ಯ ವರ್ಗದವನೊಬ್ಬನು ಕೂಡ. ಶಿವನನ್ನು ಸೇರಬಲ್ಲ; ಶಿವನಾಗಬಲ್ಲ ಎಂಬುದನ್ನು ಈ ನಾಟಕದಲ್ಲಿ ಕಾಣಬಹುದು.

'ಜಲಗಾರ' ನಾಟಕದಲ್ಲಿ ತರುಣರು ಸಮಾಜದ ಕರಾಳತೆಯ ಸಂಪೂರ್ಣ ಅರಿವಿರುವವರು. ಅದರ ಬಗ್ಗೆ ಬದಲಾಗಬೇಕೆಂಬ ಧೋರಣೆಯುಳ್ಳವರು. ಆದರೆ ಇವರದು ಕೇವಲ ಬೌದ್ಧಿಕ ಕ್ರಿಯೆ. ಬಡಜನರ ಕಣ್ಣೆತ್ತಿ ನೋಡದಿಹ ಮರುಗದಿಹ ಹಾಳು ಪೂಜೆಯದೇಕೆ? ಹಸಿದ ಜನಗಳಿಗೆ ಕೊಡರೊಂದು ಕಾಸ; ತಣ್ಣಗಿಹ ಕಲ್ಲುಗಳ ಮೇಲೆ ಎಣ್ಣೆಯನ್ನು ಬೆಣ್ಣೆಯನ್ನೂ ಸುರಿಯವರು ಎಂಬ ಇವರ ಮಾತಿಗೂ. ಕಾಸು ಕೇಳಲು ಬಂದ ತಿರುಕನನ್ನು ಬಡಿಯುವ ಇವರ ಕ್ರಿಯೆಗೂ ಇರುವ ಅಸಮಾನತೆ ಇಲ್ಲಿ ಗಮನಾರ್ಹವಾದುದು. ನಡೆನುಡಿಗಳಲ್ಲಿ ಸಾಮ್ಯವಿಲ್ಲದ ಇವರು ಸಾಮಾಜಿಕವಾಗಿ ಭಟ್ಟನಿಗಿಂತ ಅಪಾಯಕಾರಿ ಎಂಬುದನ್ನು "ಶತ್ರುಗಳ ಕಾಟವಾದರು ಬೇಕು; ನಮಗಾಗಿ ಮಿತ್ರರೆಂಬುವ ನೆಪದಿ ಮರುಕ ತೋರುವ ಕೃತ್ರಿಮದ ಕಾಟ ಬೇಡ! ಭಟ್ಟನಾದರೊ ಬೈದು ಹೋದ. ಬಡಜನರಿಗಾಗಿ ಮರುಗುವ ಇವರು ಭಿಕ್ಷುಕನ ಕಣ್ಣೀರಿದು, ಒದ್ದು, ತೆರಳಿದರು"[2] ಎಂದು ಜಲಗಾರನ ಮಾತಿನಲ್ಲಿ ಹೇಳಿಸುತ್ತಾರೆ. ಭಟ್ಟ ಬಾಯಿಯಲ್ಲಿ 'ತ್ವಮೇವ ಮಾತಾಚ... ' ಎಂದು ಹೇಳಿಕೊಂಡು, ತನ್ನ ಮಡಿಯ ನರೆಯಲ್ಲಿ ತನ್ನತನವನ್ನು ಮರೆಮಾಡಿಕೊಂಡಿದ್ದರೆ, ಈ ತರುಣರು ನೇರವಾದ ಶೋಷಣೆಗೆ ಕಾರಣರಾಗುತ್ತಾರೆ. ಇಲ್ಲಿ ನಾಟಕಕಾರರ ಸಾಮಾಜಿಕ ಪ್ರಜ್ಞೆಯು ನಾಟಕ ಸೃಷ್ಟಿ ಸಂದರ್ಭದಲ್ಲಿ ಮಾತ್ರ ನಿಲ್ಲದೆ, ಇಂದಿಗೂ ಹೆಚ್ಚು ಹೆಚ್ಚು ಜೀವಂತವಾಗಿರುವುದು ಮುಖ್ಯವಾಗಿ ಕಂಡುಬರುತ್ತದೆ.

ಕುವೆಂಬುರವರ 'ಶೂದ್ರತಪಸ್ವಿ'ಯೂ ಸಹ ಶೂದ್ರ ಸಮುದಾಯಕ್ಕೆ 'ವಿದ್ಯೆ'ಯನ್ನು ಪಡೆಯುವ ಅಥವಾ ಬ್ರಾಹ್ಮಣರು ಪಡೆಯುವ ಯಾವುದೇ ರೀತಿಯ 'ವಿದ್ಯೆ'ಯನ್ನು ಪಡೆಯುವ ಹಕ್ಕಿಲ್ಲವೆಂಬುದನ್ನು ವ್ಯಕ್ತಪಡಿಸುತ್ತದೆ. ವಾಲ್ಮೀಕಿ ರಾಮಾಯಣದ ಉತ್ತರಕಾಂಡದ ಶಂಬೂಕ ಪ್ರಸಂಗವೂ ಕುವೆಂಪುರವರ "ಶೂದ್ರತಪಸ್ವಿ"ಯ ಶಂಬೂಕನ ಪ್ರಸಂಗವೂ ಬೇರೆ ಬೇರೆ ಎಂಬುದನ್ನು, ಶೂದ್ರ ತಪಸ್ವಿಯಲ್ಲಿ ಹೊಸ ರೂಪ ತಾಳಿರುವುದನ್ನು ನೋಡಬಹುದು. "ಶೂದ್ರ" ತಪಸ್ಸು ಮಾಡುವಂತಿಲ್ಲ. ಅದು ಏನಿದ್ದರೂ ಮೇಲುವರ್ಗದವರಿಗೆ ಮಾತ್ರ ಸೀಮಿತ ಎಂಬ ಅಭಿಪ್ರಾಯವನ್ನು ನಿರಾಕರಿಸಿ ಈ ನಾಟಕದಲ್ಲಿ ಯಾವುದೇ ವರ್ಗ ಏನು ಬೇಕಾದರೂ ಮಾಡಬಹುದು ಎಂಬುದನ್ನು ಪ್ರತಿಪಾದಿಸಿರುವುದನ್ನು ಕಾಣಬಹುದು.

ಮೃತ್ಯು ದೇವತೆ ಶಂಬೂಕನ ಆಶ್ರಮಕ್ಕೆ ಬಂದಾಗ, ಆಶ್ರಮದ ಕಾವಲುಗಾರನಾದ ವೃಕ್ಷಭೈರವ ಒಳಗೆ ಬಿಡುವುದಿಲ್ಲ. ಆಗ ಮೃತ್ಯು ದೇವತೆಯು ಶಂಬೂಕ ಋಷಿಯ ಗೌರವಕ್ಕಾಗಿ ಬಂದಿದ್ದೇನೆ ಎಂದು ಹೇಳಿದಾಗ. ಭೈರವನು ಯೋಜಿಸಿ ಶಂಬೂಕ ಮಹರ್ಷಿಗೆ ಅ ಗೌರವ ತೋರಿದ ಪಾರ್ವನನ್ನು ಶಿಕ್ಷಸಲು ಬಂದಿರುವನೆಂದು ಮೃತ್ಯುದೇವತೆಯನ್ನು ಒಳಗೆ ಬಿಡುತ್ತಾನೆ. ಪಾರ್ವ ತೋರಿದ ಅಗೌರವವಾದರೂ ಏನು? ಎಂದು ಕೇಳಿ 'ಪುಟ್ಟೊಳಾತಂ ಶೂದ್ರನಾಗಿರ್ದನೆಂದು'[3] ಮೃತ್ಯು ಹೇಳುತ್ತಾನೆ. ಈ ವಾಕ್ಯವೇ ನಾಟಕದ

ಮುಖ್ಯ ಕೇಂದ್ರವಾಗುತ್ತದೆ.

ಅಯೋಧ್ಯಾ ನಗರದ ಶ್ರೀರಾಮಚಂದ್ರನ ಅರಮನೆಯ ಬಳಿಯ ಉದ್ಯಾನದಲ್ಲಿ ಇಳಿ ವಯಸ್ಸಿನ ಬ್ರಾಹ್ಮಣನೊಬ್ಬ ವಿವಿಧ ರೀತಿಯಲ್ಲಿ ರೋದಿಸುತ್ತಿದ್ದಾನೆ. ಕಾರಣ ಆತನ ಮಗ ಮೃತಪಟ್ಟಿದ್ದಾನೆ.

ಪೋದ ಜನ್ಮಗಳಾವ ದುಷ್ಕೃತವೊ? ಅಲ್ಲದಿರೆ,
ಬಾಳ್ವುದಿಗೆ ನಾಂ ಪಡೆದೊರ್ವನೆಯೆ ಮಗನ್,
ಕಣ್ಣೆದುರೆ ಮಡಿವುದನ್ ಕಾಣ್ಬರೊಳರೇ
ಈ ಪುಣ್ಯಯುಗದೊಳ್?
ಅಪ್ರಾಪ್ತ ಯೌವನನ್,
ಅಕೃತ ಪಿತೃಕಾರ್ಯನ್,
ಅಪಾಪಜೀವಿತನ್,
ಪಂಚವತ್ಸರದೆನ್ನ ವತ್ಸನ್
ಆವ ಕತದಿಂದಿಂತು ರಾಮರಾಜ್ಯವನುಳಿದು
ಯಮರಾಜ್ಯಕೆಯ್ದುದನ್?
ನಾನಾವ ಪಾಪಮನ್ ಎಸಗಿದುದೆನಗೆ ನೆನಪಿಲ್ಲ
ಎಂದುಮ್ ಅನೃತವನೊರೆದೆನಿಲ್ಲ
ಮೇಣ್ ಹಿಂಸೆಯಂ ಗೆಯ್ದೆನಿಲ್ಲಾವ ಜೀವಿಗುಂ
ಮತ್ತಾರ ದುಷ್ಕೃತಕಿಂದು ಕೊಲೆವೋದುದೆನ್ನ ಶಿಶು?

ನನ್ನ ಮಗನ ಸಾವು ಸಹಜ ಸಾವಲ್ಲ, ಇದು ಅಕಾಲಿಕ ಸಾವು, ಯಾರೋ ಮಾಡಿದ ದುಷ್ಕೃತ್ಯದಿಂದ ನನ್ನ ಮಗ ಕೊಲೆಯಾಗಿದ್ದಾನೆ ಎಂಬುದು ಬ್ರಾಹ್ಮಣನ ಆಲೋಚನೆಯಾಗಿದೆ. ನನ್ನ ಮಗ ಯಾವ ಪಾಪ ಮಾಡಿರುವ ಬಗ್ಗೆ ನನಗೆ ನೆನಪೂ ಇಲ್ಲ. ಏನೂ ಮಾಡದಿದ್ದರೂ ಈ ದುಷ್ಕೃತ್ಯವೇಕಾಯಿತು ಎಂದು ಆಲೋಚಿಸಿದಾಗ ಆ ಬ್ರಾಹ್ಮಣನಿಗೆ ಈ ರೀತಿ ಹೊಳೆಯುತ್ತದೆ.

ಪೆರತೇನ್?
ಪಾಲದೇನಾ ಶೂದ್ರನ ತಪಕೆ ಮುನಿದ ಧರ್ಮಶಾಪಂ!
ಶೂದ್ರ ತಪಸ್ಸು ಮಾಡಿದ್ದರಿಂದ ಧರ್ಮದೇವತೆ ಮುನಿದು

ತನ್ನ ಮಗನ ಮರಣ ಸಂಭವಿಸಿದೆ ತನ್ನ ಮಗನನ್ನು ರಕ್ಷಿಸಬೇಕೆಂದು ಮತ್ತು ಅದಕ್ಕೆ

ಕಾರಣನಾದವನನ್ನು ಶಿಕ್ಷಿಸಬೇಕೆಂದು ರಾಮಚಂದ್ರನಲ್ಲಿ ಬ್ರಾಹ್ಮಣ ಕೇಳಿಕೊಳ್ಳುತ್ತಾನೆ. ಈ ರೀತಿಯ ರೋದನವನ್ನು ಕೇಳಿದ ಮೇಲೆ ಶ್ರೀರಾಮ ಈ ಸಾವಿಗೆ ಕಾರಣವೇನೆಂದು ಕೇಳುತ್ತಾನೆ.

ಬ್ರಾಹ್ಮಣ: ಮನ್ನಿಸು, ಮಹೀಶ್ವರ

ನನ್ನ ಕಂದನ ಹರಣಮಂ ಬೇಡಿ ಬಂದೆನ್;

ಕೃಪೆಯಿಂದದನ್ ನೀಡು.

ಶ್ರೀರಾಮ: ದ್ವಿಜೋತ್ತಮ, ನೀಂ ಪೇಳ್ವುದಕ್ಕಜಮ್!

ಧರ್ಮಾಧಿಕಾರಿ ವೈವಸ್ವತನ್ ನಿರ್ನೆರಂ

ನನ್ನ ರಾಜ್ಯದೊಳಿಂತು ಗೆಯ್ವನಲ್ಲರಿ.

ಇದರೊಳೊಂದೇನೂ ಧರ್ಮ ಚ್ಯುತಿಯಿರಲೆವೇಳ್ಕುಂ

ಅಪ್ರಾಪ್ತಕಾಲನಂ, ಬಾಲನಂ,

ಕೊಂಡೊಯ್ದ ಕಾಲನಂ ಕಾಲ್ಗೆಡಿಸುವೆನ್

ತಪ್ಪು ಅವನದಾಗಿರಲ್-ಆದೊಡಾಂ

ಅಪರಾಧಮ್ ಅವನದೆಂದಾಳೋಚಿಸೆನ್

ನೀಮ್ ಏನಾದೊಡಂ ಅಪೂಜ್ಯಮಂ ಗೆಯ್ದಿರೇನ್?

ಬ್ರಾಹ್ಮಣ: ಪೆರ್ನಡೆಯ ತಾಯ್ತಂದೆವಿರ್ ನನ್ನವರ್

ಬಿಜ್ಜೆಗಲಿಸಿರ್ಪೋಜರುಂ ಸಜ್ಜನರ್

ಪಾರ್ವಗೊಳ್ ಪುಟ್ಟಿರ್ಪುದೆನ್ನಾತ್ಮಂ, ಪ್ರಭೂ

ಬ್ರಾಹ್ಮ ಜಾತಿಯಲ್ಲಿ ಹುಟ್ಟಿದ್ದೇನೆ ನಾನು ಏನೂ ತಪ್ಪು ಮಾಡುವುದಿಲ್ಲ ಎಂದಾಗ ಶ್ರೀರಾಮನು ಸಹ ಅವನನ್ನು ಹೊಗಳಿ ನಮ್ಮ ರಾಜ್ಯದಲ್ಲಿ ನಿಮ್ಮಂಥವರು ಇರಬೇಕು ಎಂದು ಹೇಳುತ್ತಾ ಈ ಸಾವಿಗೆ ಮತ್ತೇನಾದರೂ ಕಾರಣವಿದೆಯಾ ಎಂದು ಕೇಳಲು, ಬ್ರಾಹ್ಮಣ ಶಂಬೂಕನ ವಿಷಯವನ್ನು ಈ ರೀತಿ ತಿಳಿಸುತ್ತಾನೆ-

ಬ್ರಾಹ್ಮಣ: ಶಿಷ್ಟಪರಿತ್ರಾಣ ಮೂರ್ತಿ, ಕೇಳ್:

ಇಂದು ಬೆಳಗುಂಬೊಳ್ತು ದೇವಾರ್ಚನೆಗೆ

ಪೂದಿರಿಯಲೆಂದು ನಾಂ ಪುತ್ರಕಂವೆರಸಿ

ಸಾರ್ದೆನೊರ್ವೆಸರ ಬನಮಂ

ಶ್ರೀ ರಾಮ: ಪೆಸರಿರ್ಪುದೇನಾ ಬನಕೆ? ಇರ್ಪುದೆತ್ತಣ್ಗೆ?

ಬ್ರಾಹ್ಮಣ: ಪಾಪಕರ ಮೆಂದುಸಿರ್ದೆನಿಲ್ಲಾ ಪೆಸರನ್,

ಇರ್ಪುದದು ಮೃತ್ಯುದಿಶೆಯೊಳ್

ಶ್ರೀರಾಮ: ಪೆಸರೊಳೇನ್ ಪಾಪಂ? ಉಸಿರಿಂ

ಬ್ರಾಹ್ಮಣ: ಶಂಬೂಕಾಶ್ರಮವೆಂದು ಕರೆವರಾ ಕಾಡನ್

ಶ್ರೀರಾಮ: ಓಹೊ ಈಗಳೆನಗೆ ಬೆಳಕು ಮೂಡುತಿದೆ!

ಮುಂದೆ?

ಬ್ರಾಹ್ಮಣ: ಮುಂದೇನ್, ಮಹಾಪ್ರಭೂ?

ಕಂಡೆವಿರ್ವರುಮಾ ತಪಂಬಡುತ್ತಿರ್ದನಂ

ಶೂದ್ರನಂ, ಶಂಬೂಕ ಪೆಸರಾಂತನಂ,

ಋಷಿವೇಷದಾ ಪಾಷಂಡಿಯಂ.

ಬ್ರಾಹ್ಮಣನೊಬ್ಬ ಶೂದ್ರನಿಗೆ ನಮಸ್ಕಾರ ಮಾಡುವುದು ಸಾಮಾಜಿಕವಾಗಿಯೂ ಒಪ್ಪತಕ್ಕಂತಹ ವಿಚಾರವಾಗಿರಲಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ನಾವು ಗಮನಿಸಬೇಕು.

ಶ್ರೀರಾಮ: ಓವೊ ದಿಟಂ: ಸ್ವರ್ಗಮಪ್ಪುದನೆಸಗಿದಿರಿ!

ಆ ಸೈಪಿನೊಂದು ಮೆಯ್ಮೆಗೇ ನಿಮ್ಮ ಭರ್ಭಕಂ

ಸ್ವರ್ಗಸ್ಥನಾದನೆಂಬಿರೇಂ?

ಬ್ರಾಹ್ಮಣ: ಅಲ್ತಲ್ತು, ರಾಮಚಂದ್ರ,

ಶೂದ್ರನ್ ತಪಂಗೆಯ್ವೊಂದು ಅಧರ್ಮಕ್ಕೆ,

ವರ್ಣಾಶ್ರಮ ಧರ್ಮದುಲ್ಲಂಘನೆಯ ಪಾಪಕ್ಕೆ,

ನಿನ್ನ ಬಾಲಪ್ರಜೆಯೊರ್ವನ್ ಬಲಿಯಾದನ್

ಮುಂದಾವ ಮಹತ್ಕಾರ್ಯಮಂ ಗೆಯ್ಯಲಿರ್ದನೊ?

ಆವ ಶಾಸ್ತ್ರವನೊರೆಯಲಿರ್ದನೊ?

ಆವ ಕಬ್ಬಮಂ ಕಟ್ಟಲಿರ್ದನೊ?

ಆವ ತಪದಿಂದಾವ ಸಿದ್ಧಿಯ ಪಡೆಯಲಿರ್ದನೋ

ಆ ಪ್ರಜೆ ಶೂದ್ರನ ತಪೋದುಷ್ಪ್ರತಿಗೆ ಬೇಳ್ವೆಯಾದನ್

ಪಾವಗಿದು ತೀರ್ದನ್!

ವರ್ಣಾಶ್ರಮವನ್ನು ಉಲ್ಲಂಘಿಸುವುದು ಅಥವಾ ಶೂದ್ರನಿಗೆ ತಪಸ್ಸು ಮಾಡುವ ಹಕ್ಕಿಲ್ಲ. ಹೀಗಾಗಿ ರಾಮರಾಜ್ಯದ ಬಾಲಪ್ರಜೆಯೊಬ್ಬ ಬಲಿಯಾಗಬೇಕಾಯಿತು ಎಂದು ಹೇಳುತ್ತಾನೆ. ಬ್ರಾಹ್ಮಣ ಇಲ್ಲಿಯೂ ತನ್ನ ಜಾತಿಯನ್ನು ಮೇಲು ಎಂದೇ ಹೇಳಿದ್ದಾನೆ. ಮೃತಪಟ್ಟ ಬಾಲಕನು ಉತ್ತಮ ಕುಲದಲ್ಲಿ ಹುಟ್ಟಿದ್ದರಿಂದ ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗುತ್ತಿದ್ದನೋ, ಸಮಾಜದಲ್ಲಿ ಏನೇನು ಘನಕಾರ್ಯಗಳನ್ನು ಸಾಧಿಸುತ್ತಿದ್ದನೋ! ಯಾವ ಶಾಸ್ತ್ರವನ್ನು ಬರೆಯುತ್ತಿದ್ದನೋ ಅಥವಾ ತಪಸ್ಸು ಮಾಡಿ ಸಿದ್ಧಿ ಪಡೆಯುತ್ತಿದ್ದನೋ ಆದರೆ ಅವನಿಗೆ ಅಕಾಲ ಮರಣವಾದುದರಿಂದ 'ರಾಜ್ಯಕ್ಕೆ' ಆದ ನಷ್ಟವೆಷ್ಟು ಎಂದು ರೋದಿಸುತ್ತಾ ತಪಸ್ಸು ಮಾಡಬೇಕಾದವರು ತಪಸ್ಸು ಮಾಡದೆ ತಪಸ್ಸಿಗೆ ಅನರ್ಹರಾದವರು ತಪಸ್ಸು ಮಾಡಿದುದರಿಂದ ಈ ಅನಾಹುತವಾಗಿದೆ ಎಂದು ಬ್ರಾಹ್ಮಣ ಹೇಳಿದನು.

ಶ್ರೀರಾಮನು ಬ್ರಾಹ್ಮಣನ ಮಾತುಗಳನ್ನು ಆಲಿಸಿದ ನಂತರ ಅಧರ್ಮಕ್ಕೆ ಕಾರಣನಾಗಿರುವ ಶಂಬೂಕನನ್ನು ಶಿಕ್ಷಿಸುವ ಮುನ್ನ ತನಗುಂಟಾದ ಸಂದೇಹವೊಂದನ್ನು ಜ್ಞಾನಿಯಾದ ಬ್ರಾಹ್ಮಣನಲ್ಲಿ ಪರಿಹರಿಸಿಕೊಳ್ಳಲು ಇಷ್ಟಪಡುತ್ತಾನೆ. ತನ್ನ ಸಂದೇಹವನ್ನು ನಿವೇದಿಸಿ ಪರಿಹಾರ ಕೇಳುತ್ತಾನೆ. ಶ್ರೀರಾಮ-ಬ್ರಾಹ್ಮಣನ ನಡುವೆ ನಡೆಯುವ ಈ ಸಂವಾದ ನಾಟಕದ ಮುಖ್ಯ ಜೀವವಾಗಿ ಕಂಡುಬರುತ್ತದೆ. ಸಾಮಾನ್ಯವಾಗಿ ಆಳುವ ವರ್ಗದವರು ಅವರಿಗೆ ಅನುಮಾನ ಇತ್ಯಾದಿ ಸಂದೇಹಗಳು ಬಂದಾಗ ಅಲ್ಲಿನ ಜ್ಞಾನಿಗಳನ್ನು ಕೇಳಿ ಮುಂದುವರಿಯುವುದು ಕಂಡುಬರುತ್ತದೆ. ಇಲ್ಲಿ ಕೇಳುವವರು ಮತ್ತು ಅದಕ್ಕೆ ಪರಿಹಾರ ನೀಡುವವರು (ಜ್ಞಾನಿಗಳು) ವಿವೇಕಿಯಾಗಿದ್ದರೆ, ಜ್ಞಾನಿಗಳು ಹೇಳಿದ ಸೂಕ್ತ ಸಲಹೆಗಳನ್ನು ಆಳುವ ವರ್ಗ ಬಳಸಿಕೊಂಡು ಉತ್ತಮ ಆಡಳಿತ ನೀಡಲು ಮುಂದಾಗುತ್ತಾರೆ. ಆದರೆ ಶ್ರೀರಾಮ ಮತ್ತು ಬ್ರಾಹ್ಮಣರ ಸಂವಾದದಲ್ಲಿ ಜ್ಞಾನಿಗಳು ಧರ್ಮಕ್ಕೆ ತಕ್ಕಂತೆ ಮತ್ತು ಅವರಿಗೆ ಅನುಕೂಲವಾಗುವಂತೆ ಸಲಹೆ ನೀಡುವುದು ಸಮಾಜದ ಬದುಕಿನ ಮೇಲೆ ಬೀರುವ ಪರಿಣಾಮವನ್ನು ಅಣಕದ ಮೂಲಕ ನಾವು ಕಾಣಬಹುದು ಮತ್ತು ಇಲ್ಲಿ ಬ್ರಾಹ್ಮಣ ತನ್ನ ಬ್ರಾಹ್ಮಣ ತತ್ವವನ್ನು ಬಿಟ್ಟುಕೊಡದಿರುವುದನ್ನು ಕಾಣಬಹುದು.

ಬ್ರಾಹ್ಮಣ: ಇದೇನ್?

ತಪಂಗೆಯ್ವ ಪಾಷಂಡಿಗೆ ಕೈಮುಗಿವನೋ?

ಮೇಣ್, ಬಿಲ್ಗೆ ಹೆದೆಯಂ ಬಲಿವ ಬಿಜ್ಜೆಯ ಪಾಂಗೊ?

ಅರಿಯೆನೀ ಪಾರ್ಥಿವೇಂದ್ರನ ವಿಚಿತ್ರಕೃತಿಯಂ!

ಶ್ರೀರಾಮ: ಭೂಸುರೋತ್ತಮ

ಕ್ಷತ್ರಿಯನೊಂದು ಸಂದೇಹಮಂ ನಿವಾರಿಸಿ

ಕೃಪೆಗೆಯ್ಯವೇಳ್ಕುಮ್

ಬ್ರಾಹ್ಮಣ: ನನ್ನಲ್ಪಬುದ್ಧಿಗೆ ತೋರ್ಪುದಂ ಪೇಳ್ವೆನ್

ಶ್ರೀರಾಮ: ಪೂಜ್ಯರ್ ಉದಾತ್ತ ಬುದ್ಧಿಯನ್ ಬರೆಯವೇಳ್ಕುಮ್

ಬ್ರಾಹ್ಮಣ : ಯಥಾ ಸಾಮರ್ಥ್ಯಮನ್, ರಾಜೇಂದ್ರ

ಶ್ರೀರಾಮ: ತಪಂ ಪೂಜ್ಯಕರ್ಮಮಲ್ತೆ, ದ್ವಿಜೇಂದ್ರ?

ಬ್ರಾಹ್ಮಣ : ತಪಕ್ಕೆಣೆಯುಂಟೆ, ರಾಘವೇಂದ್ರ?

ಶ್ರೀರಾಮ: ತಪಗೆಯ್ವನುಂ ಪೂಜ್ಯನಲ್ತೆ, ವಿಬುಧವರ್ಯ?

ಬ್ರಾಹ್ಮಣ: ಧರ್ಮಮೂರ್ತಿ

ಶ್ರೀರಾಮ : ಪೂಜ್ಯ ಹನನಂ ಪಾಪಕರಮಲ್ತೆ, ಸತ್ತ್ವಶೀಲ?

ಬ್ರಾಹ್ಮಣ : ನಿಸ್ಸಂಶಯಂ, ವಾಲಿ ಸಂಹಾರಿ

ಶ್ರೀರಾಮ : ಅಂತೆವೋಲ್

ಈ ತಪಸ್ವಿಯಂ ಕೊಲ್ವುದುಂ ಪಾಪಮಾಗದೆ?

ಇಲ್ಲಿ ಬ್ರಾಹ್ಮಣರು ಮತ್ತು ಕ್ಷತ್ರಿಯರ ಸಂಬಂಧವನ್ನು ಬಿಲ್ವಿದ್ಯೆ, ಅಕ್ಷರ ವಿದ್ಯೆಯ ಅನ್ಯೋನ್ಯತೆಯನ್ನು ತುಂಬ ರಮಣೀಯವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಸಮಾಜದಲ್ಲಿ ಎಲ್ಲರೂ ಸಮಾನರು, ಎಲ್ಲರಿಗೂ ಒಂದೇ ರೀತಿಯ ತತ್ವ ಸಿದ್ಧಾಂತಗಳು ಇರುತ್ತವೆ ಎಂದು ಶ್ರೀರಾಮ ಬ್ರಾಹ್ಮಣನಿಗೆ ಹೇಳುತ್ತಾನೆ. ಶ್ರೀರಾಮನ ಮಾತಾಗಿ ಬ್ರಾಹ್ಮಣನ ಈ ಅತಾರ್ಕಿಕ, ಒಂದಕ್ಕೊಂದು ಸಂಬಂಧವಿಲ್ಲದ ರೀತಿ ಹೇಳುವ ಮಾತುಗಳನ್ನು ಕೇಳಿ ರಾಮ ಕೋಪಗೊಳ್ಳುತ್ತಾನೆ.

ಶ್ರೀರಾಮ : ಸಾರ್ಥಕಮ್ ನೀಂ ಕಲ್ತ ಬಿಜ್ಜೆ, ಆಚಾರ್ಯ!

ನಿಮಗೆ ಸಮ್ಮತಮಲ್ತೆ ಬಾಣ ಪ್ರಯೋಗಂ?

ಬ್ರಾಹ್ಮಣ : ಅಪ್ಪುದಯ್, ಧನುರ್ಧರ,

ಶಿಕ್ಷೆಗರ್ಹ ನೀ ಶೂದ್ರ ತಪಸ್ವಿ

ಶ್ರೀರಾಮ: "ಶೂದ್ರನಪ್ಪೊಡಂ ತಪಂ ಶಕ್ತಿದಾಯಕಂ,

ಸಾಲದೀತನ ಕೊಲೆಗೆ ಸಾಮಾನ್ಯಸಾಯಕಂ."[6]

ಬ್ರಾಹ್ಮಣ : ಆವ ದಿವ್ಯಾಸ್ತ್ರದಿಂ ದೈತ್ಯೇಂದ್ರ ರಾವಣನ

ದಶಶಿರಗಳುರುಳಿದುವೊ ಅದನೆ ತುಡು, ಅರಿಂದಮ;

ಪಾಪ ಕರ್ಮ ದೊಳೀತನಾತಂಗೆ ಕೀಳಲ್ಲ.

ಶ್ರೀರಾಮ : ಬ್ರಹ್ಮಾಸ್ತ್ರಂ ಅತಿಭಯಂಕರಂ, ದ್ವಿಜನ್ಮ

ತನ್ನರಿಯನ್ ಅರಿಯದೆಯೆ ಬಿಡಿದೆಂತಾದೊಡಂ

ಬ್ರಾಹ್ಮಣ : ಈ ಪಾಷಂಡಿಗದು ತಕ್ಕುದೆ ವಲಂ;

ತುಡು, ಕೋದಂಡ ಪಾಣಿ!

ತಪಸ್ಸು ಮಾಡುವವನು ಶೂದ್ರನಾದುದರಿಂದ ಸಾಮಾನ್ಯ ಬಾಣ ಆಗುವುದಿಲ್ಲವೆಂದು ಬ್ರಹ್ಮಾಸ್ತ್ರವನ್ನೇ ಪ್ರಯೋಗ ಮಾಡಲು ಮುಂದಾದಾಗ ಧರೆ ನಡುಗುತ್ತದೆ, ಭಾನು ಗುಡುಗುತ್ತದೆ. ಈ ರೀತಿಯ ಸನ್ನಿವೇಶವನ್ನು ನೋಡಿದಾಗ ಬ್ರಾಹ್ಮಣನು ಸಹ ಹೆದರಿ ಶ್ರೀರಾಮನ ಮರೆಗೆ ಹೋಗುತ್ತಾನೆ. ಆದರೆ ಶಂಬೂಕನ ಬಳಿಗೆ ಹೋದ ಬ್ರಹ್ಮಾಸ್ತ್ರ ತನ್ನ ಉಗ್ರ ಸ್ವರೂಪವನ್ನು ತಳೆದು ಆ ತಪಸ್ವಿಗೆ ನಮಸ್ಕರಿಸುತ್ತದೆ. ಆಗ ಶ್ರೀರಾಮ ಬ್ರಾಹ್ಮಣನನ್ನು ನೋಡಿ ಈ ರೀತಿ ಹೇಳುತ್ತಾನೆ.

ಶ್ರೀರಾಮ : ಇದೇನ್ ಆಚಾರ್ಯ?

ಬ್ರಾಹ್ಮಣ : ಹೇ ದಾಶರಥಿ, ಇದೆಲ್ಲಂ ಶೂದ್ರ ತಪಸ್ಸಿನ

ತಮಃ ಪ್ರಭಾವಮೆದಲ್!

ನೀನೆಚ್ಚ ಬ್ರಹ್ಮಾಸ್ತ್ರಮುಂ ಆಯ್ತೆ ನಿಷ್ಫಲಂ?

ರಾಮ ಬಾಣ ನಿಷ್ಫಲವಾಗುವುದು ಸಾಧ್ಯವಿಲ್ಲ. ಆದರೆ ಇಲ್ಲಿ ರಾಮ ಬಾಣ ನಿಷ್ಫಲವಾಯಿತು ಎಂದರೆ ಶೂದ್ರನ ತಪಸ್ಸು ಕಾರಣ ಎಂಬುದು ಬ್ರಾಹ್ಮಣನ ಮಾತಾಗಿರುತ್ತದೆ. ಈ ಮಾತಿಗೆ ಪ್ರತಿಯಾಗಿ ಶ್ರೀ ರಾಮನು

ಶ್ರೀರಾಮ : ಬ್ರಹ್ಮಾಸ್ತ್ರಮಾದಪುದೆ ನಿಷ್ಫಲಂ?

ಈಗಳೆಯೆ ಸಫಲಮಕ್ಕುಂ

ಬ್ರಾಹ್ಮಣ : ಎಂತು?

ಶ್ರೀರಾಮ : ಋಷಿವರಗೆ ಮರ್ಯಾದೆಯಂ ಸಲಿಸಿ,

ತದನಂತರಂ, ಬರ್ಪುದಿತ್ತಣ್ಗೆ.

ಬ್ರಾಹ್ಮಣ : ಮತ್ತಮಿತ್ತಣ್ಗೆ ಅದೇಕಯ್?

ಶ್ರೀರಾಮ : ಧ್ವಂಸಗೆಯ್ಯಲ್ಕೆ ತನ್ನ ಹಗೆಯನ್ !

ಬ್ರಾಹ್ಮಣ : ಆರನ್ ?

ಶ್ರೀರಾಮ : ಅಧರ್ಮಿಯನ್

ಬ್ರಾಹ್ಮಣ : ಆ ಶೂದ್ರನನೆ?

ಶ್ರೀರಾಮ : ಅಲ್ತಲ್ತು, ಬ್ರಾಹ್ಮಣವರೇಣ್ಯನನ್!

ಬ್ರಾಹ್ಮಣ : ಬ್ರಾಹ್ಮಣವರೇಣ್ಯನನ್?

ಶ್ರೀರಾಮ : ಪೂಜ್ಯರನ್ ಅವಜ್ಞೆಗೆಯ್ದಾತನನ್;

ಶಾಸ್ತ್ರ ಸಂಭ್ರಾಂತನನ್, ದುರ್ವಿನೀತನನ್!

ಬ್ರಾಹ್ಮಣ : ಆ್ಹಃ?!

ಶ್ರೀರಾಮ : ನಿನ್ನನ್, ದ್ವಿಜೋತ್ತಮ !

ಬ್ರಾಹ್ಮಣ : ರಕ್ಷಿಸು, ಅನಾಥರಕ್ಷಕಾ, ದೀನಬಂಧೂ!

ಶ್ರೀರಾಮ : ನೀಮ್ ಅವಜ್ಞೆಗೆಯ್ದುದು ನನ್ನನಲ್ತು.

ಬ್ರಾಹ್ಮಣ : ಗತಿಯೇನೆನಗೆ ಬಟ್ಟೆದೋರಯ್,

ಕ್ಷಮಾಕನ್ಯಾ ಜೀವಿತೇಶ್ವರ !

ಶ್ರೀರಾಮ : ಮಾರ್ಗದರ್ಶಿ ಆ ಮಹಾಸ್ತ್ರಂ!

ಬ್ರಾಹ್ಮಣ : ಅಂತೆಗೆಯ್ವೆನ್; ನಿನ್ನಾಜ್ಞೆ

ಶ್ರೀರಾಮ : ಸಾಲದಿಲ್ಲಿಗೆ ಬರಿಯ ಆಜ್ಞಾಪಾಲನಂ

ಕಣ್‌ದೆರೆಯವೇಳ್ಕುಂ ಬುಧ ಪ್ರಜ್ಞೆಯುಂ, ದ್ವಿಜನ್ಮ,

ತಂದೆಯುಂ ಬರ್ದುಕವನ್ ? ಕಂದನುಂ ಬಳ್ದಪನ್.

ಈ ರೀತಿಯಾಗಿ ಶ್ರೀರಾಮನು ಬ್ರಾಹ್ಮಣನಿಗೆ ಹೇಳಿದ ನಂತರ ಬ್ರಾಹ್ಮಣ ಶ್ರೀರಾಮನನ್ನು ನೋಡುತ್ತ

ಬ್ರಾಹ್ಮಣ : "ಬೋಧಮಾಯ್ತೆನಗೀಗಳ್, ಮಹಾಪ್ರಾಜ್ಞ

ಬುದ್ಧಿಗಲಿಸಿದಯ್ ಸಂಪ್ರದಾಯ ಬದ್ಧಂಗೆ,

ಶಾಸ್ತ್ರ ಸಂಮೂಢಂಗೆ, ಜಾತಿಗರ್ವಾಂಧಂಗೆ

ಆವ ಜಾತಿಯ ತರವೊ? ಇಂಧನಕೆ ಹೊರತುಂಟೆ?

ಬೆಂಕಿಗೇಂ ಭೇದಮೆ? ದಳ್ಳುರಿಗೆ ದಾಕ್ಷಿಣ್ಯವೆ?

ಆರಾದರೇನ್? ಆರಾಧ್ಯರ್ ತಪೋಧನರ್!

ನಮಸ್ಕಾರಮೆ ಪುಣ್ಯಂ; ತಿರಸ್ಕಾರಮೆ ಪಾಪಂ!"[೧೦]

ಬ್ರಾಹ್ಮಣನಿಗೆ ರಾಮನ ನಿಲುವುಗಳು ಮತ್ತು ಅವನ ನೀತಿಗಳು ಅರ್ಥವಾಗಿ ಶ್ರೀರಾಮನ ಸೂಚನೆಯಂತೆ ಬ್ರಾಹ್ಮಣ ಶಂಬೂಕನಿಗೆ ನಮಸ್ಕರಿಸಿದಾಗ ಆತ ಬ್ರಹ್ಮಾಸ್ತ್ರದಿಂದ ತಪ್ಪಿಸಿಕೊಂಡದ್ದು ಮಾತ್ರವಲ್ಲ ಸತ್ತ ಮಗನೂ ಬದುಕುತ್ತಾನೆ. ಬ್ರಾಹ್ಮಣನಿಗೆ ಜ್ಞಾನೋದಯವಾಗುತ್ತದೆ. ಈ ರೀತಿಯಾಗಿ ಶೂದ್ರ ತಪಸ್ವಿ ನಾಟಕದಲ್ಲಿ ವರ್ಗ ಸಂಘರ್ಷವು ತೀವ್ರ ಸ್ವರೂಪಕ್ಕೆ ಹೋಗಿ ನಂತರ ಅದು ಶೂದ್ರರು ತಪಸ್ಸು ಮಾಡಬಹುದು ಎಂಬ ನಿಲುವಿಗೆ ಬರುವುದನ್ನು ಕಾಣಬಹುದು.

'ಶೂದ್ರ ತಪಸ್ವಿ' ನಾಟಕದಲ್ಲಿ ವರ್ಣಭೇದ ನೀತಿಯನ್ನು ವಿರೋಧಿಸುವ ಶ್ರೇಣೀಕರಣ ಸಮಾಜದ ವ್ಯವಸ್ಥೆಯ ಮೌಲ್ಯಗಳನ್ನು ತಿರಸ್ಕರಿಸಿ ಹೊಸ ಮೌಲ್ಯಗಳನ್ನು ಅಂದರೆ ಶೂದ್ರ-ಶಂಬೂಕನ ಮೂಲಕ ಕುವೆಂಪುರವರು ಜಾತಿ ಮೌಢ್ಯತೆಯನ್ನು ತೊಲಗಿಸುವ ರೀತಿ ಮತ್ತು ಶ್ರೀರಾಮ ಬ್ರಾಹ್ಮಣನಿಗೆ ಪಾಠ ಕಲಿಸಲು ಶಂಬೂಕನನ್ನು ಬಳಸಿಕೊಂಡಿರುವುದನ್ನು ಕಾಣಬಹುದು.

ಕುವೆಂಪುರವರ ಜಲಗಾರ, ಶೂದ್ರತಪಸ್ವಿ ನಾಟಕಗಳಿಗಿಂತ ಬೆರಳ್‌ಗೆ ಕೊರಳ್ ನಾಟಕವು ಭಿನ್ನವಾಗಿ ಕಂಡು ಬರುವುದನ್ನು ಕಾಣಬಹುದು. ಅಂದರೆ ಈ ನಾಟಕದಲ್ಲಿ ವರ್ಣಸಂಘರ್ಷದ ಸ್ವರೂಪವನ್ನು ನಾವು ಕಾಣುತ್ತೇವೆ. ವಸಾಹತೋತ್ತರ ಚಿಂತನೆಯಲ್ಲಿ ನಾವು ಪ್ರಮುಖವಾಗಿ ಪ್ರಸ್ತಾಪಿಸುತ್ತಿರುವ ದೇಸಿ ಸತ್ವದ ಅರ್ಥಪೂರ್ಣ ಅಭಿವ್ಯಕ್ತಿಯಾಗಿ, ನಗರ ಸಂಸ್ಕೃತಿಯ ಸ್ವರೂಪ, ಸೃಜನಶೀಲ ಶಕ್ತಿಯನ್ನು ಹತ್ತಿಕ್ಕಲು ಅದು ನಡೆಸುವ ಹುನ್ನಾರ, ಉದಾತ್ತತೆಯ ಹೆಸರಿನಲ್ಲಿ ದೇಸಿ ಸತ್ವ ಅದಕ್ಕೆ 'ಬಲಿ' ಯಾಗುವ ಕ್ರಮ, ಬಹುಮುಖೀ ನೆಲೆಯ ದೇಸೀ ಪರಂಪರೆ ಮತ್ತೊಂದು ನೆಲೆಯಲ್ಲಿ ಅದನ್ನು ಎದುರಿಸಿ ಪ್ರತಿಭಟಿಸುವ ಬಗೆ ಇವೆಲ್ಲವೂ ಈ ನಾಟಕದಲ್ಲಿ ಅದ್ಭುತವಾಗಿ ಚಿತ್ರಿತವಾಗಿರುವುದನ್ನು ಕಾಣುತ್ತೇವೆ. ನಗರ ಸಂಸ್ಕೃತಿ, ದೇಸಿ ಸಂಸ್ಕೃತಿಗಳ ಮುಖಾಮುಖಿ ಈ ನಾಟಕದ ಪ್ರಮುಖ ನೆಲೆಗಳಲ್ಲೊಂದು. ಇದನ್ನು ಅರ್ಜುನ ಸಂಸ್ಕೃತಿ ಏಕಲವ್ಯ ಎಂದು ಕರೆಯಬಹುದು. ಅರ್ಜುನ ಸಂಸ್ಕೃತಿಯಲ್ಲಿ ಅಧಿಕಾರ, ಅಹಂ, ಸ್ಪರ್ಧಾ ಮನೋಭಾವ, ನಯವಂಚಕತನ ಹಾಗೂ ವಿನಾಶಗಳನ್ನು ಕಂಡರೆ ಏಕಲವ್ಯ ಸಂಸ್ಕೃತಿಯಲ್ಲಿ ಮುಗ್ಧತೆ, ಶ್ರದ್ಧೆ, ಪೋಷಣೆಗಳನ್ನು ಕಾಣುತ್ತೇವೆ.

ಏಕಲವ್ಯ ವ್ಯಾಧನ ಪುತ್ರ. ದ್ರೋಣನ ಮಹಿಮೆಯನ್ನು ಕೇಳಿ ಆತನಿಂದ ಬಿಲ್ ಬಿಜ್ಜೆಯನ್ನು ಕಲಿತು ಬರುವುದಾಗಿ ತಂದೆಯನ್ನು ಬೇಡುತ್ತಾನೆ.

"ಅವರ್ ಪಾರ್ವರ್

ಬಯದರ್ಗೆ ಬವಜುಗೆಯ್ಯಲ್ಕೆ ಒಪ್ಪರ್

ನಿನ್ನನ್ ಗಹಗಹಿಸಿ ನಕ್ಕು ನೂಂಕುವರ್"[೧೧]

ಇದು ಶ್ರೇಣೀಕರಣ ಸಾಮಾಜಿಕ ವ್ಯವಸ್ಥೆಯ ಪರಿಸ್ಥಿತಿ. ವಿದ್ಯೆ ಕಲಿಯುವ ಹಕ್ಕು ಮೇಲುವರ್ಗದವರಿಗೆ ಮೀಸಲು, ಶೂದ್ರರಿಗೆ ಕಲಿಯುವ ಹಕ್ಕಿಲ್ಲ ಎಂದಾಗ ತಂದೆಯ ಹತ್ತಿರ ಎಂತಾದರೂ ಗುರುವನ್ನು ಒಪ್ಪಿಸಿ ವಿದ್ಯೆ ಕಲಿತು ಬರುವೆನೆಂದು ಹೇಳಿ ಅರಸರೂರಿಗೆ ಬರುತ್ತಾನೆ. ಏಕಲವ್ಯ ಕಾಡಿನಲ್ಲಿ

ವಾಸಿಸುತ್ತಿದ್ದುದರಿಂದ ನಗರದಲ್ಲಿ ಆತನಿಗೆ ದಿಕ್ಕು ತಪ್ಪುತ್ತದೆ. ನಗರ ಸಂಸ್ಕೃತಿಯನ್ನು ಹೇಗೆ ಎದುರಿಸುವುದು? ಆಗ ಏಕಲವ್ಯನಿಗೆ ಗುರುಪುತ್ರ ಅಶ್ವತ್ಥಾಮನ ಪರಿಚಯವಾಗುತ್ತದೆ. ಅವನ ಮೂಲಕ ಗುರು ದ್ರೋಣನ ಪರಿಚಯವಾಗುತ್ತದೆ. ಶೂದ್ರನೆಂದು ದ್ರೋಣ ಅವನನ್ನು ತಿರಸ್ಕರಿಸಲಿಲ್ಲ.

"ಅಶ್ವತ್ಥಾಮ, ನಮ್ಮ ಚಟ್ಟರೊಳಿವನು ಮೊರ್ವನ್;

ನಿನ್ನ ನೇರ್ಗಿರಿಯನೆಂದೀತನನ್ ಕಾಣ್"[೧೨]

ಎಂದು ಗುರು ಮಗನಿಗೆ ಹೇಳುವನು. ಆದರೆ ತಾನು 'ಅಸಾಮಾನ್ಯ' ನೆಂದು ಭಾವಿಸಿಕೊಂಡಿರುವ ಅರ್ಜುನನಿಗೆ ಆ ಸಾಮಾನ್ಯನ ಸಂಪರ್ಕ ಸಹ್ಯವೆನಿಸುವುದಿಲ್ಲ. ಏಕಲವ್ಯನು ವಿದ್ಯೆಯನ್ನು ಕಲಿತ ಮೇಲೆ ಪಾಂಡವರ ಸೇವೆಗೆ ನಿಲ್ಲುವನೆಂದು ಗುರು ಹಳಿದರೂ ಅರ್ಜುನನ ಅಸೂಯೆ ತಣಿಗೊಳ್ಳಲಿಲ್ಲ. ಬಿಲ್ವಿದ್ಯೆ ಕ್ಷತ್ರಿಯ ಕುಲದವರಿಗೆ ಮಾತ್ರ ಸೀಮಿತ ಮತ್ತು ನನ್ನನ್ನು ಮೀರಿಸುವಂತಹ ವಿದ್ಯೆ ಕಲಿತರೆ ಎನ್ನುವುದರಿಂದ ಅರ್ಜುನ ಒಪ್ಪುವುದಿಲ್ಲ

"ಅರಸು ಮಕ್ಕಳ ಅಸೂಯೆ ಅಡ್ಡವಂದುದು ನನಗೆ

ಪಾಂಡವರೊಳೊರ್ವನಾ ಬಿಂಕಗುಳಿ ಅರ್ಜುನನ್

ನನ್ನ ಬಿಲ್ಲೇಳ್ಗೆಯಂ ಕಂಡು ಕರುಬಿದನ್

ಶೂದ್ರನೊಡನೆಮಗೆ ಸಮಚರ್ಯೆ ಸಲ್ಲದೆಂದಾಡಿ

ಸೆಡೆತನ್, ಮುನಿದನ್, ಕೀಳವೋಲಾಡಿದನ್"[೧೩]

ಮೇಲುವರ್ಗದವರಿಗೆ ಮೀಸಲಾಗಿರುವ ಅಕ್ಷರ ವಿದ್ಯೆ ಹಾಗೂ ಬಿಲ್ವಿದ್ಯೆಯನ್ನು ಶೂದ್ರರು ಪಡೆಯಲಾಗದೆಂಬ ಅಂಶ ಬೆಳಕಿಗೆ ಬರುವುದನ್ನು ಗಮನಿಸಬೇಕು ಮತ್ತು 'ದೊರೆ-ಪುರೋಹಿತ'ರಿಬ್ಬರೂ ಅನ್ಯೋನ್ಯವಲ್ಲವೇ? ವಿದ್ಯೆ ಕಲಿಯಲು ಬಂದ ಏಕಲವ್ಯನನ್ನು ಹೊರಗಟ್ಟುತ್ತಾರೆ.

ಕಣ್ಣನಿದುಂಬಿದೆನ್ನಂ ನೋಡಿ ಕರುಣೆ ಗುರು

ಕೈವಿಡಿದು ತಲೆದಡವಿ ಸಂತಯ್ಸಿ ಪೇಳ್ದನ್:

'ಏಕಲವ್ಯ'- ಅವನಿತ್ತುದೆಯೆ ಆ ಪೆಸರ್:

ಬಚ್ಚನೆಂದೊಡೆ ನಗುವರೆಂದು

ಬೇರೊಂದು ಪೆಸರನಿಟ್ಟನ್-

ಪೇಳ್ದನ್ ಗುರು "ಏಕಲವ್ಯ, ಅಳಲದಿರ್,

ಆಸೆಗೆಡದಿರ್, ನೀನೆಮ್ಮ ಮನೆಯೊಳಾಗಿರು

ಈ ಗರುಡಿಗೆನ್ನ ಸೇವೆಗೈತರುತೆ

ದೂರದಿಂ ಕಂಡು ಕಲಿ, ಕಲ್ಪನಿತಂ,

ಮತ್ತುಳಿದುದಂ ಮನೆಯೊಳೆಯೆ ಕಲಿಯುವನಿತಂ

ಕಲಿಪೆನಶ್ವತ್ಥಾಮನೊಡನೆ"೧೪

ಕೇಳ್ದು, ಧೈರ್ಯಂ ಮೊಳೆತುದೆನಗೆ

ಕೃತಜ್ಞತೆಗೆ ಕಾಲ್ಪಿಡಿದು ಪೊಡಮಟ್ಟೆನ್

ಶ್ರೇಣೀಕರಣ ವ್ಯವಸ್ಥೆಯ ಸಮಾಜದಲ್ಲಿ ಕೆಳವರ್ಗಕ್ಕೆ ಸೇರಿದ ಒಬ್ಬ ಪ್ರತಿಭಾವಂತ ವಿದ್ಯೆ ಕಲಿಯಲು ಇರುವ ಅಡ್ಡಿ ಆತಂಕಗಳ ಸ್ವರೂಪವನ್ನು ನಾವಿಲ್ಲಿ ಗಮನಿಸಬೇಕಾಗುತ್ತದೆ. ಮೇಲುವರ್ಣದವರಿಗೆ ಇರುವ ಸೌಲತ್ತುಗಳು ಕೆಳವರ್ಗದವರಿಗಿಲ್ಲ. ಅರಮನೆ, ಗುರುಮನೆ-ಇವುಗಳಿಗೆ ಶೂದ್ರರ ಪ್ರವೇಶವಿಲ್ಲ. ಅಂತಹ ಸನ್ನಿವೇಶದಲ್ಲಿ ಏಕಲವ್ಯ ದ್ರೋಣನ ಪ್ರತಿಮೆಯನ್ನೇ ಗುರುವೆಂದು ತಿಳಿದುಕೊಂಡು ಶ್ರದ್ಧಾ ಭಕ್ತಿಗಳಿಂದ ಕಲಿತ ವಿದ್ಯೆಗೆ ಪ್ರತಿಷ್ಠಿತ ಶಕ್ತಿ ತೊಂದರೆ ತರುವ ಸಂದರ್ಭ ಮಾರ್ಮಿಕವಾಗಿದೆ. ಕಷ್ಟಪಟ್ಟು ವಿದ್ಯೆ ಕಲಿತರೂ ಅರ್ಜುನ ತನ್ನ ವ್ಯಕ್ತಿತ್ವವನ್ನು ಮೇಲ್ಮಟ್ಟಕ್ಕೆ ಏರಿಸಿಕೊಳ್ಳುವ ದೃಷ್ಟಿಯಿಂದ ದ್ರೋಣನ ಕಡೆಯಿಂದ ಗುರು ದಕ್ಷಿಣೆ ಕೇಳಿಸುವುದು ಕಂಡು ಬರುತ್ತದೆ.

ಬೇಟೆಯಾಡಲು ಕಾಡಿಗೆ ಬಂದ ಅರ್ಜುನನನ್ನು ಏಕಲವ್ಯ ಭೇಟಿಯಾಗುತ್ತಾನೆ. ಅಲ್ಲಿನ ಸಂಭಾಷಣೆಯಲ್ಲಿ ಅವರಿಬ್ಬರ ಸಂಸ್ಕೃತಿಯು ಕಂಡುಬರುತ್ತದೆ.

ಅರ್ಜುನ : ವನಚರ, ಆರ್ ಎಚ್ಚರೀ ವರಾಹ ಮನ್?

ಏಕಲವ್ಯ : ನಾಗರಿಕ, ಓದಿ ತಿಳಿ, ಕಲಿಪುದಾ ಬಾಣಾಕ್ಷರಂ

ಅರ್ಜುನ : ಆರೊ ನೀನ್?

ಏಕಲವ್ಯ : ನೀನೆ ಸಂಬೋಧಿಸಿದವೊಲ್ ವನಚರನ್

ಅರ್ಜುನ : ನಾಲಗೆಯ ನೆರಂ ಬೇಕೆ?

ನಿನ್ನಿರ್ಕೆಯ ಪೇಳ್ವಪುದದನ್,

ನಿನ್ನ ಕೈರಾತ್ಯಮಂ|

ನಾನ್ ಕೇಳ್ವುದು ನಿನ್ನ ಪೆಸರನ್|

ಅನಾಮನೇನ್ ನೀನ್

ಏಕಲವ್ಯ : ವನಚರರ್ ಅನಸೂಯಾಶೀಲರ್

ಅರಿಯರ್ ಪೆಸರಂ ಮೆರೆವ ಅಹಂಕಾರಮಂ

ಪೆಸರಾಸೆ, ಅದೊಂದು ನಾಗರಿಕರ್ಗೆ ಮೀಸಲಾಗಿರ್ಪ

ಮನೋಜಾಡ್ಯಂ ಕಣಾ!

ಮೊದಲ್ ಪೇಳ್ ನಿನ್ನ ಪೆರ್ಮೆಯಾ ಪೆಸರಂ

ಯಾವ ರೀತಿಯಿಂದಲಾದರೂ ಹೆಸರು ಮಾಡಬೇಕೆಂಬ ಈ ಮನೋಜಾಡ್ಯವೇ ಇಂದೂ ಕೂಡ ಅನೇಕ ಸಮಸ್ಯೆಗಳ ಮೂಲ. 'ಮೆರೆಯುವ' ಆಡಂಬರ ನಾಗರಿಕ ಸಂಸ್ಕೃತಿಯ ಪ್ರಮುಖ ಲಕ್ಷಣವೂ ಹೌದು. ಇಲ್ಲಿ ಇಬ್ಬರೂ ಮಾತನಾಡುತ್ತಿರುವುದು ವೈಯಕ್ತಿಕ ನೆಲೆಯಲ್ಲಲ್ಲ. ಹೀಗಾಗಿಯೇ ಇಲ್ಲಿ ನಾವು ಸಂಸ್ಕೃತಿ ಸಂಘರ್ಷವನ್ನು ಕಾಣಬಹುದು.

ಏಕಲವ್ಯ : 'ನನ್ನಯ್ಯನಿಂದೆನಗೆ ಬಂದಡವಿ ಈ ಪೊಡವಿ

ನನ್ನಯ್ಯನಾದಿಂ ಬಳಿಂ ನಾನಿಲ್ಲಿಗೊಡೆಯನ್

ನನ್ನಾಜ್ಞೆಯಿಲ್ಲದೆಯೆ ನನ್ನಡವಿಯಂ ಪೊಕ್ಕು

ರಕ್ಷೆಯ ಮೃಗಂಗಳಂ ಬೇಂಟೆಯಾಡುವ ನೀನ್

ಕೊಳ್ಳೆಗಾರನ್, ಕಳ್ಳನ್, ದಂಡನಾರ್ಹನ್,

ನಿನ್ನ ಊರತ್ತಣ್ಗೆಯಿರ್ಕೆ ನಿನ್ನಾಳ್ವಂ ಬಿಂಕಂ

ನಾನೆಚ್ಚುದೀ ವರಾಹನನ್ ಉಳಿದು

ಕ್ಷೇಮದಿಂದ ಬಿಟ್ಟು ತೊಲಗೀ ಅಡವಿಯಂ'[೧೫]

ಇಲ್ಲಿ ಏಕಲವ್ಯ ಆತ್ಮವಿಶ್ವಾಸದಿಂದ ಮಾತನಾಡುತ್ತಿದ್ದಾನೆ. ಆದರೆ ಅರ್ಜುನ ಮಾತನಾಡುವ ರೀತಿ ಹೀಗಿದೆ:

ಅರ್ಜುನ : "ನೀನೆಚ್ಚುದೆಂತೊ ಬಿಯದ?

ನಾನಿಲ್ಲಿಗೈತಂದ ವೇಳೆಯೊಳ್

ನೀನೆಲ್ಲಿಯುಂ ಕಣ್ಬೊಲದೊಳಿರ್ದುದಿಲ್ಲ

ಹೂಂಕಾರಮಂ ಕೇಳ್ದು ಗುರಿಯೆಚ್ಚೆಯೋ?"[೧೬]

ಏಕಲವ್ಯ : ದಿಟವೊರೆದೆಯಯ್

ಅರ್ಜುನ : "ನಿನಗೆಂತೊ ತಿಳಿದುದಾ ಬಿಲ್‌ಜಾಣ್ಮೆ?

ಓವೊ! ನೀನ್ ಬಿಲ್ ಜಾಣನ್?

ಶಬ್ದವೇಧೀ ವಿದ್ಯೆ ನಿನಗೆ ಅಂಗಯ್ ನೆಲ್ಲಿಯಲ್ತೆ?"[೧೭]

ಏಕಲವ್ಯ : 'ನೀಂ ದಲ್ ಸತ್ಯವಾಕ್ ಕಣಾ

ಕರತಲಾಮಲಕಮಾ ಬಿಜ್ಜೆ ನನಗೆ'[೨೨]

ಆಧುನಿಕ ಸಂದರ್ಭದಲ್ಲಿ ಜಾಗತೀಕರಣದ ಪರಿಣಾಮವೂ ಇದೆ.

ಅರ್ಜುನ : 'ಪುಸಿಯದಿರ್ ಕಾಡ!

ಜಗತ್ರಯದೊಳೊರ್ವನಿರ್ಪನ್

ಅವನರಿವನಾ ವಿದ್ಯೆಯಂ'[೨೮]

ಏಕಲವ್ಯ : ನನಗರಿಯದಾ ಸರ್ವಜ್ಞತೆಯ ಪರ್ಮೆ

ಆದೊಡಂ, ನೀನ್ ಪೇಳ್ವುದುದು ನನ್ನಿಯಪ್ಪೊಡೆ,

ನಿನ್ನಿದಿರೆ ನಿಂದಿರ್ಪನಾ ನೀನ್ ಬಣ್ಣಿಪಾತನ್

ಅರ್ಜುನನು ಭ್ರಮೆಯಲ್ಲಿರುತ್ತಾನೆ. ಆ ಭ್ರಮೆಗೆ ಏಕಲವ್ಯನ ನಿಷ್ಠುರ ಸತ್ಯ ಆಘಾತವುಂಟು ಮಾಡುತ್ತದೆ.

ಅರ್ಜುನ : ನೀನ್ ಅವನಲ್ತೊ! ನಾನ್ ಬಲ್ಲೆನ್!

ಏಕಲವ್ಯ : ಎಂತು ಬಲ್ಲಯ್?

ಸರ್ವಜ್ಞನೋ ನೀನ್?

ಅರ್ಜುನ : ಎಂತೆನೆ... ಎಂತೆನೆ.... ಕೇಳ್

ನಾನೆ ಅವನ್ ! ಕೇಳ್ದರಿಯಲಾ ನೀನ್

ತ್ರೈಲೋಕ್ಯವೀರನನ್ ಅರ್ಜುನ ನಾಮನನ್?

ಏಕಲವ್ಯ : ಅವನಾರ್?

ಏಕಲವ್ಯ ಇಲ್ಲಿ ಅರ್ಜುನನ ಹೆಸರನ್ನು 'ಗರ್ಜನ' ಎಂದು ವಿಡಂಬಿಸಿ ಹೇಳುತ್ತಾನೆ. ಅಲ್ಲದೆ ತನ್ನ ಹೆಸರು ಬಾಣದಲ್ಲಿದೆಯೆಂದು ಹೇಳಿ, ಹಂದಿಗೆ ಹೊಡೆದಿದ್ದ ಬಾಣವನ್ನು ಕಿತ್ತು ಓದೆಂದು ಅರ್ಜುನನಿಗೆ ಕೊಡುತ್ತಾನೆ. ಬಾಣವನ್ನು ತೆಗೆದು ಓದುತ್ತಾನೆ.

ಏಕಲವ್ಯ ಬಿಲ್ವಿದ್ಯೆ ಕಲಿತ ಪರಿ ಅರ್ಜುನನಿಗೆ ತಿಳಿಯುತ್ತದೆ. ಶಿಷ್ಟಾಚಾರಕ್ಕೆ ಆತನನ್ನು ಅಭಿನಂದಿಸಿದರೂ, ಅರ್ಜುನನ ಮನಸ್ಸು ಕುದಿಯುತ್ತಿರುತ್ತದೆ. ಈ ಕುದಿತವೇ ಏಕಲವ್ಯನ ಶಕ್ತಿಯನ್ನು ಬಲಿ ತೆಗೆದುಕೊಳ್ಳುತ್ತದೆ.

ಅರ್ಜುನನ ಸಂಸ್ಕೃತಿ ಸರ್ವಾಧಿಕಾರೀ ಮನೋಭಾವದ ಸಂಸ್ಕೃತಿ. ಅದೇ ನಾಡವರ ಸಂಸ್ಕೃತಿ.

ಈ ಸಂಸ್ಕೃತಿ ಎಲ್ಲದರ ಮೇಲೆ ಹಿಡಿತವನ್ನು ಸಾಧಿಸುತ್ತದೆ.

ಈ ನಾಟಕದಲ್ಲಿ ಏಕಲವ್ಯನ ಸಂಸ್ಕೃತಿ -ಅರ್ಜುನನ ಸಂಸ್ಕೃತಿಗಳ ಸಂಘರ್ಷವನ್ನು ಕಾಣುವುದು ಅವರ ಮಾತಿನ ಸಂಭಾಷಣೆಯಲ್ಲಿ.

ಈ ನಾಟಕದಲ್ಲಿ ಕ್ಷತ್ರಿಯ -ಬ್ರಾಹ್ಮಣನ ಮೂಲಕ ಶೂದ್ರನನ್ನು ಶೋಷಣೆ ಮಾಡುವುದನ್ನು ಕಾಣಬಹುದು.

ಪುರಾಣ ಯುಗದಲ್ಲಿ ಮಹಾಭಾರತ ರಾಮಾಯಣದ ಕಾಲದಲ್ಲಿ ಪುರೋಹಿತಶಾಹಿ ಅರಸೊತ್ತಿಗೆಯೊಡನೆ ಕೈಜೋಡಿಸಿ ಮನುಧರ್ಮಶಾಹಿಯನ್ನು ಅದರ ಅವಿಭಾಜ್ಯ ಅಂಗವಾದ ಚಾತುರ್ವರ್ಣ ಪದ್ಧತಿಯನ್ನು ಅರಸೊತ್ತಿಗೆ ರಕ್ಷಿಸುತ್ತಲೆ ಬಂದಿದೆ. ದ್ರೋಣಾಚಾರ್ಯ ಅರಸು ಮಕ್ಕಳಿಗೆ ಧನುರ್ವಿದ್ಯೆಯನ್ನು ಕಲಿಸುವಾಗ ಕ್ಷತ್ರಿಯರಾದ ಕುರುಪಾಂಡವರನ್ನು ಮೀರಿಸುವ ಅವಕಾಶವನ್ನು ಕೊಡದಂತೆ ಸೂತಕುಲದವನೆಂದು ಭಾವಿಸಿದ್ದ ಕರ್ಣನಿಗೂ, ವ್ಯಾಧ ಜಾತಿಯವನಾದ ಏಕಲವ್ಯನಿಗೂ ಧನುರ್ವಿದ್ಯೆಯನ್ನು ಕಲಿಸಲು ನಿರಾಕರಿಸಿದ. ಕರ್ಣ ತನ್ನ ಜಾತಿಯನ್ನು ಮರೆಮಾಚಿ ಧನುರ್ವಿದ್ಯೆಯನ್ನು ಕಲಿತಾಗ, ಅವನು ಕ್ಷತ್ರಿಯನಲ್ಲ ಎಂದು ತಿಳಿದಾಗ, ವಿದ್ಯಾಗುರು ದ್ರೋಣಾಚಾರ್ಯ, ಕಲಿತ ವಿದ್ಯೆ ಆಪತ್ಕಾಲದಲ್ಲಿ ಮರೆತು ಹೋಗಲಿ ಎಂಬ ಶಾಪ ಕೊಟ್ಟ. ಏಕಲವ್ಯನಿಗೆ ವಿದ್ಯೆಯನ್ನು ನಿರಾಕರಿಸಿದರೂ ಅವನು ತನ್ನ ಭಕ್ತಿಯಿಂದ ದ್ರೋಣಾಚಾರ್ಯನು ಕಲಿಸದಿದ್ದ ಧನುರ್ವಿದ್ಯೆಯನ್ನು ಕಲಿತ. ಅವನು ಶಬ್ದವೇಧಿ ಧನುರ್ವಿದ್ಯಾಪಾರಂಗತನಾದುದನ್ನು ತಿಳಿದ ಕ್ಷತ್ರಿಯ ಅರ್ಜುನ ಬ್ರಾಹ್ಮಣ ದ್ರೋಣನಿಂದ ವ್ಯಾಧ ಏಕಲವ್ಯನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆದು ಅರಸೊತ್ತಿಗೆಗೆ ನೆರವಾದ.

ಮನುಶಾಸ್ತ್ರ, ವರ್ಣಾಶ್ರಮದ ಒಂದು ಕಠೋರ ನಿಯಮ ಶೂದ್ರರು ವಿದ್ಯೆಗೆ ಅನರ್ಹರು ಎಂಬುದು. ಆ ನಿಯಮವನ್ನು ಎಷ್ಟು ಕಟ್ಟುನಿಟ್ಟಾಗಿ ಆಚರಿಸಿಕೊಂಡು ಬರುತ್ತಿದ್ದರು ಎಂಬುದು ಸ್ವತಃ ಸಿದ್ಧ ಸತ್ಯ. ಕುವೆಂಪು ಜೀವನ ಕಾಲದಲ್ಲಿ ಈ ನಿಯಮವನ್ನು ಉಚ್ಚವರ್ಣದವರು ಪಾಲಿಸಿಕೊಂಡು ಬರುತ್ತಿದ್ದರು. ಅದಕ್ಕೆ ಅರಸೊತ್ತಿಗೆ ಬೆಂಬಲವಾಗಿತ್ತು. ಉಚ್ಚವರ್ಣದವರಿಗೆ ನೆರವಾಗದ ಕ್ಷತ್ರಿಯರ ವಂಶನಿರ್ಮೂಲನೆಯನ್ನೆ ಮಾಡಿದ ಚಾಣಕ್ಯ ನಂದವಂಶದ ನಿರ್ಮೂಲನೆಯಿಂದ ಪುರೋಹಿತಶಾಹಿಯನ್ನು ಬೆಂಬಲಿಸುವ ಅರಸೊತ್ತಿಗೆಯನ್ನು ಸ್ಥಾಪಿಸಿದ.

ಮತಮೌಢ್ಯ, ಮತಭ್ರಾಂತಿಯ ಮುಖ್ಯ ಕಾರ್ಯನಿರ್ವಾಹಕರು ಪುರೋಹಿತರು, ಪೂಜಾರಿಗಳು ಎಂಬುದನ್ನು ಮರೆಯಬಾರದು. ಈ ಪುರೋಹಿತಶಾಹಿ ಅರಸೊತ್ತಿಗೆಯ ಊಳಿಗದವರಾಗಿ ಶೋಷಣೆಗೆ ಮತ್ತು ಮೌಢ್ಯವಿಸ್ತರಣೆಗೆ ನೆರವಾಯಿತು. ಪುರೋಹಿತಶಾಹಿ ಮತ್ತು ಅರಸೊತ್ತಿಗೆ ಒಂದಕ್ಕೊಂದು ಪೂರಕ. ಈ ಎರಡೂ ದುಶ್ಶಕ್ತಿಗಳಲ್ಲಿ ಯಾವುದೊಂದು ಉಳಿದರೂ ಜನರಿಗೆ ಉಳಿಗಾಲವಿಲ್ಲ. ಮನುಧರ್ಮಶಾಸ್ತ್ರದ ಮತ್ತೊಂದು ಪಾಪಪಿಂಡ ವರ್ಣಾಶ್ರಮ ವ್ಯವಸ್ಥೆ. ತತ್ಫಲವಾಗಿ ಉಚ್ಚ-ನೀಚ ಭೇದ. ಈ ಧರ್ಮ ಎಂತಹುದೆಂದರೆ-

ಸುಳ್ಳಿನ ಮಾಲೆಯ ಕೊರಳಿಗೆ ಸೂಡಿ
ಕಳ್ಳನೊಬ್ಬನನು ಗುರುವನು ಮಾಡಿ
ಬಡವರ ಹೊನ್ನನು ಕಾಣಿಕೆ ನೀಡಿ
ಧರ್ಮದಿ ಮರೆವರು ನೋಡಯ್ಯ

ಮನುಶಾಸ್ತ್ರವನ್ನು ಓದಿದವರು, ಕೇಳಿದವರು, ಲೋಕದ ಇತಿಹಾಸವನ್ನು ಸ್ಥೂಲವಾಗಿ ಆದರೂ ಅಭ್ಯಾಸ ಮಾಡಿದವರು. ಮತಾಂಧತೆ, ಮತಭ್ರಾಂತಿ, ಮತದ್ವೇಷ ಮತ್ತು ಜಾತೀಯತೆಯ ಮೂಲಕಾರಣ ಅವಿಚಾರ, ಅವೈಜ್ಞಾನಿಕತೆ ಎಂಬುದನ್ನು ಗ್ರಹಿಸುತ್ತಾರೆ. ಅಂದರೆ ವೈಚಾರಿಕತೆಯ ವೈಜ್ಞಾನಿಕತೆಯ ಪರಮಶತ್ರು ಮತಭ್ರಾಂತಿ ಎಂಬುದು ಇತಿಹಾಸ ಸಾರುವ ಸತ್ಯ. ಅದಕ್ಕೆ ಒಂದೇ ಒಂದು ಉದಾಹರಣೆಯನ್ನು ಗಮನಿಸುವುದು ನಾವೀಗ ಮಾಡುತ್ತಿರುವ ಅಧ್ಯಯನಕ್ಕೆ ಸಹಾಯಕವಾಗುತ್ತದೆ. ಹನ್ನೊಂದು ಹನ್ನೆರಡನೆಯ ಶತಮಾನದಲ್ಲಿ ಕ್ರಿಶ್ಚಿಯನ್ನರಿಗೂ ಮಹಮ್ಮದೀಯರಿಗೂ ನಡೆದ ನೂರು ವರ್ಷಗಳ ಯುದ್ಧಕ್ಕೂ ಮೂಲ ಕಾರಣ ಎರಡು ಮತಗಳವರ ಮತಭ್ರಾಂತಿ, ಮತಾಂಧತೆಯೇ.

****

ಅಡಿಟಿಪ್ಪಣಿ

೧. ಕುವೆಂಪು ಸಮಗ್ರ ನಾಟಕ-ಸಂ.ಡಾ.ಕೆ.ಸಿಶಿವಾರೆಡ್ಡಿ, ಪುಟ ೬.

೨. ಕುವೆಂಪು ಸಮಗ್ರ ನಾಟಕ- ಸಂ.ಡಾ.ಕೆ.ಸಿ. ಶಿವಾರೆಡ್ಡಿ, ಪುಟ ೧೦.

೩. ಅದೇ, ಪುಟ ೧೦.

೪.ಅದೇ, ಪುಟ ೯.

೫. ಅದೇ, ಪುಟ ೨೨.

೬. ಅದೇ, ಪುಟ ೧೩.

೭. ಅದೇ, ಪುಟ ೧೫.

೮. ಶೂದ್ರ ತಪಸ್ವಿ, ಕುವೆಂಪು, ಪುಟ ೫.

೯. ಶೂದ್ರ ತಪಸ್ವಿ, ಕುವೆಂಪು, ಪುಟ ೨೨.

೧೦. ಅದೇ, ಪುಟ ೨೫.

೧೧. ಬೆರಳ್‌ಗೆ ಕೊರಳ್, ಕುವೆಂಪು, ಪುಟ ೧೨.

೧೨. ಅದೇ , ಪುಟ ೧೩.

೧೩. ಅದೇ,ಪುಟ ೧೩.

೧೪. ಅದೇ, ಪುಟ ೧೪.

೧೫. ಅದೇ, ಪುಟ ೧೬.

೧೬. ಅದೇ, ಪುಟ ೧೭.

೧೭. ಅದೇ, ಪುಟ ೧೭.

೧೮. ಅದೇ, ಪುಟ ೧೭.

೧೯. ಅದೇ, ಪುಟ ೧೭.

ಅಧ್ಯಾಯ-೫

ಶೋಷಿತರ ಪರವಾದ ನಿಲುವುಗಳು

ಶೋಷಿತರ ಪರವಾದ ನಿಲುವುಗಳು

ಕುವೆಂಪು ತಮ್ಮ ನಾಟಕಗಳಲ್ಲಿ ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ಧ ಪಾತ್ರಗಳ ಮೂಲಕ ಗುಡುಗಿರುವುದು ಕಂಡುಬರುತ್ತದೆ. ಸಮಾಜದಲ್ಲಿ ವರ್ಗ ಸಂಘರ್ಷದಿಂದ ಜಾತಿ ವೈಷಮ್ಯ ಹುಟ್ಟಿಕೊಂಡು ದೇಶದ ಅಭಿವೃದ್ಧಿ, ಮಾನವನ ಅಭಿವೃದ್ಧಿ ಇತ್ಯಾದಿ ರಂಗಗಳಲ್ಲಿ ಕುಂಟಿತವಾಗುತ್ತಿರುವುದನ್ನು ಕಾಣಬಹುದು. ಸಮಾಜದಲ್ಲಿ ಮೇಲು ವರ್ಗದವರು ಅನ್ನಿಸಿಕೊಂಡವರೇ ಎಲ್ಲಾ ರೀತಿಯ ಸೌಲತ್ತುಗಳನ್ನು ಪಡೆಯುತ್ತಿರುವುದನ್ನು ಕಾಣಬಹುದು. ಈ ಎಲ್ಲಾ ರೀತಿಯ ಅನಿಷ್ಟ ಪದ್ಧತಿಗಳನ್ನು ಮತ್ತು ಮೇಲು ವರ್ಗದವರು ಕೆಳವರ್ಗದವರನ್ನು ಶೋಷಣೆ ಮಾಡುತ್ತಿರುವುದನ್ನು ಖಂಡಿಸಿ ಶೋಷಿತ ವರ್ಗ ಎಚ್ಚೆತ್ತುಕೊಂಡು ಸಮಾಜದಲ್ಲಿ ಸ್ಥಾನಮಾನ ಗಳಿಸಿಕೊಳ್ಳುವಂತೆ ಕುವೆಂಪು ತಮ್ಮ ನಾಟಕಗಳ ಮೂಲಕ ಶೋಷಿತರ ಪರವಾಗಿ ನಿಲ್ಲುವುದನ್ನು ಕಾಣಬಹುದು.

ಕುವೆಂಪು 'ಜಲಗಾರ' ನಾಟಕದಲ್ಲಿ ಜಲಗಾರ ಒಂದು ಮುಖ್ಯ ಪಾತ್ರವಾಗಿದ್ದು ಒಂದು ವರ್ಗದ ಪ್ರತಿಮೆಯಾಗಿ ನಿಲ್ಲುತ್ತದೆ. ಶೋಷಿತ ವರ್ಗದಿಂದ ಆತ ಬಂದವನಾದ್ದರಿಂದ, ಶೋಷಣೆ ಮಾಡುವವರ ಎಲ್ಲ ಗುಟ್ಟನ್ನು ತಿಳಿದವನು. ಧರ್ಮದ ಹೆಸರಿನಲ್ಲಿ ಇಡೀ ಸಮಾಜವನ್ನು ಕಬಳಿಸುವ ಕುಶಕ್ತಿಗಳ ಹೊರ ಪರಿಚಯಕ್ಕೆ ಈತ ಸಾಣೆಕಲ್ಲು. ಈತ ನಾಟಕದಲ್ಲಿ ಒಂದು ಕೇಂದ್ರ ಬಿಂದು. ಅದರ ಸುತ್ತ ಎಲ್ಲ ಪಾತ್ರಗಳೂ ದೃಶ್ಯಗಳೂ ಸುತ್ತುತ್ತವೆ. ಪ್ರತಿಯೊಂದು ಪಾತ್ರವೂ ಜನಗಾರನ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ತನ್ನತನವನ್ನು - ಅದು ಹೇಗೇ ಇರಲಿ, ಅದರ ನಿಜವಾದ ತನ-ಕಂಡುಕೊಂಡು ಬಯಲಾಗುತ್ತದೆ. ಎಲ್ಲ ಪಾತ್ರಗಳು ಬಂದು ಹೋದರೂ ಜಲಗಾರ ತನ್ನ ಕಾಯಕದಲ್ಲಿ ನಿರತನಾಗಿ, ಅದರ ಫಲದಲ್ಲಿ ನಿರ್ಲಿಪ್ತನಾಗಿರುವನು. ಜಲಗಾರ ಇಡೀ ಶೋಷಿತವರ್ಗ ಎಚ್ಚೆತ್ತಿರುವ ಪ್ರತಿಮೆ. ಆತ ಅಂತ್ಯದಲ್ಲಿ ವೈದಿಕರ ಬಣ್ಣವನ್ನು ಶಿವನಿಂದ ಬಯಲು ಮಾಡಿಸಿ, ಅವರ ಎಲ್ಲ ಸವಲತ್ತುಗಳನ್ನೂ ಪಡೆದುಕೊಳ್ಳುವುದು ಪ್ರಾಮಾಣಿಕತೆಯ ಜಯವಾಗುತ್ತದೆ.

ಶಿವನು ಪ್ರಾರಂಭದಲ್ಲೇ ಸಾಧಕನಂತೆ ಕಂಡುಬರುವ ಕರ್ಮದ ನಿಷ್ಠೆಯಲ್ಲಿ ವಿಚಲಿತನಾಗದ ಜಲಗಾರನಿಗೆ ಮೆಚ್ಚಿ 'ಜಲಗಾರ'ರ ರೂಪ ಧರಿಸಿ ಶಿವ ಪ್ರತ್ಯಕ್ಷನಾಗುವನು. ಜಲಗಾರನಂಥ ನಿಷ್ಠನೂ ಶಿವನನ್ನು 'ಜಲಗಾರ'ನ ರೂಪದಲ್ಲಿ ಸ್ವೀಕರಿಸಲು ಅನುಮಾನಿಸುವುದು, ವ್ಯಕ್ತಿಯ ಅಪರಿಪೂರ್ಣತೆಯನ್ನು ಹೇಳುತ್ತದೆ. ಶಿವ ತಿಳಿ ಹೇಳಿದಾಗ ಜಲಗಾರನಿಗೆ ಪೂರ್ಣತ್ವ ಬರುತ್ತದೆ. ಶಿವನು ಪಂಡಿತರು, ಶಾಸ್ತ್ರಿಗಳು ದೇವರ ಹೆಸರಿನಲ್ಲಿ ಉಂಟು ಮಾಡಿರುವ ಅಂಧತೆಯನ್ನು ಹೇಳುತ್ತಾನೆ. ನಿಜವಾದ ಶಿವನಿರುವುದು ಗುಡಿಯಲ್ಲಲ್ಲ; ಬಡಜನರೆದೆಯಲ್ಲಿ ಎಂಬುದನ್ನು ಇಡೀ ನಾಟಕ ಧ್ವನಿಸುತ್ತದೆ. ಶಿವ ಮತ್ತು ಜಲಗಾರ ಬೇರೆ ಬೇರೆ ಅಲ್ಲ ಎಂಬುದು, ಜಲಗಾರ ತಿರುಕನ ಪರ ವಹಿಸುವಿಕೆ, ತನ್ನ ಕಾಯಕದಲ್ಲಿ ನಿರತನಾಗುವಿಕೆ, ರೈತನಿಗೆ ತಿಳಿ ಹೇಳುವಿಕೆಯಲ್ಲಿಯೂ ಮತ್ತು ಕೊನೆಯಲ್ಲಿ ಶಿವನು ಹೇಳುವ "ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ! ಉಳುತಿರುವ ಒಕ್ಕಲಿಗನೆದೆಯಲ್ಲಿ ನಾನಿರುವೆ! ಎಲ್ಲಿ ಹೊಲೆಯನು ನನ್ನ ಕಾರ್ಯದಲ್ಲಿ ತೊಡಗಿಹನೊ ಅಲ್ಲಿ ನಾನವನ ಪಕ್ಕದೊಳಿರುವೆ. ಕುಂಟರನು, ಕುರುಡರನು, ದೀನರನು, ಅನಾಥರನು, ಕೈ ಹಿಡಿದು ಪೊರೆಯುತಿಹನೆಡೆಯಿರುವೆ"[7] ಎಂಬ ಮಾತಿಗೂ ಇರುವ ಸಾಮ್ಯ ಮತ್ತು ಹೊಂದಾಣಿಕೆಯನ್ನು ಗಮನಿಸಿದಾಗ ತಿಳಿದುಬರುತ್ತದೆ.

ಜೋಯಿಸರು ಶಿವನ ಮುಂದೆ ಭಕ್ತರನ್ನು ಸುಲಿಯುವ ಪಾಪಿಗಳಲ್ಲವೆ? ಪೂಜಾರಿ ಗುಡಿಯನ್ನು ಪ್ರವೇಶಿಸುತ್ತಿದ್ದಂತೆ ದೇವರು ಹೊರಗೆ ಓಡಿ ಹೋಗುತ್ತಾನೆಂದು ಮತ್ತೊಂದು ಕಡೆ ಕುವೆಂಪು ಗೇಲಿ ಮಾಡುತ್ತಾರೆ. ಅವರ ಈ ಎರಡು ಮೂದಲಿಕೆಗಳೂ ಅಪ್ಪಟ ಸತ್ಯ. ಜೋಯಿಸರಿಗೆ ಪೂಜಾರಿತನ ಹೊಟ್ಟೆ ಹೊರಕ ವೃತ್ತಿಯೇ ಹೊರತು ಭಗವತ್ಸಾಕ್ಷಾತ್ಕಾರದ ಸಾಧನೆಯಂತೂ ಅಲ್ಲ. ಶಾಸ್ತ್ರ ಪುರಾಣಗಳೆಲ್ಲ ಬೇರು ಬಿಟ್ಟಿರುವ ದೈವ ಸಂಬಂಧವಾದ ವಿಚಾರಗಳೆಲ್ಲ ಕಟ್ಟು ಕತೆಗಳೆಂಬ ಮೂದಲಿಕೆ ಶ್ರಮಜೀವಿಯ ಶುದ್ಧ ಕಾಯಕದಲ್ಲಿ ಭಗವಂತ ಪ್ರತ್ಯಕ್ಷನಾಗುತ್ತಾನೆ. "ಊರ ತೋಟಿಯು ನೀನು; ಜಗದ ತೋಟಿಯು ನಾನು"[೨] ಈ ಬಾಂಧವ್ಯದಲ್ಲಿ ಸಮನ್ವಯ ಮತ್ತು ಪರಿಪೂರ್ಣ ಭಾವ ಮುಖ್ಯವಾಗುತ್ತದೆ. ನಿಜವಾದ ಒಳಗಿನ ಶಿವನನ್ನು ಕಂಡುಕೊಂಡು ತಾನೂ ಶಿವನೇ ಆಗುತ್ತಾನೆ, ಜಲಗಾರ. ಕಾಯಕವೇ ದೇವರೆಂಬ ಸತ್ಯ ಬೆಳಕಿಗೆ ಬರುತ್ತದೆ. ನಾಟಕದಲ್ಲಿ ತತ್ತ್ವ ಕೊನೆಯಲ್ಲಿ ತೀರಾ ಸರಳೀಕೃತಗೊಂಡಿದೆಯೆನಿಸಿದರೂ ಸಾಮಾನ್ಯ ವರ್ಗದವನೊಬ್ಬನು ಕೂಡ, ಶಿವನನ್ನು ಸೇರಬಲ್ಲ; ಶಿವನಾಗಬಲ್ಲ ಎಂಬ ನಾಟಕಕಾರರ ನಂಬಿಕೆಗನುಗುಣವಾಗಿದೆ.

ದಲಿತೋದ್ಧಾರದ ಕನಸು ಕಂಡ ಬಸವಣ್ಣ, ಕುವೆಂಪು ಇಬ್ಬರೂ ಪುರೋಹಿತಶಾಹಿ ಹಾಗೂ ರಾಜಶಾಹಿಯಂತಹ ಮೇಲ್ವರ್ಗದ ದರ್ಪ ದೌಲತ್ತುಗಳನ್ನು ಧೂಕರಿಸಿದವರು. ಸಮಾನತೆಯ ತಳಹದಿಯ ಮೇಲೆ ಹೊಸ ಸಮಾಜ ಸೃಷ್ಟಿಸುವ ಕನಸು ಹೊತ್ತವರು ವಚನಕಾರರು. ಅದೇ ಕನಸು ಕುವೆಂಪು ಅವರ ಕಣ್ಣುಗಳವರೆಗೂ ಹರಿದಿತ್ತು. ಸಮಾಜದ ಅನೇಕ ಅನಿಷ್ಟ ಪದ್ಧತಿಗಳಿಗೆ ನಾಂದಿ ಹಾಡಿ, ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಗೆ ಬುನಾದಿ ಹಾಕಿದ ಪುರೋಹಿತಶಾಹಿ ವಿರುದ್ಧ ತಮ್ಮ ತಮ್ಮ ಕಾಲಘಟ್ಟದಲ್ಲೇ ಕತ್ತಿ ಹಿರಿದರು. ಆಧುನಿಕ ಯುಗದಲ್ಲಿ, ಶೂದ್ರ ಸಮಾಜದಲ್ಲಿ ಹುಟ್ಟಿದ ಕುವೆಂಪು ಪುರೋಹಿತಶಾಹಿ ವಿರುದ್ಧ ಹೋರಾಟಕ್ಕಿಳಿಯುವುದಕ್ಕೆ ಅವರು ತಮ್ಮನ್ನು ತಾವು ಅಥವಾ ಪ್ರತಿಯೊಬ್ಬರನ್ನೂ ಜಾತಿಮತದ ಎಲ್ಲೆ ಮೀರಿದ 'ವಿಶ್ವಮಾನವ'ರೆಂದು ಪರಿಗಣಿಸಿದ್ದು ಪ್ರಗತಿಗಾಮಿತನವನ್ನು ತೋರಿದರೆ, ಸ್ವತಃ ಪುರೋಹಿತ ಸಮಾಜದಲ್ಲಿ ಹುಟ್ಟಿ, ವೇದಶಾಸ್ತ್ರಂಗಳನ್ನೆಲ್ಲ ಅಧ್ಯಯನ ಮಾಡಿ ನಂತರ ಅದೇ ವ್ಯವಸ್ಥೆಯ ವಿರುದ್ಧ, ಅದೂ ಅಪಕ್ವ ಕಾಲದಲ್ಲಿ ಬಸವಣ್ಣ ಸೆಟೆದು ನಿಂತದ್ದು ಅಧ್ಯಯನ ಯೋಗ್ಯ.

"ಆದಿಯಾಗಲಿ, ವೇದದಲಾಗಲಿ, ಶಾಸ್ತ್ರದಲಾಗಲಿ

ಸಮಯದಲಾಗಲಿ

ಎನ್ನವರೆನ್ನೆನು ಎನ್ನವರೆನ್ನೆನು"[೩]

ಎಂದು ಹೇಳಿ ಯಜ್ಞನಿರತ ವೈದಿಕರೊಂದಿಗೆ ಜನ್ಮ ಸಂಬಂಧವಿಲ್ಲ ಎಂದರು.

"ಅಣ್ಣ, ತಮ್ಮ, ಹೆತ್ತಪ್ಪ ಗೋತ್ರವಾದಡೇನು

ಲಿಂಗ ಸಾಹಿತ್ಯವಿಲ್ಲದವರ ತನ್ನವರೆನ್ನೆನಯ್ಯಾ"[೪]

ಎಂದು ರಕ್ತ ಸಂಬಂಧಗಳನ್ನು ಕಡಿದುಕೊಂಡದ್ದು ಸುಲಭದ ಮಾತಲ್ಲ. ಉಚ್ಚ ವರ್ಗದ ಉತ್ಕೃಷ್ಟತೆಗಳನ್ನೆಲ್ಲ

ಬಿಟ್ಟು ನಿಮ್ಮ ವರ್ಗದವರ ಮನೆ ಬಾಗಿಲ ಹೊಲಸನ್ನು ಗುಡಿಸಹೊರಟದ್ದು ಬಸವಣ್ಣನನ್ನು ಅಸಾಧಾರಣ ವ್ಯಕ್ತಿಯಾಗಿ ಶಕ್ತಿಯಾಗಿ ರೂಪಿಸಿತು.

ಪುರೋಹಿತಶಾಹಿಯ ದಮನವೇ ದಲಿತೋದ್ಧಾರ, ಸಮಾನತಾವಾದ, ಜೀವಸಹಜ ಸ್ವಾತಂತ್ರ್ಯ, ಸೋದರತ್ವದ ಪ್ರತಿಷ್ಠಾಪನೆ, ಕಡೆಗೆ ಮನುಜ ಮತದ ಪರಿಕಲ್ಪನೆಗೆ ಮಾರ್ಗವಾಗುವುದೆನ್ನುವುದನ್ನು ಬಸವ, ಕುವೆಂಪು ಅವರಂತೆ ಸಮಸ್ತ ವಚನಕಾರರೂ ಸಮರ್ಥಿಸಿಕೊಂಡಿದ್ದಾರೆ.

ಕುವೆಂಪು ಶೂದ್ರಸಮುದಾಯ ಹಾಗೂ ತಳ ಸಮುದಾಯಗಳು ಜಾಗೃತರಾಗಲು ತೀವ್ರವಾಗಿ ಎಚ್ಚರಿಸುತ್ತಾರೆ; ಮತ್ತು ಅವುಗಳ ಜೊತೆ ಅನನ್ಯತೆಯನ್ನು, ಸಂವಾದವನ್ನು ಸ್ಥಾಪಿಸುತ್ತಾರೆ. ಭಾರತೀಯ ಸನಾತನ ಧರ್ಮದ ಬಗ್ಗೆ ಕಟುವಾಗಿ ವಿಮರ್ಶೆ ಮಾಡಿದ್ದಾರೆ; ಹಾಗೆಯೇ ಉಪನಿಷತ್ ದರ್ಶನಗಳನ್ನು ಅವರು ತೀವ್ರವಾಗಿ ಆರಾಧಿಸಿದ್ದಾರೆ.

ಕುವಂಪು ಪುರೋಹಿತಶಾಹಿಯನ್ನು ಒಪ್ಪುವುದಿಲ್ಲ. ಪುರೋಹಿತರನ್ನು ಕುರಿತು ಅವರು ಅರಿಯದ ಜನರನ್ನು ವಂಚಿಸುತ್ತಾರೆ, ಮುಗ್ಧರ ದಾರಿ ತಪ್ಪಿಸುತ್ತಾರೆ ಎನ್ನುತ್ತಾರೆ. ಅದನ್ನು ಖಂಡಿಸುತ್ತಾರೆ.

"ಹಳೆಮತದ ಕೊಳೆಯೆಲ್ಲ

ಹೊಸ ಮತಿಯ ಹೊಳೆಯಲ್ಲಿ ಕೊಚ್ಚಿಹೋಗಲಿ"

"ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?

ಎದೆಯ ದನಿಗೂ ಮಿಗಿಲು ಶಾಸ್ತ್ರ ಇಹುದೇನು?"

ಎಂದು ಪ್ರಶ್ನಿಸುತ್ತಾರೆ. ನಮ್ಮ ನಮ್ಮ ದುಡಿಮೆಗಳಲ್ಲಿ ದೇವರು ಇರುತ್ತಾನೆ ಎಂದು ಹೇಳುವ ಮೂಲಕ ಕರ್ಮಯೋಗದಲ್ಲಿ ಕುವೆಂಪು ತಮ್ಮ ಅಚಲ ನಂಬಿಕೆಯನ್ನು ಪ್ರಕಟಿಸುತ್ತಾರೆ.

"ನನ್ನ ಶಿವನೀ ಮಣ್ಣಿನಲ್ಲಿಹನು

ನನ್ನ ಶಿವ ಕೊಳೆತ ಕಸದೊಳಗಿಹನು

ಕರ್ಪೂರದೊಳಿಲ್ಲ"[7] ಎಂದು ಹೇಳುತ್ತಾರೆ.

'ಕಾಯಕ'ವೇ ಮುಖ್ಯ ಎಂದು ಹೇಳುವಾಗ 'ಶೂದ್ರ' ತಪಸ್ಸು ಮಾಡಬಾರದು, ಅದು ಮೇಲು ವರ್ಗದವರಿಗೆ ಸೀಮಿತವಾದುದು ಎನ್ನುವುದನ್ನು ಶ್ರೀ ಕುವೆಂಪುರವರು ಶ್ರೀರಾಮನ ಪಾತ್ರದ ಮೂಲಕ ಯಾರು ಏನೇ ಮಾಡಿದರೂ ಅದನ್ನು (ವಿದ್ಯೆ, ತಪಸ್ಸು ಇತ್ಯಾದಿ)ಸಮಾಜಕ್ಕೆ ಅವರಿಗೆ ಒಳ್ಳೆಯದಾಗುವ ದೃಷ್ಟಿಯಿಂದ ಮಾಡಿದ ಎಲ್ಲಾ ಕೆಲಸಗಳು ಮುಖ್ಯವಾದವು. ಅವುಗಳನ್ನು ಗೌರವಿಸಬೇಕು ಎಂದು ಹೇಳುತ್ತಾ ಶಂಬೂಕನು ಮಾಡುವ ತಪಸ್ಸಿನ ಚಿತ್ರಣ ಮತ್ತು ಬ್ರಾಹ್ಮಣನ ಪರಿವರ್ತನಾ ರೀತಿಯನ್ನು ಇಲ್ಲಿ ನೋಡಬಹುದು.

ಶ್ರೀರಾಮ ಯೋಚಿಸುವ ಕ್ರಮ-ಸಂಪೂರ್ಣ ಕುವೆಂಪು ಸೃಷ್ಟಿ. ಶಂಬೂಕ ಪ್ರಸಂಗಕ್ಕೆ ಹೊಸ ರೂಪವನ್ನು ಕುವೆಂಪು ಇಲ್ಲಿ ನೀಡುತ್ತಾರೆ.

ಶ್ರೀ ರಾಮ: "ಈ ವರ್ಣಗರ್ವಾಂಧಂಗೆ

ಈ ಶಾಸ್ತ್ರಮೂರ್ಖಂಗೆಂತೊ ಬುದ್ಧಿಗಲಿಪೆನ್

ಶಂಬೂಕನ್ ಮಹಾಯೋಗಿ.

ತಪಸ್ವಿಯ ತಿರಸ್ಕೃತಿಗೆ ಮುನಿದ ಧರ್ಮಂ

ತಂದುದೀತನ ಮುದ್ದುಕಂದಂಗೆ

ನನ್ನ ರಾಜ್ಯದೊಳು ಅಕಾಲ ಮೃತ್ಯುವಂ

ತನ್ನ ತಪ್ಪನೆ ತಿಳಿಯಲಾರದೀತನ್,

ಮರೆಯಿಂದಮೆನ್ನನ್

ಬಹಿರಂಗಮಾ ಶಂಬೂಕಯೋಗಿಯನ್

ನಿಂದಿಸುತ್ತಿರ್ಪನ್."[೬]

'ಶೂದ್ರನ್ ತಪಂಗೆಯ್ವೊಂದು ಅಧರ್ಮಕ್ಕೆ' ತನ್ನ ಮಗ ಬಲಿಯಾದನೆಂಬುದು ಮಗನ ಮರಣಕ್ಕೆ ಬ್ರಾಹ್ಮಣ ನೀಡುವ ಕಾರಣವಾದರೆ, 'ತಪಸ್ವಿ'ಯಾದ ಶಂಬೂಕನನ್ನು ತಿರಸ್ಕರಿಸಿದ್ದರಿಂದಾಗಿ ಧರ್ಮ ಮುನಿದು, ಬ್ರಾಹ್ಮಣನ ಮಗ ಮರಣ ಹೊಂದಿದ್ದಾನೆ ಎಂದು ಶ್ರೀರಾಮ ತರ್ಕಿಸುತ್ತಾನೆ. ಘಟನೆ ಒಂದೇ -ಅರ್ಥೈಸುವ ಕ್ರಮಗಳು ಬೇರೆ. ಆದರೆ ಶ್ರೀರಾಮನ ತರ್ಕ ವರ್ಣಾಶ್ರಮ ವ್ಯವಸ್ಥೆಯಿಂದಾಗಿಯೇ ಉಂಟಾಗಿರುವ ಸಾಮಾಜಿಕ ಅಸಮಾನತೆಗೆ ತೀಕ್ಷ್ಣ ಉತ್ತರವಾಗಿದೆ. ಮಾತ್ರವಲ್ಲ, ಸಾಧನೆಯನ್ನು, ಅದು ಯಾರೇ ಸಾಧಿಸಿರಲಿ, ಗೌರವಿಸಬೇಕೆಂಬ ಪ್ರಾಥಮಿಕ ಸತ್ಯವನ್ನೂ ಸಾರುತ್ತದೆ.

ಶ್ರೀರಾಮ ತಪ್ಪು ಮಾಡಿದವರನ್ನು ಶಿಕ್ಷಿಸಲು, ಅಧರ್ಮವನ್ನು ಅಳಿಸಿ ಧರ್ಮವನ್ನು ರಕ್ಷಿಸಲು ಬ್ರಾಹ್ಮಣನ ಜೊತೆ ಶಂಬೂಕನ ಆಶ್ರಮಕ್ಕೆ ಹೊರಡುತ್ತಾನೆ. ಬ್ರಾಹ್ಮಣ ಶ್ರೀರಾಮನನ್ನು ಶಂಬೂಕಾಶ್ರಮಕ್ಕೆ ಕರೆತರುತ್ತಾನೆ. ಅಲ್ಲಿ ತನ್ನ ಮಗ ಸತ್ತು ಬಿದ್ದಿರುವುದನ್ನು ನೋಡಿದ ತಕ್ಷಣ ಆತನ ದುಃಖ ಮರುಕಳಿಸುತ್ತದೆ. ಶವದ ಬಳಿ ರೋದಿಸುತ್ತ ಕುಸಿದು ಬೀಳುತ್ತಾನೆ. ಅದನ್ನು ಕಂಡ ಶ್ರೀರಾಮನ ಮನಸ್ಸು ಪಾರ್ವನ ಆ ಸ್ಥಿತಿಗೆ ಕರಗುತ್ತದೆ. ಆತನಿಗನ್ನಿಸುತ್ತದೆ-

"ಸ್ಥಿತ ಪ್ರಜ್ಞಂಗುಂ ಅಧೈರ್ಯಮನೊಡರ್ಚುವುದೀ

ಪುತ್ರಶೋಕದ ದೃಶ್ಯಮೇಗಳುಂ

ನನ್ನಗಲ್ಕೆಗಂದು ಎದೆಬಿರಿಯಲ್ ಪಳಯಿಸಿದಾ

ನನ್ನಯ್ಯನಂ ಬಗೆಗೆ ತರ್ಪನೀ ಮುದುಕ ತಂದೆ!"[೭]

ಮಹಾಕವಿ ಪ್ರತಿಭೆಗೆ ಗೋಚರಿಸುವಂಥ ಸತ್ಯವಿದು. ಮಹತ್ವದ್ದನ್ನು ಯಾರೇ ಸಾಧಿಸಲಿ ಅದನ್ನು ಗೌರವಿಸಬೇಕೆಂಬ ನಿಲುವು ಹೇಗೆ ಸರಿಯೋ, ಹಾಗೆಯೇ ದುಃಖ ಯಾರದೇ ಆಗಿರಲಿ, ಅದಕ್ಕೆ ಕರಗುವುದೂ ಧರ್ಮವೇ. ಶ್ರೀರಾಮ ಶಂಭೂಕನ ಸಾಧನೆಯನ್ನು ಹೇಗೆ ಗೌರವಿಸಿದ್ದಾನೆಯೋ ಹಾಗೆಯೇ ಬ್ರಾಹ್ಮಣನ ದುಃಖಕ್ಕೂ ಕರಗುತ್ತಿದ್ದಾನೆ. ಆದರೆ ಎರಡೂ ಸಂದರ್ಭಗಳಲ್ಲಿ ವಿವೇಚನೆ ಕಳೆದುಕೊಳ್ಳದಿರುವುದೇ ಪ್ರಾಜ್ಞನ ಲಕ್ಷಣ. ರಾಮ ಬ್ರಾಹ್ಮಣನನ್ನು ಈ ರೀತಿ ಸಮಾಧಾನಪಡಿಸುತ್ತಾನೆ

ರೋದಿಸದಿರ್ ಅಬೋಧನೊಲ್, ವೇದವೇತ್ತ

ನಡೆದೊಂದಧರ್ಮಮಂ ಪರಿಹರಿಸಲೊಡಂ

ಅಮೃತನಕ್ಕುಂ ನಿನ್ನೀ ಚಿರಂಜೀವಿ!

ಶ್ರೀರಾಮನು ಕೊಡುವ ಧರ್ಮದ ವ್ಯಾಖ್ಯಾನವು ಸಮಾಜದಲ್ಲಿನ ಎಲ್ಲರಿಗೂ ಅನ್ವಯವಾಗುವಂಥದ್ದು. ಯಾವ ಧರ್ಮ, ಜಾತಿಯವರೇ ಆಗಿರಲಿ ಎಲ್ಲರಿಗೂ ಕಾನೂನು ಒಂದೇ ಇರಬೇಕು ಎನ್ನುವುದನ್ನು ಶ್ರೀರಾಮ, ಬ್ರಾಹ್ಮಣರ ಸಂವಾದದಲ್ಲಿ ತಿಳಿಯಬಹುದು.

ಶ್ರೀರಾಮ : ಭೂಸುರೋತ್ತಮ,

ಕ್ಷತ್ರಿಯನೊಂದು ಸಂದೇಹಮಂ ನಿವಾರಿಸಿ

ಕೃಪೆಗೆಯ್ಯವೇಳ್ಕುಮ್.

ಬ್ರಾಹ್ಮಣ : ನನ್ನಲ್ಪಬುದ್ಧಿಗೆ ತೋರ್ಪುದಂ ಪೇಳ್ವೆನ್

ಶ್ರೀರಾಮ : ಪೂಜ್ಯರ್ ಉದಾತ್ತ ಬುದ್ಧಿಯಿನ್ ಒರೆಯವೇಳ್ಕುಮ್

ಬ್ರಾಹ್ಮಣ : ಯಥಾ ಸಾಮರ್ಥ್ಯಮನ್, ರಾಜೇಂದ್ರ

ಶ್ರೀರಾಮ : ತಪಂ ಪೂಜ್ಯಕರ್ಮಮಲ್ತೆ, ದ್ವಿಜೇಂದ್ರ?

ಬ್ರಾಹ್ಮಣ : ತಪಕ್ಕೆಣೆಯುಂಟೆ, ರಾಘವೇಂದ್ರ?

ಶ್ರೀರಾಮ : ತಪಂಗೆಯ್ವನುಂ ಪೂಜ್ಯ ನಲ್ತೆ, ವಿಬುಧವರ್ಯ?

ಬ್ರಾಹ್ಮಣ : ಧರ್ಮ ಮೂರ್ತಿ

ಶ್ರೀರಾಮ : ಪೂಜ್ಯ ಹನನಂ ಪಾಪಕರ ಮಲ್ತೆ, ಸತ್ತ್ವಶೀಲ?

ಬ್ರಾಹ್ಮಣ : ನಿಸ್ಸಂಶಯಂ, ವಾಲಿ ಸಂಹಾರಿ.

ಶ್ರೀರಾಮ: ಅಂತೆವೋಲ್

ಈ ತಪಸ್ವಿಯಂ ಕೊಲ್ವುದುಂ ಪಾಪಮಾಗದೆ?

ಬ್ರಾಹ್ಮಣ : ವಸಿಷ್ಠ ಶಿಷ್ಯ,

ತರ್ಕಕೆ ಮಿಗಿಲ್ ಶ್ರುತಿವಾಕ್ಯಮೈಸ!

ತಪಕ್ಕನಧಿಕಾರಿ ಶೂದ್ರನ್

ಎಂಬುದದು ಶಾಸ್ತ್ರ ಪ್ರಸಿದ್ಧಂ

ಕೃತಯುಗದೊಳ್ ತಪಕ್ಕರ್ಹರ್ ಬ್ರಾಹ್ಮಣರ್ ಮಾತ್ರಂ.

ತ್ರೇತೆಯೊಳ್ ಕ್ಷತ್ರಿಯರುಮ್ ಅರ್ಹರ್.

ವೈಶ್ಯರುಂ ತಪಂಗೆಯ್ವರಾ ದ್ವಾಪರದೊಳ್.

ಕಲಿಕಾಲಂ ಬರಲ್ ಶೂದ್ರನುಂ ತಪಸ್ವಿ!

ಅದು ಕಾರಣದಿಂ

ಕೃತಯುಗದೊಳ್ ನಾಲ್ಕುಂ ಕಾಲೊಳ್ ನಿಂತ ಧರ್ಮಂ

ತ್ರೇತೆಯೊಳ್ ಮೂಗಾಲಿಯಕ್ಕುಮ್;

ದ್ವಾಪರದೊಳ್ ದ್ವಿಪಾದಿ;

ಕಲಿಯುಗದೊಳ್ ಒಂಟಿಗಾಲೊಳ್ ಕುಂಟಿ

ತತ್ತರಿಸಿ ಸತ್ತುರುಳ್ವುದಾ ವಿಲಯದತ್ತಣ್ಗೆ.

ಕೇಳ್, ವರ್ಣಾಶ್ರಮ ಧರ್ಮಪಾಲಕ,

ಪಾಲ್ ಪೂಜ್ಯಮಾದೊಡಂ,

ಜೀವಾತುವಾದೊಡಂ,

ತ್ಯಾಜ್ಯಮಾ ನಾಯ ಪಾಲ್

ನಾಯ ಪಾಲ್ಗಣೆ ಶೂದ್ರನ ತಪಂ!

ಎಂದು ಬ್ರಾಹ್ಮಣ ಶೃತಿವಾಕ್ಯ ಎಲ್ಲಕ್ಕಿಂತ ಮಿಗಿಲು. ಅಲ್ಲದೆ ಮನುಧರ್ಮ ಶಾಸ್ತ್ರದಲ್ಲಿ ಶೂದ್ರ ತಪಸ್ಸು ಮಾಡಲು ಅನರ್ಹ ಎನ್ನುವುದನ್ನು ಕಾಣಬಹುದು ಎಂದಾಗ. ಕುವೆಂಪು ಇದು ಯಾವ ಶಾಸ್ತ್ರ ಎಂದು ಹೇಳುತ್ತಾ

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?

ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?

ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯ ದನಿಯೆ ಋಷಿ! ಮನು ನಿನಗೆ ನೀನು!

ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟು ಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರಸಮ್ಮತವದೇನು?

ಅಂತು ಮನು ಹೇಳಿರನಾರನಯ್ಯಯ್ಯೋ!
ಹೇಳಿದ್ದರವನನೂ ಶಾಸ್ತ್ರದೊಳೆ ಸುತ್ತಿ
ಸ್ವರ್ಗ ಹೋಗಲಿ, ಮತ್ತೆ ನರಕ ಬಂದರು ಬರಲಿ,
ಎದೆಯ ಧೈರ್ಯವ ಮಾಡಿ ಬಿಸುಡಾಚೆಗೆತ್ತಿ

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ
ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ
ನಮ್ಮ ಹೃದಯವೆ ನಮಗೆ ಶ್ರೀ ಧರ್ಮಸೂತ್ರ!

ಕುವೆಂಪು ಅವರಿಗೆ ಈ ವೇದ-ಶಾಸ್ತ್ರಗಳ ಬಗ್ಗೆ ಅಪಾರ ಸಿಟ್ಟಿತ್ತು, ಖಚಿತ ನಿಲುವಿತ್ತು. ಈ ಶಾಸ್ತ್ರಗಳನ್ನು ನಿರಾಕರಿಸದೆ ಹೊಸ ಬದುಕು ಸಾಧ್ಯವಿಲ್ಲ ಎಂದು ಅವರು ದೃಢವಾಗಿ ನಂಬಿದ್ದರು. ಅವರ ಈ ಚಿಂತನೆ "ಶೂದ್ರತಪಸ್ವಿ"ಯಲ್ಲಿ ಎಷ್ಟೊಂದು ಶಕ್ತಿಶಾಲಿಯಾ ಮೂಡಿಬಂದಿದೆ ಎಂಬುದನ್ನು ಕಾಣಬಹುದು.,

ರೂಢಿಯ 'ಪ್ರತಿಮೆ'ಯನ್ನು ಅವರು ಭಗ್ನಗೊಳಿಸುವುದಿಲ್ಲ, ಬದಲಿಗೆ ಅದನ್ನು ಉಜ್ವಲಗೊಳಿಸುತ್ತಾರೆ. ಆದರೆ ತಮ್ಮ ಅದ್ಭುತ ಪ್ರತಿಭಾಕೌಶಲದಿಂದ ಅದನ್ನು ಪ್ರಶ್ನಿಸುತ್ತಾರೆ, ಪ್ರತಿಭಟಿಸುತ್ತಾರೆ. ಸಂವೇದನಾಶೀಲ ಮನಸ್ಸು ಚಿಂತಿಸುವಂತೆ ಮಾಡುತ್ತಾರೆ. ಶೂದ್ರತಪಸ್ವಿಯಲ್ಲಿದ್ದ 'ಅಸಹನೆ' ಇಲ್ಲಿ ಪಕ್ವ ಮನಸ್ಸಿನ 'ಚಿಂತನೆ'ಯಾಗಿ ರೂಪುಗೊಂಡಿದೆ. ಸಂಪ್ರದಾಯಬದ್ಧ ಸಮಾಜ ಸೃಜನಶೀಲತೆಯನ್ನು ಹತ್ತಿಕ್ಕುವ ಸ್ವರೂಪವನ್ನು 'ಬೆರಳ್‌ಗೆ ಕೊರಳ್' ನಾಟಕ ಅದ್ಭುತವಾಗಿ ಅನಾವರಣಗೊಳಿಸುತ್ತದೆ. ಮಾತ್ರವಲ್ಲ, ಅದನ್ನು ಎದುರಿಸುತ್ತದೆ. ಬೆರಳನ್ನು ಬೇಡುವ ಪ್ರತಿಷ್ಠಿತ ಶಕ್ತಿಗೆ ದಮನಕ್ಕೊಳಗಾದ ಸೃಜನಶೀಲ ಪ್ರತಿಭೆ ಸಕಾರಣವಾಗಿಯೇ 'ಅನ್ಯಾಯ'ವನ್ನು ಸಹಿಸಿಕೊಂಡಿರಬೇಕೆ? ಪ್ರತಿಭಟಿಸಬೇಡವೇ? ಕುವೆಂಪು ಅದಕ್ಕೆಂದೇ ತಾಯಿಯ ಪಾತ್ರ ಸೃಷ್ಟಿಸಿದ್ದಾರೆ. ತಾಯಿಯ ಪಾತ್ರದ ಮೂಲಕ

ಮೇಲುವರ್ಗವರ ವಿರುದ್ಧದ ತನ್ನ ಪ್ರತಿಭಟನೆಯನ್ನು ದಮನಕ್ಕೊಳಗಾದ ಜನಾಂಗ ಅತ್ಯಂತ ಪರಿಣಾಮಕಾರಿಯಾಗಿವ್ಯಕ್ತಪಡಿಸುವುದನ್ನು ಕಾಣಬಹುದು.

"ಆರ್‍ಗೊ ಬಲಿ ನನ್ನ ಕಂದನ ಬೆರಳ್

ಬಲಿಯಕ್ಕೆ ಆ ಪಾಪಿಯ ಕೊರಳ್!"[೮]

ಎಂದು ಶಪಿಸುತ್ತಾಳೆ.

'ಜಲಗಾರ' ನಾಟಕದಲ್ಲಿ ದೀನದಲಿತರಿಗೆ ಭಗವಂತ ಆಶ್ರಯ ಎಂಬ ನಿಲುವು ಇದ್ದರೆ, 'ಶೂದ್ರತಪಸ್ವಿ'ಯಲ್ಲಿ ಪ್ರತಿಭೆಯನ್ನು ಗೌರವಿಸದ ಮೇಲುವರ್ಗ ಶ್ರೀರಾಮನಿಂದ ಶಿಕ್ಷೆಗೆ ಗುರಿಯಾಗುತ್ತದೆ. ಆದರೆ ಬೆರಳ್‌ಗೆ ಕೊರಳ್ ನಾಟಕದಲ್ಲಿ ಪ್ರತಿಭಟನೆ ನೋವಿಗೊಳಗಾದ ಜೀವದಿಂದಲೇ ಪ್ರಕಟವಾಗುತ್ತದೆ. ನೋವು ಪ್ರತಿಭಟನೆಯ ರೂಪ ಪಡೆಯುವ ಈ ನಿಲುವು ಕ್ರಾಂತಿಕಾರಕವಾದುದು.

ಕುವೆಂಪುರವರ ಜಲಗಾರ, ಶೂದ್ರ ತಪಸ್ವಿ ಹಾಗೂ ಬೆರಳ್‌ಗೆ ಕೊರಳ್ ನಾಟಕಗಳು ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಯ ವರ್ಗ/ವರ್ಣ ಭೇದ ನೀತಿಯನ್ನು ಸೃಜನಶೀಲ ನೆಲೆಯಲ್ಲಿ ವಿರೋಧಿಸಿರುವುದನ್ನು ಕಾಣಬಹುದಾಗಿದೆ.

ಅರಸೊತ್ತಿಗೆ ಪೌರೋಹಿತ್ಯಶಾಹಿಯ ದುಷ್ಟ ಮೈತ್ರಿ ಕೊನೆಗಾಣಬೇಕು ಎನ್ನುತ್ತಾ ಕುವೆಂಪು

'ಕಡೆಯ ಪುರೋಹಿತನ ಕರುಳು

ಕಡೆಯ ದೊರೆಯ ಕೊರಳಿಗುರುಳು

ಬಿಗಿದ ಹೊರತು ಬರಿಯ ನೆರಳು

ಸ್ವಾತಂತ್ರ್ಯದ ಸ್ವರ್ಗವು' ಎಂದು ಹೇಳುತ್ತಾರೆ.

ಇದು ಪುರೋಹಿತ ಪೂಜಾರಿಗಳ ಕಪಟ ಗುಟ್ಟು! ಅದನ್ನು ಕುವೆಂಪು ಸರಳವಾದ ತಿಳಿಯಾದ ಮಾತಿನಲ್ಲಿ ವ್ಯಕ್ತಪಡಿಸಿದ್ದಾರೆ. ಶಿವನಗುಡಿ, ಪೂಜೆ, ತೀರ್ಥಪ್ರಸಾದ ಇವೆಲ್ಲ ಸುಲಿಗೆಯ ಸಾಧನೋಪಾಯಗಳು! ಗುಡಿಯೊಳಗೆ ದೇವರಿಲ್ಲ ಎಂಬುದನ್ನು ಇನ್ನೊಂದೆಡೆ ವ್ಯಂಗ್ಯವಾಡಿದ್ದಾರೆ. ಪೂಜಾರಿ ಪ್ರವೇಶಿಸಿದ ಕೂಡಲೆ ಅಲ್ಲಿದ್ದ ದೇವರು ಎದ್ದು ಓಡಿಹೋದನಂತೆ! ಇಂದಿನ ಜಗಜ್ಜೀವನದಲ್ಲಿ ಮತ ಮತ್ತು ರಾಜಕೀಯಗಳಿಗೆ ಮೀಸಲಾಗಿರುವ ಸ್ಥಾನವನ್ನು ಅಧ್ಯಾತ್ಮ ಮತ್ತು ವಿಜ್ಞಾನಗಳು ಆಕ್ರಮಿಸಿಕೊಳ್ಳದಿದ್ದರೆ ಮುಂದಿನ ಮಾನವನ ಬದುಕು ಶಾಂತಿ ನೆಮ್ಮದಿಗಳನ್ನು ಕಾಣಲಾರದು ಎಂದು ಸಂತವರೇಣ್ಯ ವಿನೋಬಾಜಿ ಹೇಳಿದ್ದಾರೆ.

'ಏಕಲವ್ಯ' ನಾಟಕದಲ್ಲಿ 'ವರ್ಗ' ವ್ಯವಸ್ಥೆಯನ್ನು ಕೇಂದ್ರವಾಗಿ ಸೆರೆಹಿಡಿಯುತ್ತಾರೆ. ಇಲ್ಲಿ ಆರ್ಥಿಕ ಅಸಮಾನತೆ ತಂದೊಡ್ಡುವ ವಿಪತ್ತನ್ನು, ಸಾಮಾಜಿಕ ಬೆಳವಣಿಗೆಯಲ್ಲಿ ಅದರ ಉತ್ಪಾತವನ್ನು ತೀವ್ರವಾಗಿ ಅನ್ವೇಷಿಸುತ್ತಾರೆ. ಶ್ರೀಮಂತ ವರ್ಗದವರಿಗೇ ಮೀಸಲಾದ ವಿದ್ಯಾಭ್ಯಾಸವನ್ನು ಯಶಸ್ವಿಯಾಗಿ ಚಿತ್ರಿಸುವುದರ

ಮೂಲಕ ಗಂಭೀರವಾದ ಸಾಮಾಜಿಕ ಸಮಸ್ಯೆಯ ಹರವಿನಲ್ಲಿ ನಿರ್ಗತಿಕ ಏಕಲವ್ಯ, ಪಟ್ಟಭದ್ರ ಹಿತಾಸಕ್ತಿಗಳಾದ ಬಂಡವಾಳಶಾಹಿ ರಾಜಮನೆತನದ ವೈಭವದ ಅರ್ಜುನ, ದುರ್ಯೋಧನಾದಿಗಳು, ಮಡಿವಂತಿಕೆಯ ನಡುವೆ ಸೀಳಿಕೊಂಡ ದ್ರೋಣ ಇವರನ್ನು ಚಿತ್ರಿಸುತ್ತಾರೆ.

ವಿದ್ಯೆ ಕೆಲವರ ಸೊತ್ತಾಗುವುದನ್ನು ದಿಟ್ಟತನದಿಂದ ಪ್ರಶ್ನಿಸಿ ಅದನ್ನು ಸಾಮಾನ್ಯನವರೆಗೆ ಹರಿಸಲು ಬಳಸುವ ವಿಧಾನ, ಬೆಳೆಸುವ ಪಾತ್ರ ನಾಟಕದ ದೃಷ್ಟಿಯಿಂದ ಮಹತ್ವದ್ದಾಗುವಂತೆ ಸಾಮಾಜಿಕ ಪ್ರಜ್ಞೆಯ ದೃಷ್ಟಿಯಿಂದಲೂ ಮಹತ್ವದ್ದಾಗುತ್ತದೆ. ಕಡು ಬಡವ ವಿದ್ಯಾಭ್ಯಾಸ ಮಾಡುವುದು ಜಾತಿ ಮತ್ತು ಆರ್ಥಿಕ ದೃಷ್ಟಿಯಿಂದ ಅಸಾಧ್ಯವಾದ ಅಂದಿನ ವಾತಾವರಣವನ್ನು ಗಟ್ಟಿ ಮಾಡುತ್ತ ಹೋಗುವುದರಿಂದ ನಾಟಕದ ಚಾಲನಶಕ್ತಿ ಸಾಮಾಜಿಕ ಚಾಲನಶಕ್ತಿಯೂ ಆಗುತ್ತದೆ.

ಮುಖ್ಯವಾದ ವರ್ಗಸಮಸ್ಯೆಯನ್ನು ಮರೆತು ಕೇವಲ ತತ್ವತ್ರಯಗಳಿಂದಾಗಿ ಈ ನಾಟಕ ಉತ್ತಮ ಎಂದು ಹೇಳುವುದು ನಾಟಕದ ಮುಖ್ಯ ತಳಹದಿಯಾದ ಸಾಮಾಜಿಕ ಸಮಸ್ಯೆಯನ್ನು ಮರೆತಂತಾಗುತ್ತದೆ. ಇಲ್ಲಿಯ ದ್ರೋಣ ವರ್ಣ ವ್ಯವಸ್ಥೆಗೆ ಅಂಟಿಕೊಂಡು ಅನಿವಾರ್ಯ ಕಾರಣಗಳಿಗಾಗಿ ಬದಲಾಗುತ್ತಿರುವ ಗುರುವಾಗಿ ಕಂಡರೆ ಅರ್ಜುನ ಪರಿವರ್ತಿತನಾಗದ ವರ್ಗ ವ್ಯವಸ್ಥೆಯ ಶ್ರೀಮಂತ ವ್ಯಕ್ತಿಯಾಗಿ ಕಾಣುತ್ತಾನೆ. ಇವರಿಬ್ಬರ ನಡುವೆ ಬಡತನದಲ್ಲಿ, ವಿದ್ಯೆಗಾಗಿ ಹಂಬಲಿಸಿ ತಾಕಲಾಟದಲ್ಲಿ ಬದುಕಿ ಈ ಎರಡೂ ಬಿರುಕನ್ನೂ ಮುಚ್ಚಬಲ್ಲ ಶಕ್ತಿಯಾಗಿ, ಸಾಮಾಜಿಕ ನ್ಯೂನತೆಯನ್ನು ಮೈಗೂಡಿಸಿಕೊಂಡ ಶಕ್ತಿಯಾಗಿ ಏಕಲವ್ಯ ನಿಲ್ಲುತ್ತಾನೆ.

'ಶ್ಮಶಾನ ಕುರುಕ್ಷೇತ್ರ' ಮಾನವೀಯ ಮೌಲ್ಯಗಳನ್ನು ಸಾದರಪಡಿಸುವುದರಲ್ಲಿ ಯಶಸ್ವಿಯಾಗುವಂತೆ ಯುದ್ಧದ ವಿಕೃತ ಚಿತ್ರವನ್ನು ಸಂಯೋಜಿಸುವುದರ ಮೂಲಕ ವಿಭಿನ್ನ ಪರಿಣಾಮವನ್ನುಂಟು ಮಾಡುತ್ತದೆ. "ಮಾನವರ್ ಕೊಲೆಗೆ ಕೈಯಿಡೆ ಮಾರಿಯನ್ ಮೀರ್ದಪರ್"[6] ಎಂಬ ಮಾತು ಕೇವಲ ಕಾವ್ಯ ಪರಿಧಿಯಲ್ಲಿ ಮಾತ್ರ ಜೀವಂತವಾಗಿರದೆ ಜೀವನದ ನಿಜವಾದ ಅನುಭವದಿಂದ ಪುಷ್ಟಿ ಪಡೆದದ್ದೂ ಆಗಿದೆ. ಮಹಾಭಾರತದ ಅವಶೇಷ ಸ್ವಾತಂತ್ರ್ಯಪೂರ್ವ ಭಾರತದ ಅಥವಾ ಜಗತ್ತಿನ ಸಂಗ್ರಾಮದ ಅವಶೇಷವೂ ಹೌದಾಗುವಂತೆ ಚಿತ್ರಿಸಿದ್ದು ಜೀವನಧರ್ಮ ಕಾವ್ಯಧರ್ಮಕ್ಕೇರಲು ಸಹಕಾರಿಯಾಯಿತು.

ಅರಸೊತ್ತಿಗೆ ಶೋಷಣೆಯ ಕೇಂದ್ರ. ಸಮಾಜದ ಒಳಿತಿಗೆ ಆ ವ್ಯವಸ್ಥೆ ಕಂಟಕ. ಅರಸೊತ್ತಿಗೆಯ ಆಧಾರ ಸ್ತಂಭವಾದ ಪುರೋಹಿತಶಾಹಿ ಮೌಢ್ಯವರ್ಧಕ ಮಾದಕ ದ್ರವ್ಯ. ಆದ್ದರಿಂದ ಸಮಾಜದ ಸರ್ವತೋಭಿವೃದ್ಧಿಗೆ, ಸಾಮಾನ್ಯ ಪ್ರಜೆಗಳ ಒಳಿತಿಗೆ ಸಾಮ್ರಾಜ್ಯಶಾಹಿ ಪಾರತಂತ್ರ್ಯ ನಿರ್ನಾಮವಾಗಬೇಕು. ಇದು ಈ ಕವಿಯ ಛಲ. ಆ ಉದ್ದೇಶಕ್ಕಾಗಿ ಕವಿ ತಮ್ಮ ಲೇಖನಿಯ ಸಾಮರ್ಥ್ಯವನ್ನು ಮೊಳಗುತ್ತಾರೆ.

ಖಡ್ಗಗಳಿಗೆಮ್ಮಿಸಿರೆ

ಹರಿ ವಜ್ರ ಸಾಣೆ;

ನಮ್ಮ ಲೇಖನಿಗಿಂತ

ಬರಸಿಡಿಲ ಕಾಣೆ.

ದೇಶಗಳು ತಾಗುವವು;

ಸೋತು ತಲೆ ಬಾಗುವವು

ವಿಪ್ಲವಗಳೇಳುವವು

ಮಕುಟ ಬೀಳುವವು!

ಲೇಖನಿಯ ಕೂರಸಿಯು

ಕೆನ್ನೀರೆ ಮಸಿಯು!

. . ..

ನಮ್ಮ ಕೈ ಬುಟ್ಟಿಯಲಿ

ಸಿಡಿಲ ಗೂಡಿಹುದು!

ಹುಡುಕಿ ನೋಡಿದರಲ್ಲಿ

ಸುಮದ ಬೀಡಿಹುದು!

(ನವಿಲು)

ಅಸಮಾನತೆಯ ಒಡಲಾಳದಿಂದ ಸಿಡಿದೆದ್ದ ಶೋಷಿತ ಅತೃಪ್ತ ಜನತೆಗೆ 'ಪಾಂಚಜನ್ಯ'ವನ್ನು ಮೊಳಗಿ ಕರೆಕೊಡುತ್ತಾರೆ.

ನಡೆ ಮುಂದೆ, ನಡೆ ಮುಂದೆ,

ನುಗ್ಗಿ ನಡೆ ಮುಂದೆ!

ಬಗ್ಗದೆಯೆ ಕುಗ್ಗದೆಯೆ

ಹಿಗ್ಗಿನಡೆ ಮುಂದೆ!

ಬೆಚ್ಚಬಿಡು, ನೆಚ್ಚನಡು

ಕೆಚ್ಚೆದೆಯ ಗುಡಿಯಲ್ಲಿ;

ಸೆರೆಯ ಹರಿ, ಅರಿಯನಿರಿ,

ಹುಟ್ಟಳಿಸು ಹುಡಿಯಲ್ಲಿ!

ನಾನಳಿವೆ, ನೀನಳಿವೆ

ನಮ್ಮೆಲುಬುಗಳ ಮೇಲೆ

ಮೂಡುವುದು ಮೂಡುವುದು

ನವಭಾರತದ ಲೀಲೆ!

ನೊಂದದನಿ, ಕಣ್ಣಪನಿ

ಬರಿದೆ ಎಂದೊರೆಯದಿರು!

ತೆತ್ತಹಣ ಸತ್ತಹೆಣ ಹೊಯ್ತೆಂದು ಮೊರೆಯದಿರು

. . . .

ಭರತ ಖಂಡದ ಹಿತವೆ

ನಿನ್ನ ಹಿತವೆಂದು,

. . .

ಭಾರತಾಂಬೆಯ ಮುಕ್ತಿ

ಮುಕ್ತಿ ನನಗೆಂದು,

ನುಗ್ಗು ಮುಂದಕೆ, ಧೀರ

ಕಾಳಗದ ಕೊಲೆಗೆ!

ನುಗ್ಗು ಮರಣಕೆ, ವೀರ!

ಸಗ್ಗದಾ ನಲೆಗೆ!

(ಪಾಂಚಜನ್ಯ)

ಈ ರೀತಿಯಾಗಿ ಕುವೆಂಪು ತಮ್ಮ ಕೃತಿಗಳಲ್ಲಿ ಸಂಘರ್ಷದ ಮಹತ್ವ ಮತ್ತು ಸಂಘರ್ಷದ ವಿರುದ್ಧ ತಮ್ಮದೇ ಆದ ನಿಲುವುಗಳ ಮೂಲಕ ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಲು ಮುಂದಾಗಿರುವುದನ್ನು ಕಾಣಬಹುದು.

****

ಅಡಿಟಿಪ್ಪಣಿ

೧. ಕುವೆಂಪು ಸಮಗ್ರ ನಾಟಕ, ಸಂ.ಡಾ.ಕೆ.ಸಿ.ಶಿವಾರೆಡ್ಡಿ, ಪುಟ ೨೮.

೨. ಅದೇ, ಪುಟ ೨೯.

೩. ಅನಿಕೇತನ, ಸಂ.ಸಾ.ಶಿ.ಮರುಳಯ್ಯ, ಪುಟ ೬೧೪.

೪. ಅದೇ, ಪುಟ ೬೧೪.

೫. ಕುವೆಂಪು ಸಮಗ್ರ ನಾಟಕ, ಸಂ.ಡಾ.ಕೆ.ಸಿ.ಶಿವಾರೆಡ್ಡಿ, ಪುಟ ೭.

೬. ಶೂದ್ರ ತಪಸ್ವಿ, ಕುವೆಂಪು, ಪುಟ ೧೫.

೭. ಅದೇ, ಪುಟ ೧೮.

೮. ಬೆರಳ್‌ಗೆ ಕೊರಳ್, ಕುವೆಂಪು, ಪುಟ ೪೬.

೯. ಕುವೆಂಪು ಸಮಗ್ರ ನಾಟಕ., ಸಂ.ಕೆ.ಸಿ.ಶಿವಾರೆಡ್ಡಿ, ಪುಟ ೯೧.

ಅಧ್ಯಾಯ-೬

ಸಾಹಿತ್ಯಿಕ ಸ್ವರೂಪ

ಸಾಹಿತ್ಯಿಕ ಸ್ವರೂಪ

ಕುವೆಂಪು ನವೋದಯ ಕಾಲದಲ್ಲಿ ಬರೆಯಲು ತೊಡಗಿದ ಆಧುನಿಕ ಯುಗದ ಕನ್ನಡದ ದೈತ್ಯ ಪ್ರತಿಭೆ. ನವೋದಯ ಸಾಹಿತ್ಯ, ರಾಮಕೃಷ್ಣ ಪರಮಹಂಸ, ವಿವೇಕಾನಂದರ, ಅಧ್ಯಾತ್ಮ, ಪ್ರಖಾಂಡ ವೈಚಾರಿಕತೆ ಇತ್ಯಾದಿ ಅಂಶಗಳಿಂದ ಕುವೆಂಪು ಸಾಹಿತ್ಯ ಪ್ರಭಾವಿತಗೊಂಡಿದೆ. ವಸ್ತುವನ್ನು ಪರಿಭಾವಿಸುವ ದೃಷ್ಟಿಕೋನ, ಅಭಿವ್ಯಕ್ತಿಕ್ರಮ, ಉಪಯೋಗಿಸುವ ಭಾಷಾ ಶೈಲಿ, ನಾಟಕ ಮೂಡಿಸುವ ಜೀವನ ದರ್ಶನ- ಹೀಗೆ ಪ್ರತಿಯೊಂದರಲ್ಲಿಯೂ ಆ ಅಂಶಗಳನ್ನು ಗುರುತಿಸಬಹುದು.

"ಕುವೆಂಪುರವರು ಕನ್ನಡ ಸಾಹತ್ಯದಲ್ಲಿ ಪ್ರಮುಖ ಎಂದೆನಿಸಿಕೊಂಡ ಮೊದಲ ಶೂದ್ರ. ಭಾರತೀಯ ಸಂಪ್ರದಾಯದ ಆವರಣದಲ್ಲಿ ಶೂದ್ರನಿಗೆ ಅಕ್ಷರ ಜ್ಞಾನದ ಅಧಿಕಾರವೂ ಇರಲಿಲ್ಲ. ಗ್ರಂಥಾಧ್ಯಯನದ ಅಧಿಕಾರವೂ ಇರಲಿಲ್ಲ. ಅಂಥ ಸನ್ನಿವೇಶದಲ್ಲಿ ಶೂದ್ರನಿಗೆ ಬರೆಯುವುದೇ ಪ್ರತಿಭಟನೆ. ಅದೇ ಸಂಪ್ರದಾಯ ಮತ್ತು ಪರಂಪರೆಯ ವಿರುದ್ಧ ಮೊದಲ ಕ್ರಾಂತಿಕಹಳೆ"[೧]

ಹೀಗೆ ಕುವೆಂಪು ಅವರದು ಪರಂಪರೆಯ ಮತ್ತು ಸಂಪ್ರದಾಯವನ್ನು ಮೀರಿ ಬೆಳೆದ ಒಂದು ಮಹತ್ವದ ಕ್ರಿಯಾಶೀಲ ಪ್ರತಿಭಟನೆಯ ಸಂವೇದನೆಯಾಗಿದೆ.

ಕುವೆಂಪು ರಾಷ್ಟ್ರಕವಿ, ಮಹಾಕವಿ, ಕಾದಂಬರಿಕಾರ, ನಾಟಕಕಾರ, ವೈಚಾರಿಕತೆಯ ಮುತ್ಸದ್ದಿ ಇವೆಲ್ಲಕ್ಕಿಂತ ಮಿಗಿಲಾಗಿ ಒಬ್ಬ ಅಪೂರ್ವ ದಾರ್ಶನಿಕ. ಅವರ ಸಾಹಿತ್ಯದ ಅನನ್ಯತೆ ವಿಶಿಷ್ಟವಾದುದು. ವಸಾಹತುಶಾಹಿಯನ್ನು ವಿರೋಧಿಸುತ್ತ, ವೈದಿಕ ಸಂಸ್ಕೃತಿಯನ್ನು ಪರಿಶೀಲಿಸುತ್ತ, ತಮ್ಮದೇ ಆದ ದರ್ಶನವನ್ನು ನಿರ್ಮಿಸುತ್ತ ಹೊರಟ ಒಂದು ಸ್ವೋಪಜ್ಞ ಪ್ರತಿಭೆ. ಶೂದ್ರಾತಿಶೂದ್ರ ಸಂಸ್ಕೃತಿಯ ಮೌಲ್ಯಗಳನ್ನು, ಚಹರೆಗಳನ್ನು, ವಿವರಗಳನ್ನು ಮೊಟ್ಟ ಮೊದಲ ಬಾರಿಗೆ ಸಾಹಿತ್ಯದಲ್ಲಿ ದಟ್ಟವಾಗಿ ದಾಖಲಿಸಿದ ಕೀರ್ತಿಗೆ ಪಾತ್ರರಾದವರು. ಸ್ಥಳೀಯ ಸಂಸ್ಕೃತಿಯ ಅನನ್ಯತೆಯನ್ನು ಎತ್ತಿ ಹಿಡಿಯುತ್ತ, ಒಳ ಹಾಗೂ ಹೊರಗಿನ ಶಕ್ತಿಗಳನ್ನು ವಿರೋಧಿಸುತ್ತ ಹೊರಟ ಒಳಗಿನ ಬಂಡಾಯಗಾರ.

ಕುವೆಂಪು ನಮ್ಮ ಕಾಲದ ಅತಿ ಸಂಕೀರ್ಣ ವ್ಯಕ್ತಿತ್ವದ ಪ್ರತಿಭೆ. ಅವರು ಏಕಕಾಲಕ್ಕೆ ಸನಾತನಿಯೂ ಹೌದು, ಆಧುನಿಕರೂ ಹೌದು. ಅವರ ಬರಹಗಳನ್ನು ಬಿಡಿಯಾಗಿ ನೋಡಿದಾಗ ಆ ಎಲ್ಲಾ ಅಂಶಗಳು ಕಾಣಿಸುತ್ತವೆ. ಇಡಿಯಾಗಿ ನೋಡಿದಾಗ ಅವರು ಸಂಕೀರ್ಣವಾಗಿ ಕಾಣುತ್ತಾರೆ. ಕುವೆಂಪು ಒಂದು ಕಡೆ ಇಂಗ್ಲಿಷ್ ಅತಿಮುಖ್ಯ ಎಂದರೆ, ಕನ್ನಡದ ವಿಷಯ ಬಂದಾಗ ಇಂಗ್ಲಿಷ್‌ನ್ನು 'ಪೂತನಿ' ಎಂದು ಟೀಕಿಸುತ್ತಾರೆ.

ಕುವೆಂಪು 'ಜಲಗಾರ' ನಾಟಕದಲ್ಲಿ ವಸಾಹತುಶಾಹಿಯನ್ನು ತೀವ್ರವಾಗಿ ವಿರೋಧಿಸಿದರೂ ಬ್ರಿಟಿಷರ ಆಗಮನದಿಂದ ಇಲ್ಲಿನ ಮೌಢ್ಯ, ಕಂದಾಚಾರಗಳ ಬಗ್ಗೆ ಜನರಲ್ಲಿ ಜಾಗೃತಿ ಬಂತು ಎನ್ನುತ್ತಾರೆ. ಇಂಗ್ಲಿಷ್ ಶಿಕ್ಷಣದಿಂದ ಹೊಸ ನಾಗರಿಕತೆ ಮಲೆನಾಡಿನಲ್ಲಿ ಕಾಲಿಟ್ಟಿತು ಎಂದು ವಿವರಿಸುತ್ತಾರೆ.

"ಬ್ರಿಟಿಷರು ಬರದಿದ್ದರೆ ಕೆಳಜಾತಿಯ ಜನರು ಸಗಣಿ ಬಾಚಿಕೊಂಡು ಬಿದ್ದಿರಬೇಕಾಗಿತ್ತು. ಹೊಲಗದ್ದೆಗಳಲ್ಲಿ ದನಗಳಂತೆ ಕೆಲಸ ಮಾಡಿಕೊಂಡೇ ಬಾಳಬೇಕಾಗಿತ್ತು. ಜಾತಿ ಮತದ ಹೆಸರಿನಲ್ಲಿ

ಒದ್ದಾಡಬೇಕಾಗಿತ್ತು. ಬ್ರಿಟಿಷರು ಕೊಟ್ಟ ವಿದ್ಯೆಯಿಂದ ವಿಚಾರ ಮಾಡುವ ಶಕ್ತಿ ಬಂತು."[೨]

"ನೂರು ಮತದ ಹೊಟ್ಟ ತೂರಿ

ಎಲ್ಲ ತತ್ವಗಳ ಎಲ್ಲೆ ಮೀರಿ"

ಎಂದು ಕರೆ ನೀಡುವ ಕುವೆಂಪು ಸಾಹಿತ್ಯದ ವಿಶ್ವಾತ್ಮಕವಾದ ಮೌಲ್ಯಗಳನ್ನು, ಪಂಪನ 'ಮಾನವಜಾತಿ ತಾನೊಂದೆ ವಲಂ' ಎಂಬ ಮಾನವತೆಯ ತತ್ವಗಳನ್ನು ಎತ್ತಿ ಹಿಡಿಯುತ್ತಾರೆ. ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣ ದೃಷ್ಟಿ ಈ ಪಂಚತತ್ವಗಳನ್ನು ತಮ್ಮ ಕೃತಿಗಳಲ್ಲಿ ನಿಚ್ಚಳವಾಗಿ ಪ್ರತಿಬಿಂಬಿಸಿದ್ದಾರೆ.

ರೈತ ನಿಜವಾದ ದೇಶಭಕ್ತ ಎಂದು ಹೇಳುವ ಕುವೆಂಪು

ದೊರೆ ಮತ್ತು ಪುರೋಹಿತ

ಕೂಡಿದಾಗ ಹುಟ್ಟಿತು ಮತ

ಮೊದಲ ಠಕ್ಕ, ಮೊದಲ ಬೆಪ್ಪ

ಕೂಡಿದಾಗ ಮೂಡಿತು ಮತ

ಎಂದು ರಾಜ ಮತ್ತು ಪುರೋಹಿತನ ಸಂಬಂಧವನ್ನು ವಿವರಿಸುತ್ತಾರೆ.

"ಇರುವಾಸೆಯ ಬಿಡು, ಅರಿವಾಸೆಯ ತೊಡು" ಎಂಬುದರ ಮೂಲಕ ಅರಿವಿನ ವಿಕಾಸದ ಹಾದಿಯನ್ನು ಬೆನ್ನು ಹತ್ತಿ ಹೋದವರು ಕುವೆಂಪು. 'ಅನಿಕೇತನ', 'ಮನುಜಕುಲ', 'ವಿಶ್ವಪಥ'- ಮುಂತಾದ ಪರಿಕಲ್ಪನೆಗಳನ್ನು ಪ್ರತಿಮಾ ವಿಧಾನದಿಂದ ಬದುಕಿಗೆ ಅರ್ಥೈಸಿದ ಮೇಧಾವಿ; ಧ್ಯಾನ, ತಪಸ್ಸು, ಪ್ರಾರ್ಥನೆ, ದರ್ಶನಗಳನ್ನು ತಮ್ಮ ಕೃತಿಗಳ ಪಾತ್ರ, ಘಟನೆ, ಪರಿಸರದ ಮೂಲಕ ಗಾಢವಾಗಿ ಪ್ರತಿಪಾದಿಸಿದ್ದಾರೆ. ಹಾಗಾಗಿಯೇ, ಅನೇಕ ವೇಳೆ ಸನಾತನಿಗಳು, ದೈವ ಭಕ್ತರು, ವಿಚಾರವಾದಿಗಳು, ನಾಸ್ತಿಕರು ಎಲ್ಲರೂ ಹೀಗೆ ತಮ್ಮ ತಮ್ಮ ಪ್ರತಿಪಾದನೆಯನ್ನು ಕುವೆಂಪು ಅವರ ಸಾಹಿತ್ಯದಲ್ಲಿ ಕಾಣುತ್ತಾ ಹೋಗುತ್ತಾರೆ. ಕುವೆಂಪು ಅವರು ಸಂಕೀರ್ಣತೆಯನ್ನು ವೈರುಧ್ಯವನ್ನು ಮೀರಿದ ಕವಿ. ಬೇಂದ್ರೆ ಅವರು ಹೇಳುವ ಹಾಗೆ ಕುವೆಂಪು ಅವರು "ಯುಗದ ಕವಿ, ಜಗದ ಕವಿ."

ಕುವೆಂಪು ಅವರ ಮೊದಲ ಕವನ ಸಂಕಲನ 'ಕೊಳಲು' ೧೯೩೦ರಲ್ಲಿ ಬಿ.ಎಂ.ಶ್ರೀ. ಅವರ ಮುನ್ನುಡಿಯೊಂದಿಗೆ ಪ್ರಕಟವಾಯಿತು. ಅದೇ ವರ್ಷ ಅವರ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ ಕುರಿತ ಕೃತಿ ಸಹ ಡಿ.ವಿ.ಜಿ. ಅವರ ಮುನ್ನುಡಿಯೊಡನೆ ಪ್ರಕಟವಾಯಿತು. ಇಲ್ಲಿಂದ ಅವರ ಸಾಹಿತ್ಯ ಸೃಷ್ಟಿ ನಿರಂತರವಾಗಿ ಮುಂದುವರಿದು ಕಥೆ, ಕಾವ್ಯ, ಕಾದಂಬರಿ, ನಾಟಕ, ಪ್ರಬಂಧ, ಜೀವನಚರಿತ್ರೆ, ವೈಚಾರಿಕ, ಮಹಾಕಾವ್ಯ, ಸಾಹಿತ್ಯ ವಿಮರ್ಶೆ, ಸಾಹಿತ್ಯ ಮೀಮಾಂಸೆ, ಪತ್ರಗಳು, ಆತ್ಮಚರಿತ್ರೆ, ರೂಪಾಂತರ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಅದ್ಭುತವಾದ ಸೃಷ್ಟಿಗಳನ್ನು ನಿರ್ಮಿಸಿತು. ಪರಮಹಂಸ,

ವಿವೇಕಾನಂದ, ಅರವಿಂದ, ಗಾಂಧಿ ಹಾಗೂ ಪಾಶ್ಚಾತ್ಯ ಕವಿಗಳಾದ ಮಿಲ್ಟನ್, ಕೋಲರಿಚ್, ವರ್ಡ್ಸ್‌ವರ್ತ್, ಡಾಂಟೆ, ಟಾಲ್‌ಸ್ಟಾಯ್ ಮುಂತಾದವರಿಂದ ಕುವೆಂಪು ಪ್ರೇರಣೆ ಪಡೆದು ತಮ್ಮ ಸಾಹಿತ್ಯ ಸೃಷ್ಟಿಯ ಆಳ ಅಗಲಗಳನ್ನು, ದಿಕ್ಕು ದಿಗಂತಗಳನ್ನು ಮಾನವೀಯತೆಯ ದೃಢೀಕರಣದ ಆಧಾರದ ಮೇಲೆ, ವಿಶ್ವಪ್ರಜ್ಞೆಯ ಪಾತಳಿಯ ಮೇಲೆ ನಿರ್ಮಿಸುತ್ತಾ ಹೊರಟರು. ಭಾಷೆಯನ್ನು ಪ್ರತಿಮಾತ್ಮಕವಾಗಿ ರೂಪಿಸಿಕೊಂಡು ಕನ್ನಡ ಕಾವ್ಯದ ಸಮೃದ್ಧತೆಯನ್ನು ವಿಸ್ತರಿಸಿದರು.

ಕುವೆಂಪು ತಮ್ಮ ನಾಟಕಗಳಲ್ಲಿ ವೈದಿಕ ಪೂರಾಣಗಳನ್ನು, ಪರಂಪರೆಯನ್ನು ಸಮಕಾಲೀನ ಸನ್ನಿವೇಶಕ್ಕೆ ಅನುಗುಣವಾಗಿ ಒಡೆದು ಬಳಸಿಕೊಳ್ಳುವಲ್ಲಿ, ಪರಿಷ್ಕರಿಸಿ ಉಪಯುಕ್ತಗೊಳಿಸುವಲ್ಲಿ ಪ್ರವೃತ್ತರಾದರು. ಅವರ 'ಶೂದ್ರ ತಪಸ್ವಿ', 'ಬೆರಳ್‌ಗೆ ಕೊರಳ್', 'ಶ್ಮಶಾನ ಕುರುಕ್ಷೇತ್ರ' ಮುಂತಾದ ನಾಟಕಗಳು ಈ ನಿಟ್ಟಿನಲ್ಲಿ ರಚಿತವಾದ ಪ್ರಮುಖ ಕೃತಿಗಳಾಗಿವೆ. ಇವರ 'ರಕ್ತಾಕ್ಷಿ' ಮತ್ತು 'ಬಿರುಗಾಳಿ' ನಾಟಕಗಳಲ್ಲಿ ಕನ್ನಡ ಸಂಸ್ಕೃತಿ ಹಾಗೂ ಇತಿಹಾಸದ ನೆನಪುಗಳು ಹೊಸ ಅರ್ಥ ಪರಂಪರೆಯ ಲಯಗಳೊಡನೆ ಧ್ವನಿಪೂರ್ಣವಾಗಿ ಅಭಿವ್ಯಕ್ತವಾಗಿವೆ.

ಕುವೆಂಪುರವರು ನಂಬಿರುವ ತತ್ವ ಮತೀಯವಲ್ಲದ ಅಧ್ಯಾತ್ಮ. ಭಾರತೀಯ ಸಂಸ್ಕೃತಿಯನ್ನು ಎಲ್ಲರಂತೆ 'ವೈದಿಕ ಸಂಸ್ಕೃತಿ' ಎಂದು ಕರೆಯುವುದಿಲ್ಲ. ಅದರಲ್ಲಿ ಅವೈದಿಕ ಸಂಸ್ಕೃತಿಯ ಪಾತ್ರವೂ ತೀರ ಮುಖ್ಯ ಎಂಬುದನ್ನು ಅವರು ನಂಬಿದವರು ಮತ್ತು ಪ್ರತಿಪಾದಿಸಿದವರು. ವೈದಿಕ ಅವೈದಿಕ ಮೂಲತಃ ಎರಡೂ ಒಂದೇ ಬೇರೆ, ಬೇರೆ ಅಲ್ಲ. ವೈದಿಕಕ್ಕೆ ಬೆಳವಣಿಗೆಯ ಅವಕಾಶ ಮತ್ತು ಪ್ರೋತ್ಸಾಹ ದೊರೆಯಿತು. ಅವೈದಿಕಕ್ಕೆ ಅದು ಲಭ್ಯವಾಗಲಿಲ್ಲ. ಅವೈದಿಕಕ್ಕೂ ಅವಕಾಶ ದೊರೆತರೆ, ಅದು ವೈದಿಕಕ್ಕಿಂತ ಮಿಗಿಲಾಗಿ ಬೆಳವಣಿಗೆ ಹೊಂದುತ್ತದೆ ಎಂದು ಅವರು ತಿಳಿದವರು. ಮತೀಯತೆಯಲ್ಲಿ ನಂಬಿಕೆ ಕಳೆದುಕೊಂಡು ಕುವೆಂಪು ಅವರು ತಮ್ಮ ಜೀವನದುದ್ದಕ್ಕೂ ವೈದಿಕತೆಯನ್ನು ಸವಾಲಾಗಿ ತೆಗೆದುಕೊಂಡರು. ವೈದಿಕತೆಯ ಎಲ್ಲ ಸವಲತ್ತುಗಳನ್ನು ದಕ್ಕಿಸಿಕೊಂಡ ಕುವೆಂಪು ಅದು ಸಾಧಿಸದ್ದನ್ನು ಕೂಡ ಸಾಧಿಸಿದರು. ವೈದಿಕತೆಯ ಹೆಸರಿನಲ್ಲಿ ಸಮಾಜವನ್ನು ಕಬಳಿಸುತ್ತಿದ್ದ ಕುಶಕ್ತಿಗಳನ್ನು ಹೊಸ ಜಗತ್ತಿಗೆ ಪರಿಚಯಿಸಿದರು. ಅವೈದಿಕ ಜನಾಂಗದ ಪ್ರತಿನಿಧಿಯಾಗಿ ತಮ್ಮ ಸಾಹಿತ್ಯ ಸೃಷ್ಟಿ ಮಾಡಿದರು.

ಕುವೆಂಪು ಅವರ ವ್ಯಕ್ತಿತ್ವದಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ, ಅಧ್ಯಾತ್ಮ ಜ್ಯೋತಿಯ ವಿಷಯದಲ್ಲಿ ಅಚಲ ಶ್ರದ್ಧೆ, ವಿಭೂತಿ ಪೂಜೆಯಲ್ಲಿ ನಿಷ್ಠೆ, ಸಾಹಿತ್ಯದ ಪರಮ ಪ್ರಯೋಜನದಲ್ಲಿ ಪೂರ್ಣವಿಶ್ವಾಸ, ಪ್ರಕೃತಿಯ ಬಹುಮುಖ ವಿನ್ಯಾಸದಲ್ಲಿ ಒಂದು ಆತ್ಮೀಯತೆ, ಭವ್ಯತೆಯ ಅನುಭವದಲ್ಲಿ ಭಕ್ತಿ, ಜೀವನದಲ್ಲಿ ಧರ್ಮದ ಮೂಲಭೂತ ಅಗತ್ಯವನ್ನು ಒಪ್ಪುವ ಮನೋಧರ್ಮ, ಜನತೆಯ ಉದ್ಧಾರಕ್ಕಾಗಿ ಹಂಬಲಿಸುವ ಚೇತನ, ಆತ್ಮಸಾಕ್ಷಾತ್ಕಾರದ ಲಕ್ಷ್ಯ-ಇವೆಲ್ಲ ಒಂದು ಸುಂದರ ಪಾಕದಲ್ಲಿ ಸಮರಸವಾಗಿ ಐಕ್ಯಗೊಂಡಿವೆ. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಟಾಗೋರ್, ಶ್ರೀ ಅರವಿಂದ, ರಮಣ ಮಹರ್ಷಿ, ಗಾಂಧೀಜಿ-ಇತ್ಯಾದಿ ಭಾರತೀಯ ಮಹಾತ್ಮರ ವಿಚಾರಗಳಿಂದ ಭಾವಿತವೂ ಪ್ರಭಾವಿತವೂ ಆದ ಈ ಪ್ರಫುಲ್ಲ ವ್ಯಕ್ತಿತ್ವದಲ್ಲಿ ಕೇವಲ ಸಂಪ್ರದಾಯಜಡರ ಅಂಧಶ್ರದ್ಧೆ, ಸಂಕುಚಿತ

ಅಭಿಮಾನಗಳಿಗೆ ಆಸ್ಪದವಿಲ್ಲದಂತಾಗಿದೆ. ಆಧ್ಯಾತ್ಮಿಕ ಅನುಭವಕ್ಕಾಗಿ ಉಕ್ತವಾಗಿರುವ ವಿವಿಧ ಯೋಗಮಾರ್ಗಗಳಲ್ಲಿ ಕುವೆಂಪು ಅವರಿಗೆ ಅಪರಿಚಿತವಾದುದು ಯಾವುದೂ ಇಲ್ಲ. ತಮ್ಮದೇ ಆದ ರೀತಿಯಿಂದ ಇವುಗಳಲ್ಲಿ ಸಮನ್ವಯವನ್ನು ಕಂಡುಕೊಂಡ ಮೇಲೆ, 'ಕಾವ್ಯ ದರ್ಶನ'ಕ್ಕೂ 'ಆತ್ಮದರ್ಶನ'ಕ್ಕೂ ಇರುವ ಸಾಮೀಪ್ಯವನ್ನು ಮನಗಂಡು, ತಮ್ಮ ಕವಿ ಸಹಜ ವಾಣಿಯಿಂದಲೇ 'ಕವಿನಿರ್ಮಿತಿ', 'ರಸ', 'ಅಲಂಕಾರ', 'ಭವ್ಯತೆ', 'ಪ್ರಕೃತಿ ಸೌಂದರ್ಯ' ಮುಂತಾದವುಗಳ ಆಳದಲ್ಲಿ ಹುದುಗಿರುವ ತತ್ತ್ವಗಳನ್ನು ಹೊಸ ಪರಿಯಿಂದ ವಿವರಿಸಿರುವ ಯಶಸ್ಸು ಅವರದಾಗಿದೆ.

ತಲೆತಲಾಂತರಗಳಿಂದ ಬಂದ, ಇಂದಿನ ವೈಜ್ಞಾನಿಕ ಪರಿಧಿಯಲ್ಲಿ ಅರ್ಥರಹಿತವಾಗುತ್ತಿರುವ ಜಾತಿವ್ಯವಸ್ಥೆಯನ್ನು ತಮ್ಮ ಸಾಹಿತ್ಯದುದ್ದಕ್ಕೂ ಪ್ರಶ್ನಿಸುವುದರಿಂದಾಗಿ 'ಶೂದ್ರ'ರೂ 'ಬ್ರಾಹ್ಮಣ'ರಾಗಲು ಸಾಧ್ಯವೆಂಬುದರತ್ತ ಕೇಂದ್ರೀಕರಿಸುವ ಕುವೆಂಪು ಸಮಷ್ಟಿ ಮನದ ಕವಿಯಾಗುತ್ತಾರೆ. ಸಾಮಾನ್ಯವಾಗಿ ಪೌರಾಣಿಕ ಪಾತ್ರಗಳಲ್ಲಿ ಸಮಕಾಲೀನ ಹಂದರದ ಪಾತಳಿಯಲ್ಲಿ ಬೆಳೆದುಕೊಂಡು ಬದುಕಿನ ಜೀವಂತ ಶಕ್ತಿಯನ್ನು ಗ್ರಹಿಸುವುದರ ಮೂಲಕ ಸಾಮಾಜಿಕ ಸಮಸ್ಯೆಗೆ ಸವಾಲು ಹಾಕುವುದು ಅನಿವಾರ್ಯವಾಗುವುದರ ಜೊತೆಗೆ ಪಾತ್ರವು ಪರಿಧಿಗುಂಟ ಬೆಳೆಯುವುದು ಮಹತ್ವದ್ದಾಗುತ್ತದೆ.

ಪುರೋಹಿತರ ಮೈತ್ರಿಗೆ ಕುಠಾರಪ್ರಾಯವಾಗಿ ಕನ್ನಡ ಸಾಹಿತ್ಯದಲ್ಲಿ ಮೊಟ್ಟ ಮೊದಲು ಮೂಡಿಬಂದವನು ಹರಿಹರ ಮಹಾಕವಿ. ಅವನು ಮಹಾಕಾವ್ಯ ಲಕ್ಷಣಗಳುಳ್ಳ ಕಾವ್ಯ ರಚನೆ ಮಾಡದಿದ್ದರೂ ಅವನು ಅಂದಿನ ಅಂಗೀಕೃತ ಕಾವ್ಯೋದ್ದೇಶದ ವಿರುದ್ಧ ದಂಗೆಯೆದ್ದ ಮಹಾ ಸಾಹಸಿ ಎಂಬ ಕಾರಣಕ್ಕಾಗಿ ಮಹಾಕವಿ ಪಟ್ಟಕ್ಕೆ ಅರ್ಹನಾದ. ಹರಿಹರ ಕವಿ ದಂಗೆಯ ಬಾವುಟವನ್ನೆತ್ತಿ "ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಠರ ಮೇಲೆ ತನಗಿಲ್ಲದ ಕವಿಚಂದ್ರಕರ್ಣನೆಂಬ ಸಲ್ಲದ ಗುಣಂಗಳನಿಟ್ಟು ಕಬ್ಬಮಂ ಕಟ್ಟಿ ಕೆಡಬೇಡೆಲೊ"[3] ಎಂದು ಮೊಟ್ಟ ಮೊದಲು ಸಾರಿದ ಮಹಾನುಭಾವ. ಅವನ ಅಳಿಯ ರಾಘವಾಂಕ 'ಜನ ಬದುಕಬೇಕೆಂದು ಅನಪೇಕ್ಷೆಯಿಂ ಕಾವ್ಯ ಮುಖದಿಂ' ಹರಿಶ್ಚಂದ್ರ ಕಥೆ ರಚಿಸಿದ ಪುರೋಹಿತನ ಹಸ್ತಕನಾಗಿ ದೊರೆಯ ಪಟ್ಟಭದ್ರತೆಗಾಗಿ ಲೇಖನ ಶಕ್ತಿಯನ್ನು ಹಾದರಕ್ಕೆ ಅಣಿ ಮಾಡದೆ 'ಜನ ಬದುಕಬೇಕೆಂದು' ಜನರ ಉಸಿರನ್ನು ಉಳಿಸುವುದಕ್ಕಾಗಿ ಕಾವ್ಯ ರಚನೆ ಮಾಡಿದ ಶ್ರೇಯಸ್ಸು, ಯಶಸ್ಸು, ಕೀರ್ತಿ-ಎಲ್ಲಕ್ಕಿಂತ ಹೆಚ್ಚಾಗಿ ಸಮಾಜನಿಷ್ಠೆ-ಹರಿಹರ ಸಂಪ್ರದಾಯದ ಕವಿಗಳಿಗೆ ಸಲ್ಲಬೇಕು. ಆದ್ದರಿಂದಲೇ ಕುವೆಂಪು ಹರಿಹರ-ರಾಘವಾಂಕರು ಸಂಪ್ರದಾಯದ ವಿರುದ್ಧ 'ದಂಗೆ ಎದ್ದ' ಕವಿಗಳೆಂದು ಮುಕ್ತಕಂಠದಿಂದ ಹೊಗಳಿದ್ದಾರೆ.

ಜನ ಬದುಕಬೇಕೆಂಬ ಕಾವ್ಯೋದ್ದೇಶವೇ ತಮ್ಮ ಸಾಹಿತ್ಯೋದ್ದೇಶ ಎಂಬುದನ್ನು ಕುವೆಂಪು ತಮ್ಮದೆ ಮಾತಿನಲ್ಲಿ 'ಬದುಕಿನಿಂದ, ಬದುಕಿಗಾಗಿ, ಬದುಕಿನಾಚೆಯ ಬದುಕಿಗಾಗಿ' ಎಂದು ನೆನಪಿನ ದೋಣಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಕುವೆಂಪು ಈ ಮಾತನ್ನು ರಾಘವಾಂಕನ 'ಜನ ಬದುಕಬೇಕೆಂದು' ಎಂಬ ಹರಿಶ್ಚಂದ್ರಕಾವ್ಯದಿಂದಲೆ ಎತ್ತಿಕೊಂಡಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ.

ಹರಿಹರ, ರಾಘವಾಂಕರಿಬ್ಬರೂ ಕುವೆಂಪುರವರ ಅಚ್ಚುಮೆಚ್ಚಿನ ಕವಿಗಳೆಂಬುದು ಸುಸ್ಪಷ್ಟ. ಆ ಧೀರ ಕವಿಗಳಿಬ್ಬರಿಗೂ ಸ್ಫೂರ್ತಿ ಸೆಲೆಯಾಗಿದ್ದ ಬಸವೇಶ್ವರರ ಧಾರ್ಮಿಕ ಮತ್ತು ಸಾಹಿತ್ಯಿಕ ಕ್ರಾಂತಿ ಕುವೆಂಪು

ಅವರ ಸಾಹಿತ್ಯೋದ್ದೇಶವನ್ನು ನಿಚ್ಚಳವಾಗಿ ರೂಪಿಸಿದ್ದು ಕಂಡುಬರುತ್ತದೆ. ಆ ಉದ್ದೇಶ ಸಾಮಾಜಿಕ ಸುಧಾರಣೆ, ಸಾಮಾಜಿಕ ನಿಷ್ಠೆ, ಕುವೆಂಪು ಹೇಳಿರುವಂತೆ

'ಬಸವಣ್ಣನವರ ಉದ್ದೇಶ ಕೃತಿಲೋಕದ ರಸಾನುಭವವಲ್ಲ' ಭವಲೋಕಕ್ಕೆ ಅಭಾವಲೋಕವನ್ನು ತರುವ ಗುರುತರ ಕಾವ್ಯ. ಅವರು ನುಡಿಸಲು ಇಷ್ಟಪಟ್ಟದು ವೀಣೆಯನ್ನಲ್ಲ, ಒಡಲನ್ನು. ಅವರು ಹಸನುಗೊಳಿಸಲೆಳಸಿದ್ದು ಕಿನ್ನರಿಯ ತಂತಿಗಳನ್ನಲ್ಲ, ನರನ ನರಗಳನ್ನು. ಗೀತೆ, ಕೀರ್ತನೆ, ಪದ, ವಚನ ಇತ್ಯಾದಿಗಳ ರಚನೆ ಅವರ ಜನ್ಮೋದ್ದೇಶವಾಗಿರಲಿಲ್ಲ. ಮನುಷ್ಯನ ಹೃದಯದಲ್ಲಿ ಮಹೇಶ್ವರನನ್ನು ಕಡೆದು ರಚಿಸುವ ಮಹತ್ತರವಾದ ಭವೋದ್ದೇಶ ಅವರದಾಗಿತ್ತು. ತನ್ನ ಕೆಲಸ ಕಾವ್ಯ ಲೋಕದ್ದಲ್ಲ, ಕರ್ಮಲೋಕದ್ದು.

ಸಾಹಿತ್ಯ ಜನಜೀವನವನ್ನು ಹಸನುಗೊಳಿಸುವ, ಹಸನ್ಮುಖಿಗಳನ್ನಾಗಿ ಮಾಡುವುದರ ಜೊತೆಗೆ, ಅದಕ್ಕಿಂತ ಮುಖ್ಯವಾಗಿ ಮಾನಸಿಕ, ಸಾಮಾಜಿಕ, ಆರ್ಥಿಕ ಪರಿವರ್ತನೆಯ ಸಾಧನ ಆಗಬೇಕಾಗಿದೆ ಎಂಬುದನ್ನು, ಆ ಉದ್ದೇಶ ಈಡೇರಬೇಕಾದರೆ ಭವಲೋಕದ ಬಗ್ಗೆ, ಇಹಲೋಕ ಜೀವನದ ಬಗ್ಗೆ ಅತೀವ ಕಾಳಜಿ ಇರಬೇಕು. ಅಂಥ ಕಾಳಜಿ ಇರಬೇಕಾದರೆ ಸಾಹಿತ್ಯ ಕೇವಲ ಕಲೆ ಎಂಬ ದೃಷ್ಟಿ ಸಾಧುವಲ್ಲ ಎಂಬುದು ಕುವೆಂಪು ಅವರ ನಿಶ್ಚಿತ ನಿಲುಮೆ.

ಕುವೆಂಪು ನಾಟಕಗಳಲ್ಲಿ ರೂಢಿಗತ ಸಂಪ್ರದಾಯ ಕಟ್ಟುಕಟ್ಟಳೆಯಿಂದ ಘಟಿಸಬಹುದಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಬಂಡೇಳುವ ಅವರ ಪ್ರವೃತ್ತಿಯಲ್ಲಿ ನಿಜವಾದ ಅರ್ಥದ ಮಾನವನನ್ನು, ಬದುಕಿನ ಪ್ರೇಮಿಯನ್ನು ನೋಡುತ್ತೇವೆ. ಹೀಗೆ ಮಾಡುವಾಗ ಕವಿ ತನ್ನ ಪ್ರತಿ ಹೆಜ್ಜೆಯನ್ನೂ ಪ್ರಯೋಗಾತ್ಮಕವಾಗಿ ನೋಡುವ ಅನ್ವೇಷಕರಾಗಿ ತೋರುತ್ತಾರೆ. ಈ ಕಾರಣಕ್ಕಾಗಿಯೇ ಇಲ್ಲಿನ ಬಹುಪಾಲು ನಾಟಕಗಳು ಸ್ವಾತಂತ್ರ್ಯ ಆಂದೋಲನದ ಸುತ್ತ ಮುತ್ತಲ ಪರಿಧಿಯನ್ನು ದರ್ಶಿಸಿ, ಬದುಕಿನ ಅರ್ಥಪೂರ್ಣ ಸ್ಥಿತಿಯನ್ನು ತೆರೆದು ತೋರಿಸುತ್ತಾ ತಮಗೆ ತಾವೇ ವೈಚಾರಿಕ ನೆಲಗಟ್ಟನ್ನೂ ಪಡೆದುಕೊಂಡು ಬಿಡುತ್ತವೆ. ಈ ಹಿನ್ನೆಲೆಯನ್ನು ಸಮಕಾಲೀನ ಮತ್ತು ಪೂರ್ವಕಾಲೀನ ವಿದ್ಯಮಾನಗಳನ್ನು ತಾಳೆಹಾಕುವ ಮೂಲಕ ಸಾಮಾಜಿಕ ಬದಲಾವಣೆಯನ್ನು ತರುವ ಪ್ರಯತ್ನವನ್ನು ನೋಡುತ್ತೇವೆ.

'ಜಲಗಾರ' ನಾಟಕದ ವಸ್ತು ಅಸ್ಪೃಶ್ಯ ಜಾಡಮಾಲಿಯೊಬ್ಬ ಕಾಯಕವೇ ಕೈಲಾಸವೆಂದು ಭಾವಿಸಿ, ತನ್ನ ವೃತ್ತಿಯಲ್ಲೇ ಶಿವಸಾಯುಜ್ಯವನ್ನು ಪಡೆವ ಶ್ರದ್ಧಾವಂತ ಕರ್ಮಯೋಗಿಯೊಬ್ಬನ ಬದುಕನ್ನು ಚಿತ್ರಿಸುವುದು. ಯಾವ ಕಾಯಕವೂ ಕೀಳಲ್ಲ. ಕರ್ತವ್ಯ, ಶ್ರದ್ಧೆ ಪ್ರಾಮಾಣಿಕತೆ ಮುಖ್ಯ. ಅದನ್ನು ಹೊಂದಿದ ಮಾನವ ಯಾವ ಜಾತಿ ಯಾವ ವರ್ಗದವನೇ ಆಗಲಿ ಭಗವದ್ ಮಾನ್ಯನು ಎಂಬುದು ಈ ನಾಟಕದ ಸಂದೇಶ.

ಸಮಾಜದಲ್ಲಿ ಅವಿಚ್ಛಿನ್ನವಾಗಿ ತಾಂಡವವಾಡುತ್ತಿರುವ ಅಜ್ಞಾನ, ಅವಿವೇಕ, ಅಂಧಶ್ರದ್ಧೆಗಳನ್ನು ಬುಡಮಟ್ಟ ಕಿತ್ತೊಗೆಯಲು ಪ್ರತಿಯೊಬ್ಬನು ಕಾರ್ಯತತ್ಪರರಾಗಬೇಕೆಂಬ ಕವಿಯ ಸಮತಾತತ್ವವೆಲ್ಲ ಜಲಗಾರನ ಪಾತ್ರದಲ್ಲಿ ಪ್ರತಿಬಿಂಬಿತಗೊಂಡಿದೆ. ಆ ವ್ಯಕ್ತಿತ್ವ ಪ್ರಕಾಶನಕ್ಕೆ ಪೂರಕವಾಗಿ ಬರುವ ರೈತ,

ತರುಣ, ಪಾರ್ವರು, ಕಬ್ಬಿಗರು, ತಿರುಕ ಹೀಗೆ ಪ್ರತಿ ಪಾತ್ರವು ನಮ್ಮ ಸಮಾಜದ ಪ್ರತಿನಿಧಿಗಳೇ. ಇಲ್ಲಿ ರೈತ ತಾನು 'ನೇಗಿಲಯೋಗಿ ಮಣ್ಣಿನ ಭೋಗಿ' ಎನ್ನುವಷ್ಟು ಪ್ರಜ್ಞಾಶೀಲನಾದರೂ, ಜಾತೀಯತೆಯನ್ನು ಮೀರಲಾಗದ ಜಡಮತಿ. ಹೊರನೋಟಕ್ಕೆ ಉಪಕಾರಿಗಳಂತೆ, ಒಳನೋಟಕ್ಕೆ ಕ್ರೂರಿಗಳು ಆಗಿರುವ ಇಲ್ಲಿನ ತರುಣರು ನಮ್ಮ ಇಂದಿನ ಯುವ ವರ್ಗದ ಮನೋವಿಕಾರದ ಪ್ರತಿನಿಧಿಗಳು. "ಶಿವಗುಡಿರೆಸೆಯಿಂದ ಹಿಟ್ಟು ಹೊಟ್ಟೆಗೆ ದುಡ್ಡು ಬಟ್ಟೆಗೆ"[೪] ಎನ್ನುವ ಪಾರ್ವರಂತು ಹಿಂದಿನ ವರ್ಣವ್ಯವಸ್ಥೆಯನ್ನು ಬಲವಾಗಿ ಅಪ್ಪಿರುವ ಪುರೋಹಿತಶಾಹೀ ವರ್ಗದವರ ಪ್ರತೀಕ. ಇವರೆಲ್ಲರ ನಡುವೆ ಶಿವಗುಡಿಗೆ ಹೋಗಲಾರದ ಜಲಗಾರ, ಹೃದಯದಲ್ಲೇ ಶಿವನನ್ನು ಕಾಣುವಷ್ಟು ವಾಸ್ತವವಾದಿ. ಆದ್ದರಿಂದಲೇ ಶಿವ ಜಲಗಾರನ ವೇಷದಲ್ಲೇ ಬಂದು ತಾನೂ ಜಲಗಾರನೆಂದು ಆರೋಪಿಸಿಕೊಳ್ಳುತ್ತಾನೆ. ಕೊನೆಗೆ ನೀನೆ ನಾನಾಗಿಹೆನು! ನಾನೆ ನೀನಾಗಿರುವೆ ಎಂಬುದನ್ನು ದೃಢಪಡಿಸುವ ಮೂಲಕ ಹೊಸ ಸಮಾಜ ಸೃಷ್ಟಿಗೆ 'ಜಲಗಾರ' ನಂಥ ವ್ಯಕ್ತಿಗಳ ಅಗತ್ಯದ ನಿತ್ಯ ಸತ್ಯಾಂಶವನ್ನು ಕುವೆಂಪು ಸಾರುತ್ತಾರೆ.

ಕುವೆಂಪು 'ಶೂದ್ರ ತಪಸ್ವಿ' ನಾಟಕದಲ್ಲಿ ಶಂಬೂಕ ಶೂದ್ರ ತಪಸ್ವಿ ಎಂಬುದನ್ನು ಸಹಿಸಲಾಗದೆ ತಿರಸ್ಕರಿಸಿದ ಕಾರಣಕ್ಕಾಗಿ ಆತನ ಮಗ ಮೃತಪಡುತ್ತಾನೆ. ಮಹಿಮೆಗೆ ಮಣಿಯದ, ಅದನ್ನು ಜಾತಿ ಕಾರಣದಿಂದ ಗೌರವಿಸದ ಯಾವ ದರ್ಪಿಷ್ಟ ವ್ಯಕ್ತಿಗೂ ಇದೇ ಗತಿ ಸಿದ್ಧವಾಗಿರುತ್ತದೆ ಎಂಬುದರ ಸಾಕ್ಷಿಯಾಗಿ ಮಗನ ಮರಣ ನಿಮಿತ್ತವಾಗಿದೆ. ತನ್ನ ಅವಿವೇಕವನ್ನೇ ತಿಳಿಯದೆ ರಾಮನ ಬಳಿ ನ್ಯಾಯ ಕೇಳುವ ಬ್ರಾಹ್ಮಣ ಒಂದು ಕಾಲದ ತೀವ್ರ ಶ್ರದ್ಧೆಯ ಪ್ರತೀಕ. ಕಾರ್ಯಕಾರಣವನ್ನರಿತ ರಾಮ "ಎಂತಾದೊಡಂತಾಮ್ ವೇದ ಮೂರ್ತಿಗಳಲ್ತೆ"[೫] ಎಂದು ಟೀಕಿಸಿದರೂ, "ತಪಸ್ವಿಯ ತಿರಸ್ಕೃತಿಗೆ ಮುನಿದ ಧರ್ಮ"[೬] ಎಂದು ಭಾವಿಸಿದರು. ಅದು ನಿರಪರಾಧಿಯ ಮೇಲಲ್ಲ ಎಂಬಷ್ಟು ಪ್ರಜ್ಞಾವಾದಿ. ಆತನ ಅಳಲಿಗೆ ಸ್ಪಂದಿಸುವ ಸಹೃದಯಿ.

ಕವಿಯಲ್ಲಿ ಪೂರ್ಣವಾಗಿ ವರ್ಗದ್ವೇಷದಿಂದಲೇ ಕಾವ್ಯ ಸೃಷ್ಟಿಗೆ ತೊಡಗಿದ್ದಲ್ಲಿ ಇಂಥ ಕೋಮಲ ಮನಸ್ಸಿನ, ದಯಾಹೃದಯನಾದ ರಾಮನನ್ನು ಸೃಷ್ಟಿಸಬೇಕಾದ ಅಗತ್ಯವಾಗಲಿ ಬ್ರಾಹ್ಮಣನ ಉದ್ಧಟತನದರಿವಿದ್ದೂ ಆತನೊಡನೆ ರಾಮ ಶೂದ್ರತಪಸ್ವಿಯ ಆಶ್ರಮಕ್ಕೆ ಬರುವ ಅಗತ್ಯವಾಗಲಿ ಇರುತ್ತಿರಲಿಲ್ಲ. ಈ ಸಂದರ್ಭದಲ್ಲಿ ಅಧರ್ಮದಲ್ಲೂ ಮಿಡಿಯುವ ಅಂತಃಕರಣದ ಮೂಲಕ ಮಾನವೀಯತೆಯ ಪ್ರತಿಪಾದಿಯಾಗಿ ತೋರುತ್ತಾರೆ. ಮುಂದೆ ರಾಮ ಇಷ್ಟವಿಲ್ಲದಿದ್ದರೂ ಅದರ ಪರಿಣಾಮ ಅಧರ್ಮಿಯನ್ನು ಶಿಕ್ಷಿಸುವುದೇ ಆಗಿರುವುದರಿಂದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾನೆ. ಅದು ಶೂದ್ರತಪಸ್ವಿಯನ್ನು ಬಲ ಬಂದು ತಪಸ್ವಿಯ ಔನ್ನತ್ಯ ಸೂಚಿಸಿದರೆ, ಬ್ರಾಹ್ಮಣನನ್ನು ಅಟ್ಟಿಕೊಂಡು ಬಂದು ಅಧರ್ಮಿ ಯಾರು ಎಂಬುದನ್ನು ಋಜು ಮಾಡುತ್ತದೆ. ವಿಧಿಯಿಲ್ಲದ ಬ್ರಾಹ್ಮಣ ರಾಮನ ಶರಣು ಹೋಗುತ್ತಾನೆ. ಆಗ ಬ್ರಾಹ್ಮಣನ ಒಳಗಣ್ಣು ತೆರೆಯುವ ನಿತ್ಯಸತ್ಯವನ್ನು ತಿಳಿಸುತ್ತಾನೆ.

ಆರ್ಥಿಕ ಅಸಮಾನತೆಯ ವೈಪರೀತ್ಯದಿಂದಾಗುವ ಪ್ರಭಾವವನ್ನು ತೀವ್ರವಾಗಿ ಶೋಧಿಸುವ ಕವಿಯ ಶೋಧನೆಗೆ ಪಕ್ಕಾದ ವ್ಯಕ್ತಿ ಬೇಡ ಪುತ್ರ 'ಏಕಲವ್ಯ'. ಪ್ರಸ್ತುತಕ್ಕೆ ಅದು ಅನಿವಾರ್ಯವೂ ಕೂಡ. ಏಕಲವ್ಯ ಎಲ್ಲಾ ವರ್ಗದ ಜನರ ದೃಷ್ಟಿಯಲ್ಲಿ ಅಸಾಮಾನ್ಯ, ಸಮಷ್ಟಿಗಾಗಿ ತನ್ನನ್ನೇ ಅರ್ಪಿಸಿಕೊಂಡ ತ್ಯಾಗಿ.

"ನನ್ನಹಂಕಾರದಾಳಲಮೆ ಮರಿಯಿಕ್ಕಿದುದು, ಪಾರ್ಥನ ಅಹಂಕಾರದೀ ಕ್ರೂರ ಈರ್ಷೆಯಿಂ"[೭] ಎಂದು ನೊಂದುಕೊಳ್ಳುವ ದ್ರೋಣ ಬದಲಾಗುತ್ತಿರುವ ಸಮಾಜಕ್ಕೆ ಈ ವರ್ಗ ಯಾವ ರೀತಿ ಸ್ಪಂದಿಸುತ್ತದೆ, ಸ್ಪಂದಿಸಬೇಕಾಗುತ್ತದೆ ಎಂಬುದರ ಮಾರ್ಗದರ್ಶಿ ಏಕಲವ್ಯನ ನಿಷ್ಠೆ, ಪ್ರಾಮಾಣಿಕತೆ, ದಯಾಗುಣವನ್ನು ಆತ ವಿದ್ಯೆಕಲಿಕೆಯ ಮುನ್ನವೇ ಅರಿತಿದ್ದ ದ್ರೋಣರು ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆವಲ್ಲಿ ಮಾನಸಿಕ ಸಂಘರ್ಷಕ್ಕೆ ಒಳಗಾಗುವುದು ಅವರ ಉದಾತ್ತ ನಿಲವಿನ ದ್ಯೋತಕ. 'ಪೆಸರಾಸೆ'ಗೆ ಸಿಲುಕಿದ ಅಹಂಕಾರದ ಮೊಟ್ಟೆಯಾದ ಅರ್ಜುನ ಶ್ರೀಮಂತವರ್ಗದ ದರ್ಪದ ಪ್ರತಿನಿಧಿ, ಬೇಡನಿಂದ ಆತನ ಅಹಂಕಾರದ ಕೋಡು ಮುರಿದದ್ದು-ಸಾಧನೆ ಯಾವುದೇ ವರ್ಗದ ಸೊತ್ತಲ್ಲ ಎಂಬುದನ್ನು ಧ್ವನಿಸುತ್ತದೆ. ಇದಕ್ಕೆ ನಿಮಿತ್ತ ಮಾತ್ರ ಘಟಿಸುವ ದುರಂತವೂ ಕೂಡ ಪರಿಣಾಮದಲ್ಲಿ ಶಿಕ್ಷಾರ್ಹವಾಗುತ್ತದೆ ಎಂಬುದನ್ನು ಪ್ರತಿಮಾದೃಷ್ಟಿಯಿಂದ ಬೆರಳ್‌ಗೆ ಕೊರಳ್ ಬಲಿಯಾಗುವ ಮೂಲಕ ದರ್ಶಿಸಿ, ಸನ್ನಿವೇಶಕ್ಕೆ ಹೊಸ ಕಾಣ್ಕೆಯನ್ನು ಕುವೆಂಪು ತುಂಬಿದ್ದಾರೆ.

'ಬಲಿದಾನ' ನಾಟಕ ಭಾರತದ ಸ್ವಾತಂತ್ರ್ಯಪೂರ್ವ (ಭೂತ), ಸ್ವಾತಂತ್ರ್ಯ(ವರ್ತಮಾನ) ಮತ್ತು ಸ್ವಾತಂತ್ರ್ಯೋತ್ತರ (ಭವಿಷ್ಯತ್ತು)ದ ವಿವಿಧ ಸಮಸ್ಯೆಗಳ ಸುತ್ತ ಬೆಳೆಯುತ್ತಾ ಪರಿಣಾಮದಲ್ಲಿ ಪರಿಹಾರವನ್ನು ಸೂಚಿಸುತ್ತದೆ. ನಮ್ಮ ಗುಲಾಮಗಿರಿ ನಮಗೆ ಹೊಸತಲ್ಲ, ಇಂದಿಗೂ ಇರುವಂಥದ್ದು. ಅದರ ವಿರುದ್ಧ ಹೋರಾಡುವ ನಾವು ಬಾಣಲೆಯಿಂದ ಬೆಂಕಿಗೆ ಬೀಳುತ್ತಿದ್ದೇವೆ. ನಿಜವಾದ ಸ್ವಾತಂತ್ರ್ಯದ ಅರ್ಥವೇ ಬೇರೆ ಅದನ್ನು ಸಾಧಿಸಲು ವ್ಯಕ್ತಿಗಿರಬೇಕಾದ ಅರ್ಹತೆಯನ್ನು ಕವಿ ಸರ್ವೋದಯದ ಆಶಯದಲ್ಲಿ ಕಡೆದು ನಿಲ್ಲಿಸುವರು. ಇಲ್ಲಿಯ ಭರತಸುತ 'ಸ್ವಾರ್ಥಮಂ ಕರ್ಮಮಂ ಫಲಬುದ್ಧಿಯಂ ತ್ಯಜಿಸಿ.", "ಮೃತ್ಯು ಅಥವಾ ಸಿದ್ಧಿ"ಗಾಗಿ ಪಣ ತೊಡುವೆನೆಂದು "ಮೃತ್ಯುನಶ್ವರ"ವೆಂದು ಭಾವಿಸುತ್ತೇನೆಂದು ತೆಗೆದುಕೊಂಡ ನಿರ್ಧಾರದಲ್ಲಿ ಇದನ್ನು ಸಾಂಕೇತಿಕವಾಗಿ ನೋಡಬಹುದು. ಭಾರತಾಂಬೆಯ ಆಶಯವೂ ಕೂಡ ಇದೇ ಬಗೆಯದು.

"ಬಾಹ್ಯ ಬಂಧನಗಳಂ ಕಳಲ್ಚಿದಿರಿದಿಟಂ

ಆಂತರದ ಶೃಂಖಲೆಗಳೊಳವು ವಜ್ರೋಪಮಂ"[೮]

ಬ್ರಿಟಿಷರಿಂದ ಭಾರತಾಂಬೆಯನ್ನು ಮುಕ್ತಿಗೊಳಿಸಿದ್ದೇ ಸ್ವಾತಂತ್ರ್ಯವಲ್ಲ, ಮತ ದ್ವೇಷಾದಿ ಆಮಿಷಗಳಿಂದ ಮಾನವ ಹೊರ ಬರುವುದೇ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ.

'ಯಮನ ಸೋಲು' ನಾಟಕದಲ್ಲಿ ಯಮನ ಪಾತ್ರದ ಮೂಲಕ ಧರ್ಮದ ಹುಡುಕಾಟದಲ್ಲಿ ತೊಡಗಿದ ಕವಿ, ಸಾವಿತ್ರಿಯ ಮೂಲಕ ವಿಶ್ವಧರ್ಮವನ್ನು ಆ ಮೂಲಕ ಸರ್ವೋದಯದ ಮೂಲಬಿಂದು ಪ್ರೇಮದ ಮಹತ್ವವನ್ನು ಕಂಡಿರಿಸುತ್ತಾರೆ. ಈ ದಿನ ಪತಿಯ ಸಾವು ಘಟಿಸುತ್ತದೆ ಎಂಬುದು ನಿಶ್ಚಿತವಾದಾಗ ಆಕೆ ಈ ರೀತಿ ಹೇಳುತ್ತಾಳೆ.

ಯಮನ ಪಾಶವು ಕೊರಳೊಳಿರುವುದು

ಅರಿಯದೆಯೆ ಎಷ್ಟು ಜನ ಹಿಗ್ಗುವರು! ಎಷ್ಟು ಜನ

ನುಗ್ಗುವರು ದೀಪಕೋಡುವ ಕ್ರಿಮಿಯಾಳಿನಂತೆ

ಜನತೆಯ ಸ್ವಾರ್ಥ ದೃಷ್ಟಿಯಲ್ಲಿದೆ. ಹುಟ್ಟು-ಸಾವು, ಕಷ್ಟ-ಸುಖ, ನೋವು-ನಲಿವಿನ ತಿರುಗಣೆಯಲ್ಲಿ ನಿರಂತರವಾಗಿ ತಿರುಗುವ ಸಂಸಾರಚಕ್ರ ಯಾವ ಗಳಿಗೆಯಲ್ಲಾದರೂ ತಮ್ಮ ಪಾಲಿಗೆ ನಿಲುಗಡೆಯಾಗಬಹುದೆಂಬ ವಾಸ್ತವತೆಯ ಅರಿವೆ ನಮಗಿಲ್ಲ. ಇರುವ ಅಲ್ಪಾವಧಿಯಲ್ಲಿಯೇ ಸುಖವನ್ನು ದೋಚುವ ಪ್ರಯತ್ನದಲ್ಲಿ ಪಾಪಕರ್ಮದ ಸೆಲೆಯಲ್ಲಿ ಮುಳುಗಿ ಹೋಗುತ್ತಿದ್ದೇವೆಂಬ ಪ್ರಜ್ಞೆಯೂ ನಮಗಿಲ್ಲ ಎಂಬುದಿಲ್ಲಿ ಸ್ಪಷ್ಟವಾಗುತ್ತದೆ. ಪ್ರೇಮಧರ್ಮ ಋತುಧರ್ಮವನ್ನೇ ಗೆಲ್ಲುವಷ್ಟು ಧೀಶಕ್ತಿ ಸಾವಿತ್ರಿಯ "ಪತಿಯಾತ್ಮದರ್ಧಸತಿ"ಯೆಂಬ ಸ್ವಧರ್ಮಕ್ಕಿದೆ. ಹೊರನೋಟಕ್ಕೆ ಅಸಂಭಾವ್ಯವಾಗಿ ತೋರುವ ಘಟನೆಯ ಹಿಂದೆ ಪ್ರೀತಿಯ ಮಹತ್ತ್ವದ ನಿರ್ದೇಶನವಿದೆ. ಮಾನವ ಬದುಕಿನಲ್ಲಿ ಮಾತ್ರವಲ್ಲ ಅತಿಮಾನುಷ ಸ್ತರದಲ್ಲೂ ಅದು ಎಷ್ಟರಮಟ್ಟಿಗೆ ಪಾತ್ರವಹಿಸುತ್ತದೆ ಎಂಬ ಸತ್ಯವಿದೆ. ಆದ್ದರಿಂದಲೇ ಯಮನ ಸೋಲು ನಾಟಕ 'ಅಪಮಾನ', ಕರವೆನಿಸದೆ 'ಕೀರ್ತಿಕರ'ಎನಿಸಿತು. ಬುದ್ಧಿಯರಿಯದ ಎಷ್ಟೋ ತತ್ತ್ವಗಳನಾತ್ಮಸಿದ್ಧಿಯಿಂದರಿತಿಹುದು ಎಂಬ ಕವಿಯ ಹೊಸ ಮಾತಿನಲ್ಲಿ ಹೊಸತತ್ತ್ವವಡಗಿದೆ, ಪ್ರೇಮದ ಚಿರಂತನತೆಯಿದೆ.

"ಮಹಾರಾತ್ರಿ" ನಾಟಕ ಸಿದ್ಧಾರ್ಥ ಬುದ್ಧನಾದ ಸನ್ನಿವೇಶದ ಚಿತ್ರಣದ್ದು. ಈ ಹಿನ್ನೆಲೆಯಲ್ಲಿ ಆತನೊಳಗಾಗುವ ಮಾನಸಿಕ ಸಂಘರ್ಷವನ್ನು "ಎಳವೆಯೊಳಣುವೊಂದು ಬಂಧನದ ಬಲೆಯೊಳಗೆ ಸಿಕ್ಕಿ ಗೋಳಿಡುವಲ್ಲಿ ಪರಿಯಂತ ವಿಮುಕ್ತಿಯಂ ಬಯಸೆನಾ" ಎಂಬ ಮಾತಿನಲ್ಲಿ ವ್ಯಕ್ತಪಡಿಸುವ ಕವಿ, ಅದರಿಂದಲೇ ಮಹತ್ತರ ಕಾರ್ಯವೊಂದರ ಸಿದ್ಧಿಗೆ ಸಿದ್ಧತೆ ಮಾಡುವರು. ಅದನ್ನು ಸಿದ್ಧಾರ್ಥ ಕಾರ್ಯರೂಪಕ್ಕಿಳಿಸುವನು.

"ನಾನೊಬ್ಬ ಸುಖಿಯಾದರೇನಾಯ್ತು ಲೋಕವೇ
ಬೊಬ್ಬಿರಿಯುತಿಹುದಲ್ಲ ಬೆಂದು ಬಡತನದಲ್ಲಿ
ಮೌಢಾಂಧ್ಯಕಾರದೊಳು ಸಿಕ್ಕಿ ದಾರಿಯ ತಪ್ಪಿ
ಕಾಡು ಪಾಲಾಗಿಹಳು ಭಾರತಾಂಬೆ"[8]

ಇಲ್ಲಿ ಸರ್ವೋದಯ ತತ್ತ್ವ ನೇರವಾಗಿ ಪ್ರತಿಫಲಿತವಾಗಿದೆ. "ಸರ್ವಜನ ಸುಖಿನೋಭವಂತು" ಮಂತ್ರದ ಸಾಕಾರವಿದು. ಇಂಥವರಿಂದ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ. ಅದಿಲ್ಲಿ ಸಿದ್ಧಾರ್ಥನ ಜಿತಕಾಮಿತ್ವವನ್ನು ಪರೀಕ್ಷಿಸಿ ಸೋತ ಮಾರನ ಸೊಲ್ಲಿನಲ್ಲಿ ವ್ಯಕ್ತವಾಗಿದೆ.

ಮಾರನೊಡ್ಡುವ ಬಲೆಗೆ ಬೀಳದವರಪರೂಪ
ಒಮ್ಮೆ ತಪ್ಪಿದರು ಮಹಾತ್ಮರೇ ಹೌದು
ಅದರಿಂದ ನೀನೂ ಮಹಾತ್ಮನೇ ಗೌತಮ!

ಧರ್ಮಮೋಕ್ಷವೇ ನೀನು

ಈ ಹೆಗ್ಗಳಿಕೆಯಲ್ಲಿ ಸಿದ್ಧಾರ್ಥನು ವಿಶ್ವಮಾನವನ ಸ್ತರಕ್ಕೇರಿದ್ದಾನೆ. ಒಂದು ವರ್ಗಕ್ಕೆ, ಒಂದು ಧರ್ಮಕ್ಕೆ, ಒಂದು ಕಾಲಕ್ಕೆ, ಒಂದು ದೇಶಕ್ಕಷ್ಟೇ ಸೀಮಿತನಾಗದೆ, ಅವೆಲ್ಲವನ್ನೂ ಮೀರಿ ನಿಂತ ದೈವಸಂಭೂತ ಎನ್ನಬಹುದು.

'ಶ್ಮಶಾನ ಕುರುಕ್ಷೇತ್ರ' ನಾಟಕದಾರಂಭದಲ್ಲಿ ಗತಿಸಿದ ಯುಗಕ್ಕಾಗಿ ದುಃಖಿಸುವ ದ್ವಾಪರನ ಮೂಲಕ ಕವಿ ನಮ್ಮ ಹಿಂದಣ ಬದುಕು, ವೈರತ್ವದಿಂದಾದ ಮಾನವೀಯ ಕೊಲೆ ಸುಲಿಗೆಯನ್ನು ಪ್ರತಿಮಿಸಿದರೆ, ಕಲಿಗೆ ಅಧಿಕಾರ ವಹಿಸುವ ಮೂಲಕ ಹಿಂದಿನ ಜೀವನ ಮಟ್ಟದ ಸ್ತರದಲ್ಲೇ ಮುಂದುವರಿದ ವರ್ತಮಾನದ ಸ್ಥಿತಿಯನ್ನು ದರ್ಶಿಸುತ್ತಾರೆ.

"ಮಾನವರ್ ಕೊಲೆಗೆ ಕೈಯಿಡೆ ಮಾರಿಯನ್ ಮೀರ್ದಪರ್"[೧೦]

"ಮಾನವರ ಮರುಳಾಟಂ ಎಮ್ಮ ಮರುಳ್ತನಮಂ ಗೆಲುವಂತಿರ್ಪುದು"[೧೧]

ಎಂಬ ಮಾತಿನಲ್ಲಿ ನಮ್ಮವರ ಸ್ವಾರ್ಥ ಚಿಂತನೆ, ಸಮಯಸಾಧಕತೆ, ಕ್ರೂರತೆಯನ್ನು ಮರುಳ್‌ಗಳೇ ಛೇಡಿಸುವ ಮೂಲಕ ಅರ್ಥಪೂರ್ಣವಾಗಿ ಧ್ವನಿತವಾಗಿದೆ. ನಾವಿಳಿದಿರುವ ಪಾಪಕೂಪ ಎಷ್ಟು ಆಳವಾದುದು ಎನ್ನುವ ಅರಿವು ಇಲ್ಲಿ ಮೂಡುತ್ತದೆ. ಕೆಲವೊಮ್ಮೆ ಇದು ಸನ್ನಿವೇಶವೇ ಆದರೂ ಮಾನವ ಅದರಿಂದ ಹೊರತಾಗುಳಿಯುವುದಕ್ಕೆ ಸಾಧ್ಯವಿಲ್ಲ. ಕಾರಣ ಜೀವನ ಇಲ್ಲಿ ಮುಗಿಯುವಂಥದ್ದಲ್ಲ, ಜನ್ಮ ಜನ್ಮಾಂತರದವರೆಗೂ ವರ್ಗಾಯಿತವಾಗುವಂಥದ್ದು.

ಸಾವೇ ಹೊಸ ಬಾಳಿಗಾಧಾರಮಾಗಿರ್ಪುದು

ನಾಶವೇ ನವಸೃಷ್ಟಿಗುತ್ಸಾಹಮಾದಪುದು

ಎಂಬ ಕಲ್ಕಿಯ ಮಾತಿನಲ್ಲಿ ಪುನರ್ಜನ್ಮದ ಮೇಲೆ ನಮ್ಮ ಕರ್ಮ ಪರಿಪಾಕ ಬೀರುವ ಪ್ರಭಾವವನ್ನು ಪ್ರಕೃತಿಯ ಚಿರನೂತನ ಸತ್ಯವು ಧ್ವನಿಸುತ್ತದೆ. ಹಾಗಾಗಿ ಆದಷ್ಟು ಮಾನವ ಕರ್ಮದ ವರ್ತುಲಕ್ಕೆ ಸಿಲುಕದೆ, ಮಾನವನಾಗಿ ಬಾಳುವುದನ್ನು ಕಲಿಯಬೇಕು ಎನ್ನುವುದನ್ನು ಧರ್ಮರಾಯ ಅರ್ಥವತ್ತಾಗಿ ಪ್ರತಿರೂಪಿಸುತ್ತಾನೆ.

ಮನುಜರ್ ನರಳುತಿರೆ ಮನುಜರ್ ಸಂತವಿಸೆ

ಮನುಜನ್ ದೇವನ್ ತಾನಾದಪನ್ ಇಲ್ಲದಿರೆ

ಮನುಜನ್ ಧನುಜನ್

ಪಡೆದು ಕೊಡುವರ್ಗೆ ಅದು ಮುಕ್ತಿಗೆ ಮಹಾದ್ವಾರಂ

ಮೇಣ್ ಈಸಿಕೊಂಬರ್ಗೆ ಸ್ವರ್ಗಕ್ಕೆ ಸೋಪಾನಂ

ಈ ಕಾರಣಕ್ಕಾಗಿಯೇ ನಾಟಕದ ಮುಕ್ತಾಯದಲ್ಲಿ ಕವಿ ಕಲಿಯುಗದಲ್ಲಿ ಮಾನವನಿಗಿರುವ

ಪುರಸ್ಕಾರವನ್ನು 'ಸಾಮಾನ್ಯ ಮಾನವ ಸಂಸಾರಂ ಸತಿಪತಿಹರ ಶೃಂಗಾರಂ ಮಕ್ಕಳಾಟಂ ನೋಟಂ' ಮಾತಿನ ಮೂಲಕ ಹೊಸಕಾಣ್ಕೆಯ ರೂಪದಲ್ಲಿ ಸೃಷ್ಟಿಸಿದ್ದಾರೆ.

ಕುವೆಂಪುರವರ 'ಬಿರುಗಾಳಿ' ನಾಟಕ ಬಾಳಿನ ಗುಟ್ಟನ್ನು ಅದರ ಬೆಲೆಯನ್ನು ಅರಿತ ಪರಿಪಕ್ವಾನುಭವದ ಸಮಗ್ರದೃಷ್ಟಿಯ ದ್ಯೋತಕ. ವೈರಕ್ಕೆ ವೈರ ಮದ್ದಲ್ಲ. ಪ್ರೇಮ, ಔದಾರ್ಯ- ಕ್ಷಮೆ ಸಹನೆ ನಿಜವಾದ ಅರ್ಥದಲ್ಲಿ ಮಾನವನನ್ನು ಪುನೀತಗೊಳಿಸುತ್ತವೆ, ವೈರವನ್ನು ಗೆಲ್ಲುತ್ತದೆ, ನರಕವನ್ನು ನಾಕವಾಗಿಸುತ್ತದೆ. ಕಳೆದ ಭಾಗ್ಯದ ಕೊರೆಯನ್ನು ತುಂಬಿಕೊಡುತ್ತದೆ ಎಂಬುದನ್ನು ಭೈರವನಾಯಕನ ಪಾತ್ರದ ಮೂಲಕ ಕವಿ ಪರಿಣಾಮಕಾರಿಯಾಗಿ ಮೂಡಿಸಿದ್ದಾರೆ.

ಎಲ್ಲಕ್ಕುಂ ಮಿಗಿಲು ಮರುಳಾಗಿರ್ದ ನಾವೆಲ್ಲ

ಮರಳಿ ತಿಳಿವನು ಹೊಂದಿ ಮನುಜರಾಗಿಹೆವು

ಎಂದು ಹೇಳಿ ಘಟಿಸಿದ ತಪ್ಪನ್ನು ಒಪ್ಪಿಕೊಂಡು, ಮತ್ತೆ ಅದೇ ಕೃತ್ಯವನ್ನೆಸಗದೆ ತಿದ್ದಿಕೊಂಡು ತಿಳಿವಳಿಕೆಯಿಂದ ವ್ಯವಹರಿಸಬೇಕು ಎಂಬ ಜಾಗೃತಿಯನ್ನು ದಿವ್ಯಸಂದೇಶವನ್ನು ಕೊಡುತ್ತಾರೆ.

ಕುವೆಂಪು ನಾಟಕಗಳನ್ನು ಸಾಹಿತ್ಯ ದೃಷ್ಟಿಯಿಂದ ವಿಶ್ಲೇಷಿಸಿದ ನಂತರ ನಮಗೆ ಕಂಡುಬರುವ ಸಾಹಿತ್ಯಿಕ ಅಂಶಗಳನ್ನು ಈ ರೀತಿ ಪಟ್ಟಿ ಮಾಡಬಹುದು.

೧. ಕುವೆಂಪು ನಾಟಕಗಳು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮತ್ತು ಮಕ್ಕಳ ನಾಟಕಗಳೆಂಬ ವೈವಿಧ್ಯತೆಗಳಿಂದ ಕೂಡಿವೆ.

೨. ಪ್ರತಿಯೊಂದು ನಾಟಕವು ಪ್ರತಿಮಾರೂಪವನ್ನು ಪಡೆದುಕೊಂಡಿವೆ.

೩. ಸಾಮಾನ್ಯವಾಗಿ ಎಲ್ಲಾ ನಾಟಕಗಳೂ ಸರಳ ರಗಳೆಯಲ್ಲಿ ರಚಿತವಾಗಿವೆ.

೪. ಕುವೆಂಪು ಅವರು ಮೂಲತಃ ಕವಿಯಾಗಿರುವುದರಿಂದ ಅವರ ಯಾವುದೇ ನಾಟಕದ ಭಾಷೆ, ಶೈಲಿ, ದರ್ಶನಗಳಲ್ಲಿ ಕವಿ ಹೃದಯದ ಅಚ್ಚು ನಿಚ್ಚಳವಾಗಿ ಮೂಡಿದೆ. ಹೀಗಾಗಿ ಪ್ರತಿಯೊಂದು ನಾಕಟವೂ 'ದೃಶ್ಯಕಾವ್ಯ'ಗಳೇ ಆಗಿವೆ.

೫. ಕುವೆಂಪು ನಾಟಕಗಳಿಗೆ ಬಳಸಿದ ಭಾಷೆ ಸಂಸ್ಕೃತಭೂಯಿಷ್ಠ ಪ್ರೌಢಭಾಷೆ.

೬. ಸಮಕಾಲೀನ ಅಥವಾ ಪುರಾಣಕಾಲೀನ ವಸ್ತುಗಳಲ್ಲಿ ಸಾರ್ವಕಾಲಿಕ ಸತ್ಯವನ್ನು ಧ್ವನಿಸುವುದು ವಿಶೇಷವೆನಿಸಿದೆ.

೭. ಅಧ್ಯಾತ್ಮದ ಸ್ಪರ್ಶ, ವೈಚಾರಿಕ ಪ್ರಖರತೆ ಎಲ್ಲ ನಾಟಕಗಳಲ್ಲಿ ಎದ್ದು ತೋರುತ್ತದೆ.

೮. ಸಾಮಾಜಿಕ, ಸಾಂಸ್ಕೃತಿಕ ಕಾಳಜಿ, ಮಾನವತ್ವದ ಮಿಡಿತ, ವಿಶ್ವಮಾನವ ದೃಷ್ಟಿ ಎಲ್ಲ ನಾಟಕಗಳ ಮುಖ್ಯ ಆಶಯವಾಗಿದೆ.

೯. ಕುವೆಂಪು ನಾಟಕಗಳಲ್ಲಿ ನಿಸರ್ಗ ಚಿತ್ರಣವನ್ನು ಕಾಣಬಹುದು. ಕೆಲವು ಕಡೆ ನಾಟಕದ ಪಾತ್ರವಾಗಿಯೇ ಕಂಡುಬರುವುದನ್ನು ಕಾಣಬಹುದು. (ಕಾಡು, ಮೋಡ....)

೧೦. ಕುವೆಂಪುನಾಟಕಗಳು ರಂಗ ಪ್ರದರ್ಶನದಿಂದಲೂ ಯಶಸ್ವಿಯಾಗಿರುವುದನ್ನು ಕಾಣಬಹುದು.

ಕುವೆಂಪು ಸಾಮಾಜಿಕ ಅನಿಷ್ಟಗಳು, ಪುರೋಹಿತಶಾಹಿಯ ದಬ್ಬಾಳಿಕೆ ಮತ್ತು ಶೂದ್ರ ಶೋಷಣೆಯ ವಿಷಯಗಳಿಗೆ ಆಕೃತಿ ನೀಡಲು ನಾಟಕ ಪ್ರಕಾರವನ್ನು ಪ್ರಧಾನವಾಗಿ ಬಳಸಿಕೊಂಡಂತೆ ತೋರುತ್ತದೆ. "ಸಂಸ್ಕೃತಿ ಸಂಘರ್ಷ"-ಅವರ ಬಹುಪಾಲು ನಾಟಕಗಳಲ್ಲಿ ಕಂಡುಬರುವ ವೈಚಾರಿಕ ಆಕೃತಿ ಪ್ರಧಾನ ಸಂಸ್ಕೃತಿಯ ಪರಿಕಲ್ಪನೆಗಳನ್ನು ಪ್ರಶ್ನಿಸುತ್ತ, ಪರ್ಯಾಯ ಸಾಧ್ಯತೆಗಳತ್ತ ಗಮನ ಸೆಳೆಯಲು ಕುವೆಂಪು ತಮ್ಮ ನಾಟಕಗಳಲ್ಲಿ ಪ್ರಯತ್ನಿಸುತ್ತಾರೆ. ಈ ತಾತ್ವಿಕತೆ ಎಲ್ಲ ನಾಟಕಗಳಲ್ಲಿಯೂ ಏಕರೂಪಿಯಾಗಿಲ್ಲ, ಪರಸ್ಪರ ವಿರೋಧ ಎನ್ನಿಸುವ ಅಂಶಗಳೂ ಇಲ್ಲಿವೆ. ಸೃಜನಶೀಲ ಮನಸ್ಸು ಅಧಿಕಾರ ಕೇಂದ್ರಿತ ಸಂಸ್ಕೃತಿಯನ್ನು ಮುಖಾಮುಖಿಯಾದಾಗ ಎದುರಿಸಬೇಕಾದ ಸವಾಲುಗಳು, ಹೊಂದಾಣಿಕೆಗಳು, ದ್ವಂದ್ವಗಳು-ಇವೆಲ್ಲವೂ ಇಲ್ಲಿವೆ. ಈ ಹಿನ್ನೆಲೆಯಲ್ಲಿಯೇ ಅವರ ಬಹುಪಾಲು ನಾಟಕಗಳಲ್ಲಿ 'ನಗರ'ದಿಂದಾಚೆಗಿನ 'ಪ್ರಕೃತಿ' ಪ್ರಮುಖವಾಗಿ ಚಿತ್ರಿತವಾಗುತ್ತದೆ. 'ಕಾಡು' ಕುವೆಂಪು ನಾಟಕಗಳಲ್ಲಿ ಒಂದು ಪ್ರಧಾನ ಪಾತ್ರ. ಶೂದ್ರತಪಸ್ವಿ, ಬೆರಳ್‌ಗೆ ಕೊರಳ್, ಯಮನ ಸೋಲು, ವಾಲ್ಮೀಕಿಯ ಭಾಗ್ಯ, ಮೋಡಣ್ಣನ ತಮ್ಮ, ನನ್ನ ಗೋಪಾಲ, ಮಹಾರಾತ್ರಿ ಈ ಎಲ್ಲ ನಾಟಕಗಳಲ್ಲಿಯೂ ಕಾಡು ಒಂದು ಪಾತ್ರವಾಗಿದೆ. ಶಿವರುದ್ರಪ್ಪನವರು ಗುರುತಿಸುವಂತೆ ಕುವೆಂಪು 'ಕಾಡಿನ ಕವಿ'. ತಮ್ಮ ಮೊದಲ ಸಂಕಲನ 'ಕೊಳಲು'ವಿನಲ್ಲಿ ಕುವೆಂಪು ಹೇಳುತ್ತಾರೆ.

ಕಾಡಿನ ಕೊಳಲಿದು ಕಾಡ ಕವಿಯು ನಾ

ನಾಡಿನ ಜನರೊಲಿದಾಲಿಪುದು.

'ಕಾಡು-ನಾಡು'-ಕುವೆಂಪು ಸಮಗ್ರ ಸಾಹಿತ್ಯದ ಹಿನ್ನೆಲೆಯಲ್ಲಿ ಕಾಣುವ ಸಂಸ್ಕೃತಿ ಸಂಘರ್ಷದ ಅದ್ಭುತ ರೂಪಕ, ಎರಡು ವಿಭಿನ್ನ ಸಂಸ್ಕೃತಿಗಳ ಪ್ರತೀಕ. ಕುವೆಂಪು ಕಾವ್ಯದಲ್ಲಿ ಕಾಣುವ ಪ್ರಕೃತಿ ಚಿತ್ರಣಕ್ಕೂ, ನಾಟಕಗಳಲ್ಲಿ ಅದು ಚಿತ್ರಿತವಾಗುವ ಸ್ವರೂಪಕ್ಕೂ ಇರುವ ಅಂತರವೂ ಅಧ್ಯಯನಯೋಗ್ಯ. ಕಾವ್ಯದಲ್ಲಿ ಅವರ ಪ್ರಕೃತಿ ದರ್ಶನ ಮೂಲತಃ ಆನಂದದ ನೆಲೆಯಲ್ಲಿ ರೂಪುಗೊಂಡಿದ್ದರೆ, ನಾಟಕಗಳಲ್ಲಿ ಇದು ಸಂಸ್ಕೃತಿಯ ನೆಲೆಯಲ್ಲಿ ಸಂಘರ್ಷಾತ್ಮಕ ರೂಪದಲ್ಲಿ ರಚಿತವಾಗಿರುವುದನ್ನು ಕಾಣಬಹುದು.

ಕುವೆಂಪು ವ್ಯಕ್ತಿತ್ವದಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ, ಅಧ್ಯಾತ್ಮ ಜ್ಯೋತಿಯ ವಿಷಯದಲ್ಲಿ ಅಚಲ ಶ್ರದ್ಧೆ, ವಿಭೂತಿಪೂಜೆಯಲ್ಲಿ ನಿಷ್ಠೆ, ಸಾಹಿತ್ಯದ ಪರಮ ಪ್ರಯೋಜನದಲ್ಲಿ ಪೂರ್ಣವಿಶ್ವಾಸ, ಪ್ರಕೃತಿಯ ಬಹುಮುಖ ವಿನ್ಯಾಸದಲ್ಲಿ ಒಂದು ಆತ್ಮೀಯತೆ, ಭವ್ಯತೆಯ ಅನುಭವದಲ್ಲಿ ಭಕ್ತಿ, ಜೀವನದಲ್ಲಿ ಧರ್ಮದ ಮೂಲಭೂತ ಅಗತ್ಯವನ್ನು ಒಪ್ಪುವ ಮನೋಧರ್ಮ, ಜನತೆಯ ಉದ್ಧಾರಕ್ಕಾಗಿ ಹಂಬಲಿಸುವ ಚೇತನ, ಆತ್ಮಸಾಕ್ಷಾತ್ಕಾರದ ಲಕ್ಷ್ಯ-ಇವೆಲ್ಲಾ ಒಂದು ಸುಂದರ ಪಾಕದಲ್ಲಿ ಸಮರಸವಾಗಿ ಐಕ್ಯಗೊಂಡಿವೆ. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಟಾಗೋರ್, ಶ್ರೀ

ಅರವಿಂದ, ರಮಣ ಮಹರ್ಷಿ, ಗಾಂಧೀಜಿ ಇತ್ಯಾದಿ ಭಾರತೀಯ ಮಹಾತ್ಮರ ವಿಚಾರಗಳಿಂದ ಭಾವಿತವೂ ಪ್ರಭಾವಿತವೂ ಆದ ಈ ಪ್ರಫುಲ್ಲ ವ್ಯಕ್ತಿತ್ವದಲ್ಲಿ ಕೇವಲ ಸಂಪ್ರದಾಯಜಡರ ಅಂಧ ಶ್ರದ್ಧೆ, ಸಂಕುಚಿತ ಅಭಿಮಾನಗಳಿಗೆ ಆಸ್ಪದವಿಲ್ಲದಂತಾಗಿದೆ. ಆಧ್ಯಾತ್ಮಿಕ ಅನುಭವಕ್ಕಾಗಿ ಉಕ್ತವಾಗಿರುವ ವಿವಿಧ ಯೋಗಮಾರ್ಗಗಳಲ್ಲಿ ಕುವೆಂಪು ಅವರಿಗೆ ಅಪರಿಚಿತವಾದುದು ಯಾವುದೂ ಇಲ್ಲ. ತಮ್ಮದೇ ಆದ ರೀತಿಯಿಂದ ಇವುಗಳಲ್ಲಿ ಸಮನ್ವಯವನ್ನು ಕಂಡುಕೊಂಡ ಮೇಲೆ, 'ಕಾವ್ಯದರ್ಶನ'ಕ್ಕೂ 'ಆತ್ಮದರ್ಶನ'ಕ್ಕೂ ಇರುವ ಸಾಮೀಪ್ಯವನ್ನು ಮನಗಂಡು, ತಮ್ಮ ಕವಿ ಸಹಜವಾಣಿಯಿಂದಲೇ 'ಕವಿನಿರ್ಮಿತಿ', 'ರಸ', 'ಅಲಂಕಾರ', 'ಭವ್ಯತೆ', 'ಪ್ರಕೃತಿ ಸೌಂದರ್ಯ'ಮುಂತಾದವುಗಳ ಆಳದಲ್ಲಿ ಹುದುಗಿರುವ ತತ್ತ್ವಗಳನ್ನು ಹೊಸ ಪರಿಯಿಂದ ವಿವರಿಸುವ ಯಶಸ್ಸು ಕುವೆಂಪು ಅವರ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ.

****

ಅಡಿಟಿಪ್ಪಣಿ

೧. ಅನಿಕೇತನ, ಸಂ.ಸಾ.ಶಿ.ಮರುಳಯ್ಯ, ಪುಟ ೬೫೬.

೨. ಅನಿಕೇತನ, ಸಂ.ಸಾ.ಶಿ.ಮರುಳಯ್ಯ, ಪುಟ ೬೫೫.

೩. ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ ಸಾಮಾಜಿಕ ನಿಷ್ಠೆ, ಕೋ. ಚೆನ್ನಬಸಪ್ಪ, ಪುಟ ೮೪.

೪. ಕುವೆಂಪು ಸಮಗ್ರ ನಾಟಕ, ಸಂ.ಕೆ.ಸಿ.ಶಿವಾರೆಡ್ಡಿ, ಪುಟ ೨೨.

೫. ಅದೇ, ಪುಟ ೨೧೨.

೬. ಅದೇ, ಪುಟ ೨೧೩.

೭. ಅದೇ, ಪುಟ ೨೬೦.

೮. ಅದೇ, ಪುಟ ೩೧೨.

೯. ಅದೇ, ಪುಟ ೧೩೧.

೧೦. ಅದೇ, ಪುಟ ೯೧.

೧೧. ಅದೇ, ಪುಟ ೯೧.

ಅಧ್ಯಾಯ-೭

ಉಪಸಂಹಾರ

ಉಪಸಂಹಾರ

ಕುವೆಂಪು ಕನ್ನಡ ನವೋಯದ ಕಾಲದಲ್ಲಿ ಶೂದ್ರ ವರ್ಗದಿಂದ ಬಂದವರಾಗಿದ್ದು ಅನೇಕ ರೀತಿಯ ಸವಾಲುಗಳನ್ನು ಸ್ವೀಕರಿಸುತ್ತಲೇ ಬೆಳೆದಿದ್ದಾರೆ. ಇವರು ಕನ್ನಡದ ಬಹುದೊಡ್ಡ ಸಾಹಿತಿ ಎಂಬುದರಲ್ಲಿ ಸಂಶಯವಿಲ್ಲ. ಕನ್ನಡ ಸಾಹಿತ್ಯದ ನವೋದಯದ ಸಂದರ್ಭದ ಸಾಹಿತ್ಯ ಹಾಗೂ ಒಟ್ಟು ದೇಶದ ಸಾಂಸ್ಕೃತಿಕ ಪರಂಪರೆಯು ಮೇಲು ವರ್ಗದವರ ಹಿಡಿತದಲ್ಲಿತ್ತು. ಮೇಲು ವರ್ಗದಿಂದ ಅನುಭವಿಸುತ್ತಿದ್ದ ಕಿರುಕುಳಗಳನ್ನು ತಪ್ಪಿಸಿಕೊಳ್ಳುವುದಕ್ಕೂ ಹಾಗೂ ಎದುರಿಸುವುದಕ್ಕಾಗಿ ಅವರು ಕಲಿತಿರುವ ವಿದ್ಯೆಗಳನ್ನು ಕಲಿತುಕೊಳ್ಳಬೇಕಾದ ಅನಿವಾರ್ಯತೆ ಇತ್ತು. ಅಷ್ಟೇ ಅಲ್ಲ ಅವರಿಗಿಂತ ಭಿನ್ನವೂ ವಿಶಿಷ್ಟವೂ ಆದ ಅಲೌಕಿಕ ಮಾರ್ಗವನ್ನು ತಿಳಿಯಬೇಕೆಂದು-ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರುಗಳ ತತ್ವಗಳನ್ನು ಆಧ್ಯಾತ್ಮಿಕ ಸಾಧನೆಯ ಮಾರ್ಗವೆಂದು ಸ್ವೀಕರಿಸುವರು. ಕುವೆಂಪು ಶೂದ್ರ ವರ್ಗದಿಂದ ಬಂದಿರುವುದರಿಂದ ಸಾಂಪ್ರದಾಯಿಕವಾಗಿ ಪುರೋಹಿತ ವರ್ಗದವರಿಂದ ಶೂದ್ರರಿಗೆ ಆಗಿರುವ ಅನ್ಯಾಯಗಳನ್ನು ಪ್ರತಿಭಟಿಸುತ್ತಲೇ ಬಂದಿರುವುದನ್ನು ಕಾಣುತ್ತೇವೆ. ಇವರ 'ನೆನಪಿನ ದೋಣಿ'ಯಲ್ಲಿ ಸುಮಾರು ವರ್ಷಗಳ ಹಿಂದಿನಿಂದಲೂ ಮೇಲು ವರ್ಗದ ಶೂದ್ರರೂ ಕೂಡ ಪುರೋಹಿತ ವರ್ಗದವರಿಂದ ಎಷ್ಟರ ಮಟ್ಟಿಗೆ ನೋವನ್ನು ಅನುಭವಿಸುತ್ತಿದ್ದರು ಎಂಬುದನ್ನು ಕಾಣಬಹುದು. ಶೂದ್ರ ವರ್ಗದವರ ಅಭಿಮಾನಕ್ಕೆ ಪುರೋಹಿತ ವರ್ಗದವರಿಂದಾಗುತ್ತಿದ್ದ ಧಕ್ಕೆ ಗಮನಿಸಿರುವ ಕುವೆಂಪು ಶೂದ್ರವರ್ಗದವರು ವಿವಿಧ ಸಾಮಾಜಿಕ ರಂಗಗಳಲ್ಲಿ ಮೇಲುಸ್ತರದಲ್ಲಿ ಕಂಡುಬಂದರೂ 'ಅಪ್ಪ', 'ಅಣ್ಣ' ಇತ್ಯಾದಿ ವಿಶೇಷತೆಗಳಿಂದ ಕರೆದು ತಮಗಿಂತ ದೊಡ್ಡವರು ಎಂದು ತಿಳಿದುಕೊಳ್ಳುವ ಗೋಜಿಗೆ ಹೋಗುತ್ತಿರಲಿಲ್ಲ.

ಕುವೆಂಪು ಬೆಳೆಯುತ್ತಾ ಹೋದಂತೆ ಜನರ ಮೂಢನಂಬಿಕೆಗಳು, ಸಾಮಾಜಿಕ ಅಸಮಾನತೆಗಳು, ಉಳ್ಳವರ ಮತ್ತು ಬಡವರ ನಡುವಣ ಅಂತರಗಳನ್ನು ಹೆಚ್ಚು ಹೆಚ್ಚು ಗುರುತಿಸುತ್ತಾ ಹೋದರು. ಹೀಗಾಗಿ ಅವರ ಲೇಖನಿ ಅವರ ಪ್ರತಿಭೆಯನ್ನು ಸೃಜನಶೀಲ ಸಾಹಿತ್ಯವಾಗಿ ಪರಿವರ್ತಿಸುವ ಕರ್ತವ್ಯವನ್ನು ಮಾಡುವುದರ ಜೊತೆಗೆ ಮೂಢನಂಬಿಕೆಗಳು, ಜಾತೀಯತೆ ಮತ್ತು ಆರ್ಥಿಕ ಅಸಮಾನತೆಗಳ ವಿರುದ್ಧ ದನಿ ಎತ್ತುವಂತೆ ಮಾಡಿತು. ಕುವೆಂಪು ಧೈರ್ಯವಾಗಿ ಈ ಎಲ್ಲವನ್ನೂ ಏಕಕಾಲದಲ್ಲಿ ಕೈಗೊಳ್ಳುವ ಸಾಹಸವನ್ನು ಮಾಡಿದರು. ಇಡೀ ಜಗತ್ತು ಒಂದು ಕುಟುಂಬ, ದೇಶ ದೇಶಗಳ ಜಾತಿ ಜಾತಿಗಳ, ವರ್ಗವರ್ಗಗಳ ನಡುವೆ ಭೇದ ಸಲ್ಲದು-ಜಾತಿ ಎಂಬುದು ಜನ್ಮತಃ ಅಲ್ಲ, ಮಗು ಹುಟ್ಟಿದ ಮೇಲೆ ಅದನ್ನು ತಂದೆ-ತಾಯಿಗಳು ಅದರ ಮೇಲೆ ಹೇರುತ್ತಾರೆ-ಇದು ಅವರ ದೃಢವಾದ ನಂಬಿಕೆಯಾಗಿರುವುದನ್ನುಗಮನಿಸಬಹುದು. ಅವರ 'ವಿಶ್ವಮಾನವ' ಸಂದೇಶದಲ್ಲೂ, ಅನೇಕ ಸಾವಿರ ಪುಟಗಳ ಸಾಹಿತ್ಯ ಸೃಷ್ಟಿಯಲ್ಲೂ ಅವರು ಇದನ್ನು ಸಾರಿ ಸಾರಿ ಹೇಳಿರುವುದನ್ನು ಗಮನಿಸಬಹುದು.

ಅನಕ್ಷರತೆ, ಅಜ್ಞಾನ, ದಾರಿದ್ರ್ಯ, ಮೂಢನಂಬಿಕೆ, ಇತ್ಯಾದಿಗಳಿಂದ ಕೂಡಿದ ಜನಸಮುದಾಯ ಅದರಲ್ಲೂ ಶೂದ್ರ ವರ್ಗದವರಿಂದ ಬಂದ ಮೊಟ್ಟಮೊದಲ ಮುಖ್ಯ ಬರಹಗಾರ ಕುವೆಂಪು. ಕುವೆಂಪು ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಅವರ ಸಾಹಿತ್ಯದ ಒಳನೋಟಗಳೇ ಸಾಕ್ಷಿಯಾಗಿವೆ. ಇಂತಹ

ಅಪ್ರತಿಷ್ಠಿತ ಸಾಮಾಜಿಕ ಸ್ತರದಿಂದ ಬಂದ ಕಾರಣದಿಂದ, ಅವರು ತಮ್ಮ ಸಮಕಾಲೀನ ಹಾಗೂ ಹಿರಿಯ ಬರಹಗಾರರಂತೆ ಯಾವುದೇ ಮತಧರ್ಮಗಳ ಸಿದ್ಧ ಸಂಪ್ರದಾಯಕ್ಕೆ ಸೇರಿದವರಲ್ಲ ಮತ್ತು ಸಿದ್ಧ ಸಂಪ್ರದಾಯದ ಪೂರ್ವ ನಿಯಂತ್ರಣಗಳು ಉಪಾಧಿಗಳೂ ಇಲ್ಲದ ಒಂದು ಮುಕ್ತವೂ ಸ್ವತಂತ್ರ್ಯವೂ ಆದ ಮನಸ್ಥಿತಿಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು. ಜೊತೆಗೆ ತಾವು ಯಾವ ಅಪ್ರತಿಷ್ಠಿತ ಸಾಮಾಜಿಕ ಸ್ತರದಿಂದ ಬಂದರೋ, ಆ ಸ್ತರದ ಮೇಲೆ, ಪ್ರತಿಷ್ಠಿತ ವರ್ಗದವರಿಂದ ನಡೆದ ಹಾಗೂ ನಡೆಯುತ್ತಿದ್ದ ಶೋಷಣೆಗಳೂ, ಹಲ್ಲೆಗಳೂ, ಅವಮಾನಗಳೂ ಆ ಸಮಾಜದ ಒಬ್ಬ ವ್ಯಕ್ತಿಯಾಗಿ ತಮ್ಮ ಅನುಭವವೂ ಆದುದರಿಂದ, ಆ ಮೇಲು ವರ್ಗದವರ ನಡವಳಿಕೆಗಳನ್ನು ಪ್ರತಿಭಟಿಸುತ್ತ ಅವರ ಶೋಷಕ ತಂತ್ರಗಳನ್ನು ಬಯಲಿಗೆಳೆಯುತ್ತ, ಈ ಶೋಷಣೆಯ ಪ್ರತಿನಿಧಿಯಾದ ಪುರೋಹಿತಶಾಹಿಯನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸುತ್ತ ಅವುಗಳೆಲ್ಲದರ ವಿರುದ್ಧವಾಗಿ ಜನಸಮುದಾಯವನ್ನು ಎಚ್ಚರಿಸುವ ವೈಚಾರಿಕತೆಯನ್ನು ನಿರಂತರವಾಗಿ ಪ್ರತಿಪಾದಿಸುತ್ತ ಬಂದಿರುವುದು ಕುವೆಂಪು ಸಾಹಿತ್ಯದ ಮುಖ್ಯ ಲಕ್ಷಣಗಳಲ್ಲಿ ಒಂದಾಗಿದೆ.

ಕುವೆಂಪು ಅವರ ಅನೇಕ ಸಾಮಾಜಿಕ ಕವಿತೆಗಳು ಹಾಗೂ ನಾಟಕಗಳು ಮತ್ತು ಕಾದಂಬರಿಗಳ ಹಲವು ಸಂದರ್ಭಗಳಲ್ಲಿ ಮತ್ತು ಇತರ ವೈಚಾರಿಕ ಬರಹಗಳಲ್ಲಿ ಈ ಅಂಶಗಳನ್ನು ಗುರುತಿಸಬಹುದಾಗಿದೆ. ಹಿಂದಿನ ಅಥವಾ ಇಂದಿನ, ಅಂತರಂಗದ ಅಥವಾ ಬಹಿರಂಗದ ಯಾವ ಸಾಂಪ್ರದಾಯಿಕ ಉಪಾಧಿಗಳಿಗೂ ಬದ್ಧವಾಗದೆ ಒಂದು 'ನಿರಂಕುಶ ಮತಿ'ತ್ವವನ್ನು ಪ್ರತಿಪಾದಿಸಿದವರು ಕುವೆಂಪು, ಈ ದೇಶದ ವರ್ಣ-ವರ್ಗಗಳನ್ನು ಕುರಿತು ಅತ್ಯಂತ ದಿಟ್ಟತನದಿಂದ ಹಾಗೂ ಯಾವುದೇ ಒಡಂಬಡಿಕೆಗಳಿಲ್ಲದೆ ಪ್ರಶ್ನೆ ಮಾಡಿದಂತೆ, ಅವರ ಸಾಮಕಾಲೀನರಾದ ಇತರ ಪ್ರಮುಖ ಬರಹಗಾರರಿಗೆ ಆ ಪ್ರಮಾಣದಲ್ಲಿ ಸಾಧ್ಯವಾಗಲಿಲ್ಲ ಅನ್ನುವುದೇ ಕುವೆಂಪು ಅವರ ವಿಶೇಷತೆಗಳಲ್ಲಿ ಒಂದಾಗಿರುವುದು ಕಂಡುಬರುತ್ತದೆ.

ಜಾತಿ ಪದ್ಧತಿ, ವರ್ಣವ್ಯವಸ್ಥೆ, ಮೂಢನಂಬಿಕೆಗಳು, ಸಾಂಸ್ಥಿಕ ಧರ್ಮದ ಪ್ರತಿನಿಧಿಗಳಾದ ದೇವಸ್ಥಾನಗಳು ಹಾಗೂ ಈ ಎಲ್ಲವನ್ನೂ ಬಂಡವಾಳವನ್ನಾಗಿ ಮಾಡಿಕೊಂಡು ಪುರೋಹಿತಶಾಹಿ ಚಾತುರ್ವರ್ಣ ಇತ್ಯಾದಿಗಳನ್ನು ನಿರ್ದಾಕ್ಷಿಣ್ಯವಾಗಿ ಹಾಗೂ ಉಗ್ರವಾಗಿ ವಿರೋಧಿಸಿದ ಕುವೆಂಪು ಅವರ ವೈಚಾರಿಕತೆಗೆ ಇರುವ ಬಂಡಾಯದ ಮನೋಧರ್ಮ, ಕ್ರಾಂತಿಕಾರಕ ಲಕ್ಷಣ ಬೇರೆ ಯಾರಲ್ಲಿಯೂ ಕಾಣದಿರುವುದನ್ನು ಗಮನಿಸಬಹುದು. ಯಾವ ಒಂದು ಮನಃಸ್ಥಿತಿ ಮೂಲತಃ ಜಡ ಮತ್ತು ಚೇತನ ಎಂಬ ತಾರತಮ್ಯವನ್ನು ಒಪ್ಪುವುದಿಲ್ಲವೋ ಅದು, ಸಾಮಾಜಿಕ ನೆಲೆಯ ತಾರತಮ್ಯಗಳನ್ನು ನಿರಾಕರಿಸುವುದು ಸಹಜವಾಗಿದೆ. ಹೀಗೆ ಕುವೆಂಪು ಪ್ರತಿಪಾದಿಸುವ ಅದ್ವೈತ ಏಕಕಾಲಕ್ಕೆ ಆಧ್ಯಾತ್ಮಿಕವೂ ಹೌದು, ಸಾಮಾಜಿಕವೂ ಹೌದು. ಇದನ್ನು 'ಹೊಸ ಪರಿಭಾಷೆ'ಯಲ್ಲಿ ಘೋಷಿಸಿದ ಗಾಂಧಿಯವರ 'ಸರ್ವೋದಯ' ಎನ್ನುವ ಮಾತು ಕುವೆಂಪು ಅವರಿಗೆ ಪ್ರಿಯವಾದುದು. ಕುವೆಂಪು ಅವರಿಗೆ ಸರ್ವೋದಯ ಎನ್ನುವುದು ಒಂದು ಯುಗ ಮಂತ್ರ. ಆದುದರಿಂದಲೇ ಕುವೆಂಪು ಸರ್ವೋದಯ ವಿರೋಧಿಯಾದ ಚಾತುರ್ವರ್ಣ, ಜಾತಿ ಪದ್ಧತಿ, ದೇವಸ್ಥಾನಗಳು ಹಾಗೂ ಪುರೋಹಿತಶಾಹಿಯನ್ನು ವಿರೋಧಿಸುತ್ತಾ ಗಾಢವಾದ ಮಾನವೀಯ ಕಾಳಜಿಗಳನ್ನು ಪ್ರತಿಪಾದಿಸುವ ಮೂಲಕ ಸಾಂಸ್ಕೃತಿಕವಾಗಿ ಅತ್ಯಂತ ಪ್ರಮುಖರಾಗುತ್ತಾರೆ.

ನಾವು ಈಗಾಗಲೇ ಗಮನಿಸಿರುವಂತೆ ಅವಿಚಾರ, ಮೂಢನಂಬಿಕೆ, ಅವೈಜ್ಞಾನಿಕತೆಯ ತಾಯಿ ಬೇರು ಮತಭ್ರಾಂತಿ, ಮತಮೌಢ್ಯ. ಇವುಗಳ ವಿರುದ್ಧ ಹೋರಾಡಿರುವುದನ್ನು ಪ್ರಮುಖವಾಗಿ ಕುವೆಂಪು ಅವರ ನಾಟಕಗಳಲ್ಲಿ ಕಾಣಬಹುದು. ಕುವೆಂಪು ಅವರೇ ಮತಾಂಧತೆ ಮತ್ತು ಮತ ಭ್ರಾಂತಿಯಿಂದ ಮುಕ್ತರಾಗಿಲ್ಲದಿದ್ದರೆ ಅವರ ಜೀವನ ದೃಷ್ಟಿ ವೈಚಾರಿಕ ದೀಪ್ತಿಯಿಂದ ಪ್ರಜ್ವಲಿಸುತ್ತಿರಲಿಲ್ಲ. ಆದ್ದರಿಂದ ಮತೀಯ ಅಂಧಕಾರದಿಂದ ಮಲಿನವಾದ ಮನದವನು ಕವಿಯೆಂಬ ಹೆಸರಿಗೆ ಅನರ್ಹನೆಂದು, ಅವನು ರಚಿಸಿದ ಕೃತಿ ಸಾಹಿತ್ಯದ ಮೇಲ್ಮಟ್ಟಕ್ಕೆ ಬರುವುದಿಲ್ಲವೆಂಬುದಕ್ಕೆ ಹಲವು ನಿದರ್ಶನಗಳು ನಮ್ಮ ನಡುವೆ ಇವೆ.

ಹಿಂದಿನ ಸಾಹಿತ್ಯದ ಬಹುಭಾಗ ಮತರೋಗದಿಂದ ಅತ್ಯಂತ ಕಲುಷಿತಗೊಂಡು ಹಾನಿಕಾರಕವಾಗಿತ್ತೆಂಬುದನ್ನು ಮರೆಯುವಂತಿಲ್ಲ. ಸಾಹಿತ್ಯದ ರೂಪದಲ್ಲಿ ಅಸಹ್ಯವಾದದ್ದು, ಕೆಟ್ಟದ್ದು ಎಲ್ಲಾ ಸೇರಿಕೊಂಡು ಜನತೆಯನ್ನು ಮೌಢ್ಯ, ದಾಸ್ಯಗಳ ಕೂಪಕ್ಕೆ ನೂಕಿದೆ. ಸಾಹಿತ್ಯದ ಹೆಸರಿನಲ್ಲಿ ಮತಾಂಧ ಕವಿಗಳೆಂದು ಕರೆಯಿಸಿಕೊಂಡಿರುವುದನ್ನು ಕಾಣಬಹುದು. ಕುವೆಂಪು ಜಾತಿ, ಮತ, ಪಂಥದಿಂದ ಮುಕ್ತರಾಗದಿದ್ದರೆ ಅವರು ವೈಚಾರಿಕತೆಯನ್ನು ಕುರಿತು ಮಾತನಾಡಲು ಅನರ್ಹರಾಗುತ್ತಿದ್ದರು. 'ರಸಋಷಿ' ಎಂಬ ಗೌರವಕ್ಕೆ ಅಪಾತ್ರರಾಗುತ್ತಿದ್ದರು. ಅವರು ಪ್ರತಿಪಾದಿಸುವ 'ಆಗು ನೀ ಅನಿಕೇತನ...' ಎಂಬ ವಿಶ್ವಮಾನವ ಸಂದೇಶ ಅವರ ಲೇಖನಿಯಿಂದ ಮೂಡುತ್ತಿರಲಿಲ್ಲ. 'ನೂರು ಮತದ ಹೊಟ್ಟ ತೂರಿ ಎಲ್ಲ ತತ್ತ್ವದೆಲ್ಲೆ ಮೀರಿ ನಿರ್ದಿಗಂತವಾಗಿ ಏರಿ'ದವರಾಗಿದ್ದರಿಂದಲೇ ವೈಚಾರಿಕತೆಯನ್ನು ಕುರಿತು ಸಾರುವ 'ರಸಋಷಿ' ಆದರು. ಕುವೆಂಪುರವರ ಸಾಹಿತ್ಯ ಪ್ರೌಢಿಮೆ ಮತ್ತು ಅವರ ವ್ಯಕ್ತಿತ್ವವು ಅಸಾಧಾರಣವಾದುದು. 'ಯಾವ ಮತದವನಲ್ಲ ಎಲ್ಲ ಮತದವರು....' ಎನ್ನುವ ಹಾಗೆ ಅವರು ಎಲ್ಲಾ ಜಾತಿ ಮತಗಳನ್ನು ಹೇಳುವಾಗ 'ನಾನು ಹಿಂದು ಅಲ್ಲ, ನಾನು ವಿಶ್ವಮಾನವ' ಎಂದು ಘಂಟಾಘೋಷವಾಗಿ ಸಾರಿದರು. ಈ ಮಾತನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಜಾತಿ ಬಿಟ್ಟವನು, ಜಾತಿಗೆಟ್ಟವನು ನಿಜವಾದ ದಿವ್ಯ ಮಾನವ, ವಿಶ್ವಮಾನವ. ಅಂತಹ ವಿಶ್ವಮಾನವನೇ 'ಮಹಾಕವಿ' ಪಟ್ಟಕ್ಕೇರಲು ಅರ್ಹನು. ಈ ದೃಷ್ಟಿಯಲ್ಲಿ ಮಹಾಕವಿ ಆದ 'ಕುಮಾರವ್ಯಾಸ'ನನ್ನು ಬ್ರಾಹ್ಮಣ ಎಂದು ಕರೆಯುವುದು, ಗುರುತಿಸುವುದು ಸರಿಯಲ್ಲ. ಅವನು ಹುಟ್ಟಿನಿಂದ ಬ್ರಾಹ್ಮಣನಾದರೂ ಆ ವರ್ಣದ ಸಂಕುಚಿತ ಭಾವನೆಗಳಿಂದ, ಆಚಾರಗಳಿಂದ ಮುಕ್ತನಾಗಿರುವುದನ್ನು ಕಾಣಬಹುದು.

ಕುವೆಂಪು ಶೂದ್ರ ವರ್ಗದವರು ಅಭಿಮಾನವನ್ನು ಬೆಳೆಸಿಕೊಳ್ಳುವ ಹಂತದಲ್ಲಿ ಪುರೋಹಿತ ವರ್ಗದವರು ಸೃಷ್ಟಿಸಿರುವ ಮಹಾ ಮೋಸದ ಸಾಂಸ್ಕೃತಿಕ ಪರಂಪರೆಯು ಎಷ್ಟರಮಟ್ಟಿಗೆ ಅಡ್ಡಿಯುಂಟುಮಾಡಿದೆ ಎಂಬುದನ್ನು ವಿವರಿಸುವಾಗ ಅತ್ಯಂತ ವೈಜ್ಞಾನಿಕವಾಗಿ ಯೋಚಿಸುತ್ತಾರೆ. ಪುರೋಹಿತ ವರ್ಗ ಎಲ್ಲ ದೇಶಗಳಲ್ಲಿಯೂ, ಎಲ್ಲ ಕಾಲಗಳಲ್ಲಿಯೂ, ಎಲ್ಲ ಮತಗಳಲ್ಲಿಯೂ ಇದೇ ಕೆಲಸ ಮಾಡುತ್ತ ಬಂದಿದೆ. ಹೊಟ್ಟೆ ಹೊರೆದುಕೊಳ್ಳಲು ಬುಡ ಭದ್ರವಿಲ್ಲದ ಮೂಢನಂಬಿಕೆಗಳನ್ನು ಸೃಷ್ಟಿಸಿ, ಅದಕ್ಕೆ ಭಾವಮಯ ವರ್ಣದ ಪೌರಾಣಿಕ ಕಥಾಧಾರಗಳನ್ನು ಕಲ್ಪಿಸಿ, ಶಾಸ್ತ್ರಜ್ಞಾನ ಭ್ರಾಂತಿಯ ಹಗಲು ವೇಷವನ್ನು

ತೊಡಿಸಿ ಶೂದ್ರಾದಿಗಳ ಅಜ್ಞಾನವನ್ನೇ ತಮ್ಮ ಆಧ್ಯಾಯದ ಬಂಡವಾಳವನ್ನಾಗಿ ಮಾಡಿಕೊಂಡು ಅವರ ಗೆಯ್ಮೆಯನ್ನೆಲ್ಲಾ ಸೌಕರ್ಯ ಸೌಖ್ಯಗಳಿಗಾಗಿ ಲೂಟಿ ಹೊಡೆಯುತ್ತಾ ಬರುತ್ತಿದ್ದಾರೆ. ಮಠ, ಗುರು, ಪೂಜೆ, ಹೋಮ, ಯಜ್ಞ ಇತ್ಯಾದಿ ಭದ್ರಕೋಟೆಗಳಲ್ಲಿ ತಮ್ಮ ರಾಕ್ಷಸಾಸ್ಥಾನಗಳನ್ನು ರಚಿಸಿಕೊಂಡು ದಬ್ಬಾಳಿಕೆ ನಡೆಸುತ್ತಿರುವುದನ್ನು ಕುವೆಂಪು ತಮ್ಮ ಸಾಹಿತ್ಯ ಕೃತಿ ಕೈಚಳಕದಿಂದಲೇ ಪುರೋಹಿತ ವರ್ಗವನ್ನು ವಿರೋಧಿಸುವುದನ್ನು ಕಾಣಬಹುದು.

ಕುವೆಂಪು ಮಹತ್ವದ ಆಕಾಂಕ್ಷೆಗಳನ್ನಿಟ್ಟುಕೊಂಡು ಸಾಹಿತ್ಯವನ್ನು ಸೃಷ್ಟಿಸಲು ತೊಡಗಿದ ಐತಿಹಾಸಿಕ ಸಂದರ್ಭದಲ್ಲಿ-ಜನರ ಮೂಢನಂಬಿಕೆ, ಅಜ್ಞಾನ, ದೇವರ ಹೆಸರಿನಲ್ಲಿ ಪುರೋಹಿತವರ್ಗ ನಡೆಸುವ ಶೋಷಣೆ ಎಲ್ಲವೂ ಇವರ ಸಾಹಿತ್ಯಕ್ಕೆ ವಸ್ತುವಾಗುತ್ತವೆ. ಆದರೆ ಇವೆಲ್ಲವನ್ನೂ ಸನಾತನ ಉತ್ತಮವಾದ ಮೌಲ್ಯಗಳ ಆಧಾರದ ಮೇಲೆಯೇ ವಿರೋಧಿಸುತ್ತಾ, ಅಂಥ ಉತ್ತಮ ಸನಾತನ ಮೌಲ್ಯಗಳನ್ನು ಪುನರ್‌ಸೃಷ್ಟಿಸಲು ತೊಡಗುವರು. ದೇವರ ಅಸ್ತಿತ್ವ, ಹುಟ್ಟು-ಮರುಹುಟ್ಟು, ಸಾಧು-ಸಂತರು ಮುಂತಾದವುಗಳ ಬಗ್ಗೆ ಇವರಿಗೆ ಅಪಾರ ಗೌರವವಿದೆ. ಆದರೂ ಇಂಥವುಗಳನ್ನು ತರಾವರಿಯಾಗಿ ಸೃಷ್ಟಿಸಿ ಹೇಳಿ ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ದಳ್ಳಾಳಿಗಳ ಬಗ್ಗೆ ಇವರಿಗೆ ಕ್ರೋಧವಿದೆ. 'ಜಲಗಾರ', 'ಶೂದ್ರ ತಪಸ್ವಿ', ಅಂತಹ ನಾಟಕಗಳನ್ನು ಬರೆದು ಪ್ರಕಟಿಸಲು ಇಂಥವೇ ಆಂತರಂಗಿಕ ಒತ್ತಡಗಳು ಕಾರಣವಾಗಿವೆ. ಇಡಿಯಾಗಿ ಇವರ ಸಾಹಿತ್ಯದಲ್ಲಿ ಇಂತಹ ಪುನರ್‌ಸೃಷ್ಟಿಯ ಕೆಲಸ ಬಹಳವಾಗಿದೆ.

ಕುವೆಂಪು ದೇವರ ಅಸ್ತಿತ್ವವನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುವುದನ್ನು ನೋಡಿದ್ದೇವೆ. ಹಾಗೆಯೇ ಪುರೋಹಿತ ವರ್ಗವನ್ನು ಟೀಕಿಸಿರುವುದನ್ನೂ ಗುರುತಿಸಿದ್ದೇವೆ. ಇಂತಹ ಕಾರಣಕ್ಕಾಗಿಯೇ ಹಲವಾರು ರೀತಿಯ ವ್ಯಾಖ್ಯಾನಗಳು ಕುವೆಂಪು ಅವರ ಬಗ್ಗೆ ಹುಟ್ಟಿಕೊಂಡಿರುತ್ತವೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ, ದೈವದ ಅಸ್ತಿತ್ವವಾಗಲಿ, ಸಾಧು-ಸಂತರ ಸೃಷ್ಟಿಯಾಗಲಿ, ಹುಟ್ಟು-ಮರುಹುಟ್ಟುಗಳ ಬಗ್ಗೆ ಇರುವ ವದಂತಿಯ ನಂಬಿಕೆಗಳಾಗಲಿ ತಮ್ಮಷ್ಟಕ್ಕೆ ತಾವು ಹುಟ್ಟಿಲ್ಲ. ಅವನ್ನು ಆಯಾಯ ಕಾಲದ ಪುರೋಹಿತ ವರ್ಗ ತಮ್ಮ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಸೃಷ್ಟಿಸಿರುವಂತಹುದೇ ಆಗಿರುವುದು. ಹೀಗೆ ಪುರೋಹಿತಶಾಹಿ ಜನಾಂಗ ಸೃಷ್ಟಿಸಿರುವ ಸಂಗತಿಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡು, ಅವರನ್ನು ಖಂಡತುಂಡವಾಗಿ ದೂಷಿಸುವುದು ತಪ್ಪಾಗುವುದು, ಆದ್ದರಿಂದ ನಾವು ಪುರೋಹಿತಶಾಹಿ ವ್ಯವಸ್ಥೆಯನ್ನು ದೂಷಿಸುವ ಸಂದರ್ಭದಲ್ಲಿಯೇ, ಅವರು ತಮ್ಮ ಸ್ವಾರ್ಥ ಸಾಧನೆಗಾಗಿ ಸೃಷ್ಟಿಸಿದ ವಿಚಿತ್ರ ಸಂಗತಿಗಳನ್ನೂ ನಾವು ದೂರೀಕರಿಸಬೇಕಾಗುವುದು. ಇಲ್ಲವಾದರೆ ಪುರೋಹಿತ ವರ್ಗವನ್ನು ಮಾತ್ರ ದೂಷಿಸಿ ಅವರ ವಿಚಿತ್ರ ಸೃಷ್ಟಿಗಳನ್ನು ಒಪ್ಪಿಕೊಂಡರೆ, ನಾವೂ ಮುನ್ನಡೆಯುತ್ತಾ ಪುರೋಹಿತ ವರ್ಗವೇ ಆಗುತ್ತೇವೆಯೇ ಹೊರತು ಬೇರೆಯಾಗಲು ಸಾಧ್ಯವಾಗುವುದಿಲ್ಲ. ಈ ಕಾರಣದಿಂದಾಗಿಯೇ ಕುವೆಂಪು ನವಪುರೋಹಿತ ಜನಾಂಗವನ್ನು ಸೃಷ್ಟಿಸಲು ಸಾಧ್ಯವಾಗುವ ಮನಃಸ್ಥಿತಿ ಹೊಂದಿದವರಾಗುತ್ತಾರೆ.

ಪ್ರಕೃತಿ ತತ್ತ್ವಕ್ಕೆ ಹತ್ತಿರವಾಗಿ ಬದುಕುತ್ತಿರುವ ಮನುಷ್ಯನ ಪೂಜಾ ವಿಧಾನಗಳನ್ನು ತಿರಸ್ಕರಿಸಿದವರು, ಅದೇ ಪುರೋಹಿತ ವರ್ಗ ಸೃಷ್ಟಿಸಿದ ಪೂಜಾ ವಿಧಾನಗಳನ್ನು ಅಪ್ಪಿಕೊಂಡಿರುವುದು ತಿಳಿದುಬರುತ್ತದೆ. ಸಂಪ್ರದಾಯ ಬದ್ಧವಾದ ಪೂಜೆ ಎಂದರೆ, ಶೂದ್ರರದೂ ಪೂಜೆಯೇ; ಪುರೋಹಿತ ವರ್ಗದ ಶಿಷ್ಟಾಚಾರದ ಪೂಜೆಯೂ ಪೂಜೆಯೇ. ಎರಡೂ ಮನಷ್ಯ ಕುಲದ ಪ್ರತಿಗಾಮೀ ತತ್ತ್ವವನ್ನೇ ಪ್ರತಿಪಾದಿಸುತ್ತವೆ. ಪುರೋಹಿತ ವರ್ಗವನ್ನು ತರಾಟೆಗೆ ತೆಗೆದುಕೊಳ್ಳುವ ಇವರು ಸಮಾಜದ ಬದಲಾವಣೆಗಾಗಿ ತುಡಿಯುತ್ತಿದ್ದಾರೆ ಅನ್ನಿಸುತ್ತದೆ. ಆದರೆ ಅದೇ ಇವರ ಸಾಹಿತ್ಯದ ಈ ರೀತಿಯಾಗಿ ಧೋರಣೆಯುಳ್ಳ ಸಂಗತಿಗಳನ್ನು ಅರ್ಥಮಾಡಿಕೊಂಡಾಗ ತಿಳಿಯುವ ಅಂಶವೇ ಬೇರೆ. ಪುರೋಹಿತರ ಎಲ್ಲಾ ವಿಧಾನವನ್ನೂ ತಾವೂ ಕಲಿಯಬೇಕೆಂಬ ಹಂಬಲ ಇಲ್ಲಿದೆ. ಎಲ್ಲಾ ಉನ್ನತ ಸ್ಥಾನದಲ್ಲಿಯೂ ತಾವು ನಿಂತು ಅವರಿಗಿಂತ ಕಡಿಮೆಯಿಲ್ಲ ಎಂಬುದನ್ನು ತೋರಿಸುವ ಕಳಕಳಿ ಇಲ್ಲಿದೆ. ಈ ಎಲ್ಲದರ ಮುಖಾಂತರ ಶೂದ್ರವರ್ಗದ ಜನವನ್ನು ಶೂದ್ರತ್ವದಿಂದ-ಬ್ರಾಹ್ಮಣತ್ವದ ಕಡೆಗೆ ವರ್ಗಾಯಿಸಬೇಕೆಂಬ ಧೋರಣೆ ಇಲ್ಲಿ ಸ್ಪಷ್ಟವಾಗುತ್ತದೆ. ಈ ರೀತಿಯ ವರ್ಗಾವಣೆ ಸಮಾಜದ ಚಾಲನೆಯಲ್ಲ ಎಂಬುದನ್ನು ನಾವು ತಿಳಿಯಬೇಕು. ಇದು ಇತಿಹಾಸದ ಪುನರಾವರ್ತನೆಯೇ ಹೊರತು ಪುನರ್‌ಸೃಷ್ಟಿಯಲ್ಲ.

ಮತ ನಮ್ಮ ಮತಿಗೆ ಒಡ್ಡಿದ ಬಹು ದೊಡ್ಡ ಅಂಕುಶವಾಗಿದೆ ಎಂಬುದನ್ನು ಮೊದಲು ಎತ್ತಿ ಹೇಳುತ್ತಾರೆ. ಮತ-ಧರ್ಮಗಳ ವಿಚಾರದಲ್ಲಿ ಕುವೆಂಪು ಅವರದು ಒಂದು ವಿಶಿಷ್ಟವಾದ ವೈಚಾರಿಕ ನಿಲವು. ಮತದ ಧಾರ್ಮಿಕ ತಿರುಳನ್ನು ತಿಪ್ಪೆಗೆಸೆದು ಜಾತೀಯತೆಯ ಮೌಢ್ಯ-ಆಚಾರಗಳ ಒಣಸಿಪ್ಪೆಯನ್ನುಮಾತ್ರ ಅಗಿಯುತ್ತಿರುವುದನ್ನೂ ಅದರಿಂದಾಗುವ ದುಷ್ಪರಿಣಾಮಗಳನ್ನೂ ಎತ್ತಿ ಹೇಳುತ್ತಾರೆ. ಸರ್ವಮತಗಳಿಗಿಂತಲೂ ಮಹೋನ್ನತವಾದ ಸನ್ಮತಿಯ ಮತವನ್ನೇ ಎತ್ತಿ ಹಿಡಿದು ಆ ಮತಿದೀವಿಗೆಯ ಬೆಳಕಿನಲ್ಲಿ ನಡೆಯಬೇಕೆಂಬುದನ್ನು ಮನದಟ್ಟು ಮಾಡಿಕೊಡುತ್ತಾರೆ. ಅದಕ್ಕಾಗಿಯೇ ಯುವಕರೆಲ್ಲರೂ ನಿರಂಕುಶಮತಿಗಳಾಗಬೇಕೆಂಬ ಕರೆ ಕೊಡುತ್ತಾರೆ.

ಪುರೋಹಿತಶಾಹಿಯ ಮೇಲುಕೀಳಿನ ಆಡಂಬರದ ಆಚರಣೆ ಹೋಗಬೇಕಾದರೆ ಅದಕ್ಕೆ ಕುವೆಂಪು ಅವರು ಸೂಚಿಸುವ ಮಾರ್ಗ ಹಿಂಸೆಯ ಮಾರ್ಗವಲ್ಲ, ದ್ವೇಷದ ಮಾರ್ಗವಲ್ಲ, ಕೊನೆಗೆ ಪ್ರತಿಭಟನೆಯ ಮಾರ್ಗವೂ ಅಲ್ಲ. ಜನ ಎಚ್ಚೆತ್ತುಕೊಂಡು ಅವರೊಡನೆ ಸಹಕರಿಸದೆ ಇರುವ ವಿಚಾರ ಮಾರ್ಗ. ಜನಸಾಮಾನ್ಯರ ಮನಸ್ಸನ್ನು ನಮ್ಮ ಲೇಖಕರು ತಿದ್ದಿ ತಿರುಗಿಸಿದರೆ ಅದು ತನ್ನಷ್ಟಕ್ಕೆ ತಾನೇ ಒಣಗಿ ಹೋಗುತ್ತದೆ. ಬಹುಸಂಖ್ಯಾತ ಶೂದ್ರ ಶಕ್ತಿ ಎಚ್ಚರಗೊಂಡು ಅವರ ಅಡ್ಡಪಲ್ಲಕ್ಕಿ ಹೊರುವುದನ್ನು, ಅವರ ಚಿನ್ನದ ಸಿಂಹಾಸನಕ್ಕೆ ಅಡ್ಡ ಬೀಳುವುದನ್ನು, ತೀರ್ಥ ತೆಗೆದುಕೊಳ್ಳುವುದನ್ನು ಬಿಟ್ಟರೆ ಪುರೋಹಿತಶಾಹಿಯ ಆಟ ತನ್ನಷ್ಟಕ್ಕೆ ತಾನೇ ನಿಂತು ಹೋಗುತ್ತದೆ.

ಮನುಶಾಸ್ತ್ರ ಹೇಳುವುದನ್ನು ಆಚೆಗೆ ತಳ್ಳಿ ನಮ್ಮ ಮನ ಏನು ಹೇಳುತ್ತದೆ ಎಂಬುದಕ್ಕೆ ಕಿವಿಗೊಡಬೇಕೆಂದು ಹೇಳುತ್ತಾ ಬಹಳ ಹಿಂದೆಯೇ ಬರೆದಿದ್ದ ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು? ಎನ್ನುವ ಕವನವನ್ನು ಸ್ಮರಿಸಿಕೊಂಡರೆ ಅವರ ಈ ವೈಚಾರಿಕ ವಿವೇಚನೆಯ ಅನೇಕ ಮುಖಗಳು

ಅನಾವರಣವಾಗುತ್ತದೆ. 'ಜಲಗಾರ', 'ಶೂದ್ರ ತಪಸ್ವಿ', 'ಬೆರಳ್‌ಗೆ ಕೊರಳ್' ನಾಟಕಗಳಲ್ಲಿ, ಕಾದಂಬರಿಗಳಲ್ಲಿ, ಕೆಲವು ಸಣ್ಣಕತೆಗಳಲ್ಲಿ, ಅನೇಕ ಕವನಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಇದು ರೂಪುಗೊಂಡಿರುವುದನ್ನು ಕಾಣಬಹುದು.

ನಮ್ಮ ದೇಶದಲ್ಲಿ ಬಹುಮತಗಳಿವೆ. ಅನೇಕ ಆಚಾರ ಮುಂತಾದ ಅನೇಕ ಭೇದಗಳಿವೆ. ಆದರೆ "ನಮ್ಮ ರಾಷ್ಟ್ರಜೀವನ ತನ್ನ ಏಕತ್ವವನ್ನು ರಕ್ಷಿಸಿಕೊಂಡು ಹೋಗಬೇಕಾದರೆ ವಿಜ್ಞಾನ ದೃಷ್ಟಿಯ ಮತ್ತು ವಿಚಾರ ಬುದ್ಧಿಯ ಆಧಾರದ ಮೇಲೆ ನಿಲ್ಲುವ ಮನುಜಮತಕ್ಕೂ ಮತ್ತು ವಿಶ್ವಪಥಕ್ಕೂ ನಮ್ಮ ಜನವನ್ನು ತಿರುಗಿಸುವುದು ಅವಶ್ಯಕ" ಎಂಬ ಸತ್ಯವನ್ನು ಕುವೆಂಪು ಅವರು ಕಂಡುಕೊಂಡಿರುವುದನ್ನು ಗುರುತಿಸಬಹುದು. ಕುವೆಂಪು ಕನ್ನಡ ಭಾಂಧವರನ್ನು ವಿಶ್ವಪಥಕ್ಕೆ ಕರೆದ ಪರಿಯನ್ನು ಈ ಕವನದಲ್ಲಿ ಕಾಣಬಹುದು-

"ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ

ಮತಿಯಿಂದ ದುಡಿಯಿರೈ ಲೋಕಹಿತಕೆ

ಆ ಮತದ ಈ ಮತದ ಹಳೆಮತದ ಸಹವಾಸ

ಸಾಕಿನ್ನು ಸೇರಿರೈ ಮನುಜ ಮತಕೆ

ಓ ಬನ್ನಿ! ಸೋದರರೆ ವಿಶ್ವಪಥಕೆ!"

ಈ ಮನುಜಮತ, ವಿಶ್ವಪಥ, ವಿಜ್ಞಾನ ದೃಷ್ಟಿ, ವಿಚಾರ ಬುದ್ಧಿಗಳು ನಮ್ಮ ಜನ ಹೃದಯದ ನಿತ್ಯ ಮಂತ್ರಗಳಾಗಬೇಕೆಂದು ಕುವೆಂಪು ಜಪಿಸುತ್ತಾರೆ.

****

ಗ್ರಂಥಋಣ

ಪರಾಮರ್ಶನ ಗ್ರಂಥಗಳು

೧. ಅನಿಕೇತನ - ಸಂ.ಡಾ.ಸಾ.ಶಿ.ಮರುಳಯ್ಯ, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೨೦೦೫.

೨. ಅಮೃತ ಮತ್ತು ಗರುಡ - ಡಿ.ಆರ್.ನಾಗರಾಜ, ಅಕ್ಷರ ಪ್ರಕಾಶನ, ಸಾಗರ, ೨೦೦೩.

೩. ಆಧುನಿಕ ಕನ್ನಡ ನಾಟಕ - ಕೆ.ಮರುಳ ಸಿದ್ದಪ್ಪ

೪. ಕುವೆಂಪು ಅವರ ನಾಟಕಗಳು - ಡಾ.ಎಚ್.ತಿಪ್ಪೇರುದ್ರಸ್ವಾಮಿ,ಮೈಸೂರು ಪ್ರಿಂಟಿಗ್ ಅಂಡ್ ಪಬ್ಲಿಷಿಂಗ್ ಹೌಸ್, ೧೯೯೯.

೫. ಕುವೆಂಪು ಕೃತಿ ವಿಮರ್ಶೆ - ಸಂ.ಪ್ರೊ.ಅರವಿಂದ ಮಾಲಗತ್ತಿ,ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೬.

೬. ಕುವೆಂಪು ದರ್ಶನ - ಸಂ.ಡಾ.ಆರ್.ಕೇಶವ್, ಸಂಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೪.

೭. ಕುವೆಂಪು ನಾಟಕಗಳ ಒಂದು ಅಧ್ಯಯನ - ನರಹಳ್ಳಿ ಬಾಲಸುಬ್ರಹ್ಮಣ್ಯಂ, ಅಂಕಿತ ಪ್ರಕಾಶನ, ಅಧ್ಯಯನ, ಬೆಂಗಳೂರು, ೨೦೦೨.

೮. ಕುವೆಂಪು ನಾಟಕಗಳು ಗುರು- ಗುರಿ - ಡಾ.ಎನ್.ಸುಶೀಲ, ಮುದ್ದುಶ್ರೀ ಗ್ರಂಥಮಾಲೆ, ಬೆಂಗಳೂರು, ೨೦೦೨.

೯. ಕುವೆಂಪು ನಾಟಕ ಸಮೀಕ್ಷೆ - ಸಂ.ಎಂ.ಸಿ.ವಸಂತಕುಮಾರ್, ಸುರುಚಿ ಪ್ರಕಾಶನ, ಮೈಸೂರು, ೧೯೭೨.

೧೦. ಕುವೆಂಪು ಪುನರ್ಮನನ - ಸಂ.ಪ್ರೊ.ಕೆ.ಭೈರಪ್ಪ, ಅರವಿಂದ ಮಾಲಗತ್ತಿ ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ೨೦೦೪

೧೧. ಕುವೆಂಪು ಪುನರಾಲೋಕನ - ಜಿ.ಎಸ್.ಶಿವರುದ್ರಪ್ಪ, ಅಂಕಿತ ಪ್ರಕಾಶನ, ಬೆಂಗಳೂರು, ೨೦೦೫.

೧೨. ಕುವೆಂಪು ಸಾಹಿತ್ಯದ ಕೆಲವು ಅಧ್ಯಯನಗಳು - ದೇಜಗೌ

೧೩. ಕುವೆಂಪು ಸಾಹಿತ್ಯದ ಕೆಲವು ಆಯಾಮಗಳು - ಜಿ.ಜಿ.ಮಂಜುನಾಥನ್, ಸಹ್ಯಾದ್ರಿ ಪ್ರಕಾಶನ

೧೪. ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ, ಸಾಮಾಜಿಕ ನಿಷ್ಠೆ - ಕೋ.ಚೆನ್ನಬಸಪ್ಪ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೫. ಕುವೆಂಪು ಸಾಹಿತ್ಯ ಮತ್ತು ವಿಚಾರ - ಶಿವರಾಮು ಕಾಡನಕುಪ್ಪೆ, ಸಹ್ಯಾದ್ರಿ ಪ್ರಕಾಶನ, ೧೯೮೮

೧೬. ಕೋಗಿಲೆ ಮತ್ತು ಸೋವಿಯಟ್ ರಷ್ಯಾ - ಕುವೆಂಪು, ೧೯೪೪.

೧೭. ನೆನಪಿನ ದೋಣಿಯಲ್ಲಿ - ಕುವೆಂಪು, ಸಹ್ಯಾದ್ರಿ ಪ್ರಕಾಶನ, ೧೯೮೦.

೧೮. ಬದಲಾವಣೆ - ಭಗವಾನ್, ಮಹಿಮ ಪ್ರಕಾಶನ, ಮೈಸೂರು, ೧೯೮೨

೧೯. ಬಸವ ದರ್ಶನ - ದೇಜಗೌ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೪.

೨೦. ವಿಚಾರ ಕ್ರಾಂತಿಗೆ ಆಹ್ವಾನ - ಕುವೆಂಪು,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯.

೨೧. ಸಮಗ್ರ ಗದ್ಯ - ಸಂ.ಡಾ.ಕೆ.ಸಿ.ಶಿವಾರೆಡ್ಡಿ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೨೨. ಸಹ್ಯಾದ್ರಿ - ಸಂ.ದೇಜಗೌ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ೨೦೦೪.

೨೩.ಸಹ್ಯಾದ್ರಿಯ ಸೂರ್ಯ - ಸಂ.ಡಾ.ಚಕ್ಕೆರೆ ಶಿವಶಂಕರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪.

೨೪. ಶೂದ್ರ ತಪಸ್ವಿ - ಕುವೆಂಪು, ಉದಯರವಿ ಪ್ರಕಾಶನ, ಮೈಸೂರು, ೨೦೦೪.

೨೫. ಬೆರಳ್‌ಗೆ ಕೊರಳ್ - ಕುವೆಂಪು, ಉದಯರವಿ ಪ್ರಕಾಶನ, ಮೈಸೂರು, ೨೦೦೪.